

# ಎಸ್.ಎಸ್.ಎಲ್.ಸಿ. ಸಮಾಜವಿಜ್ಞಾನ

## ಪರೀಕ್ಷಾ ಮಾರ್ಗದರ್ಶಿ

# ಟಾರ್ಗೇಟ್ 40

ರಚನೆ

ಶ್ರೀ ಶರಣಬಸಪ್ಪ ಗುಡೂರು

ಸಹ ಶಿಕ್ಷಕರು

ಸರ್ಕಾರಿ ಪ್ರೌಢಶಾಲೆ ಗುಂಡ

ಸಿಂಧನೂರು ತಾ।। ರಾಯಚೂರು ಜಿ।।

ಇದು ಎಸ್.ಎಸ್. ಎಸ್.ಟಿ.ಎಫ್ ಡಿಜಿಟಲ್ ಗ್ರೂಪಿನ ಕೊಡುಗೆ

# ಪರಿವಿಡಿ

| ಕ್ರ ಸಂ | ಅಧ್ಯಾಯ | ನಿರೀಕ್ಷಿತ ಅಂಕಗಳು |
|---|---|---|
| 1 | ಭಾರತಕ್ಕೆ ಯುರೋಪಿಯನ್ನರ ಆಗಮನ | 2 ಅಂಕಗಳು |
| 2 | ಜನಪದ ಚರಿತ್ರೆ | 1 ಅಂಕ |
| 3 | ಬ್ರಿಟಿಷ್ ಆಡಳಿತದ ಬುನಾದಿ ಹಾಗೂ ಅದರ ಪರಿಣಾಮಗಳು | 1 ಅಂಕ |
| 4 | ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳು | 2 ಅಂಕಗಳು |
| 5 | ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ | 3 ಅಂಕಗಳು |
| 6 | ಸ್ವಾತಂತ್ರ್ಯೋತ್ತರ ಭಾರತ | 2 ಅಂಕಗಳು |
| 7 | 20ನೇ ಶತಮಾನದ ರಾಜಕೀಯ ಆಯಾಮಗಳು | 3 ಅಂಕಗಳು |
| 8 | ಭಾರತದ ಸಮಸ್ಯೆಗಳು ಹಾಗೂ ಅವುಗಳ ಪರಿಹಾರೋಪಾಯಗಳು | 3 ಅಂಕಗಳು |
| 9 | ಅನ್ಯ ರಾಷ್ಟ್ರಗಳೊಂದಿಗೆ ಭಾರತದ ಸಂಬಂಧ | 3 ರಿಂದ 4 ಅಂಕಗಳು |
| 10 | ಸಾಮಾಜಿಕ ಸ್ತರ ವಿನ್ಯಾಸ | |
| 11 | ದುಡಿಮೆ ಮತ್ತು ಆರ್ಥಿಕ ಜೀವನ | 4 ಅಂಕಗಳು |
| 12 | ಸಾಮೂಹಿಕ ವರ್ತನೆ ಮತ್ತು ಪ್ರತಿಭಟನೆಗಳು | 2 ಅಂಕಗಳು |
| 13 | ಸಾಮಾಜಿಕ ಸಮಸ್ಯೆಗಳು | 2 ಅಂಕಗಳು |
| 14 | ಭಾರತದ ಪ್ರಾಕೃತಿಕ ಲಕ್ಷಣಗಳು | 2 ಅಂಕಗಳು |
| 15 | ಭಾರತದ ಮಣ್ಣುಗಳು | 2 ಅಂಕಗಳು |
| 16 | ಭಾರತದ ಅರಣ್ಯಗಳು | 2 ಅಂಕಗಳು |
| 17 | ಭಾರತದ ಭೂಬಳಕೆ ಮತ್ತು ವ್ಯವಸಾಯ | 2 ಅಂಕಗಳು |
| 18 | ಖನಿಜ ಮತ್ತು ಶಕ್ತಿ ಸಂಪನ್ಮೂಲಗಳು | 2 ಅಂಕಗಳು |
| 19 | ಭಾರತದ ಭೂ ಸಾರಿಗೆ | 3 ರಿಂದ 4 ಅಂಕಗಳು |
| 20 | ನೈಸರ್ಗಿಕ ವಿನಾಶಕಾರಕಗಳು | 2 ಅಂಕಗಳು |
| 21 | ಗ್ರಾಮೀಣಾಭಿವೃದ್ಧಿ | 3 ರಿಂದ 4 ಅಂಕಗಳು |
| 22 | ಬ್ಯಾಂಕು ವ್ಯವಹಾರಗಳು | 3 ರಿಂದ 4 ಅಂಕಗಳು |

ಇದು ಎಸ್ ಎಸ್ ಟಿ ಎಫ್ ಡಿಜಿಟಲ್ ಗ್ರೂಪ್ ನ ಕೊಡುಗೆ

## ಇತಿಹಾಸ – ಅಧ್ಯಾಯ 1. ಭಾರತಕ್ಕೆ ಯುರೋಪಿಯನ್ನರ ಆಗಮನ

**ಪ್ರಶ್ನೆ 1] ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1. 17ನೇ ಶತಮಾನದವರಗೆ ಅರಬಿಯನ್ ಸಮುದ್ರದ ಮೇಲೆ ವ್ಯಾಪಾರಿ ಏಕಸ್ವಾಮ್ಯತೆಯನ್ನು ಹೊಂದಿದವರು– **ಪೋರ್ಚಗೀಸರು**
2. ಫ್ರೆಂಚರ ಅವನತಿಗೆ ಕಾರಣವಾದ ಕದನ – **ವಾಂಡಿವಾಷ್ ಕದನ**
3. ಪ್ರೆಂಚರನ್ನು ವಾಂಡಿವಾಷ್ ಕದನದಲ್ಲಿ ಸಂಪೂರ್ಣವಾಗಿ ಸೋಲಿಸಿದ ಇಂಗ್ಲೀಷ್ ಸೇನಾಧಿಕಾರಿ – **ಸರ್ ಐರ್‌ಕೂಟ**
4. ಪ್ಲಾಸಿಕದನದಲ್ಲಿ ಇಂಗ್ಲೀಷ್ ಸೇನೆಯ ನೇತೃತ್ವವಹಿಸಿದ್ದವನು –**ರಾಬರ್ಟಕ್ಲೈವ್**
5. ಬಂಗಾಳದಲ್ಲಿ ದ್ವಿ–ಸರಕಾರವನ್ನು ಜಾರಿಗೆ ತಂದವನು – **ರಾಬರ್ಟಕ್ಲೈವ್**
6. ಭಾರತಕ್ಕೆ ಹೊಸ ಜಲಮಾರ್ಗ ಕಂಡುಹಿಡಿದ ಪೋರ್ಚುಗೀಸ್ ನಾವಿಕ – **ವಾಸ್ಕೋಡಿಗಾಮ**
7. ವಾಸ್ಕೋಡಿಗಾಮ ಭಾರತದ <u>ಕಲ್ಲಿಕೋಟೆ</u>ಗೆ ಮೊದಲು ಬಂದು ತಲುಪಿದ್ದು ಕ್ರಿಶ ______ ರಲ್ಲಿ. – **ಕ್ರಿ ಶ 1498**
8. ಕಲ್ಕತ್ತಾ ಸಮೀಪದ ಕೆಲವು ಹಳ್ಳಿಗಳನ್ನು ಬ್ರಿಟಿಷರಿಗೆ ದತ್ತಿಯಾಗಿ ನೀಡಿದ ಮೊಘಲ್ ಚಕ್ರವರ್ತಿ – **ಫರೂಕ್ ಸಿಯಾರ**
9. ಮೊದಲ ಕರ್ನಾಟಿಕ್ ಯುದ್ದದ ಸಂದರ್ಭದಲ್ಲಿ ಇದ್ದ ಕರ್ನಾಟಿಕ್‌ದ ನವಾಬ – **ಅನ್ವರುದ್ದೀನ್**
10. ಕರ್ನಾಟಿಕ್ ಯದ್ಧಗಳ ಸಂದರ್ಭಗಳಲ್ಲಿ ಫ್ರೆಂಚರ ನಾಯಕತ್ವವನ್ನು ವಹಿಸಿದವನು – **ಡುಪ್ಲೆ**
11. ಸಿರಾಜುದ್ದೌಲನ ನಂತರ ಅಥವಾ ಪ್ಲಾಸಿ ಕದನದ ನಂತರ ಬಂಗಾಳದ ನವಾಬನಾದವನು – **ಮೀರ್‌ಜಾಫರ್**
12. ಮೀರ್ ಕಾಸಿಂನ ತ್ರಿಮೈತ್ರಿ ಕೂಟದಲ್ಲಿದ್ದ ಔದ್‌ನ ನವಾಬ.–**ಷೂಜ್ ಉದ್ದೌಲ**
13. ಬಕ್ಸಾರ ಕದನ ನಡೆದ ವರ್ಷ – **ಕ್ರಿ ಶ 1764**
14. ಮೆಡಿಟರೇನಿಯನ್ ಹಾಗೂ ಯುರೋಪಿನ ವ್ಯಾಪಾರವು ಈ ದೇಶದ ಏಕಸ್ವಾಮ್ಯತೆಗೆ ಒಳಪಟ್ಟಿತ್ತು – **ಇಟಲಿ**
15. ಸಿರಾಜ್–ಉದ್–ದೌಲ್‌ನು ಈ ಪ್ರಾಂತ್ಯದ ನವಾಬನಾಗಿದ್ದನು. – **ಬಂಗಾಳ**
16. ಬಂಗಾಲ ಪ್ರಾಂತ್ಯದಲ್ಲಿ ಬ್ರಿಟಿಷರಿಗೆ ದಿವಾನಿ ಹಕ್ಕನ್ನು ನೀಡಿದವರು. – **ಷಾ ಆಲಂ**
17. ಕರ್ನಾಟಿಕ್ ಯುದ್ಧಗಳು ಇವರ ನಡುವೆ ನಡೆದವು. – **ಬ್ರಿಟಿಷರು & ಫ್ರೆಂಚರು**
18. ಹೊಸ ಭೂಪ್ರದೇಶಗಳನ್ನು ಅನ್ವೇಷಿಸಲು ಅಥವಾ ಸಮುದ್ರಯಾನಕ್ಕೆ ಪ್ರೋತ್ಸಾಹ ನೀಡಿದ ರಾಷ್ಟ್ರಗಳು.–**ಸ್ಪೇನ್ & ಪೋರ್ಚಗಲ್**
19. ಮಧ್ಯಯುಗದಲ್ಲಿ ಭಾರತದ ಸಾಂಭಾರ ಪದಾರ್ಥಗಳು ಹೆಚ್ಚಾಗಿ ರಫ್ತಾಗುತ್ತಿದ್ದ ಯುರೋಪಿನ ಸಾಮ್ರಾಜ್ಯಗಳು – **ಗ್ರೀಕ್ & ರೋಮ್**
20. ಪಶ್ಚಿಮ ಯುರೋಪಿನ ರಾಷ್ಟ್ರಗಳು ಪರ್ಯಾಯ ವ್ಯಾಪಾರ ಮಾರ್ಗವನ್ನು ಹುಡುಕಲು ಪ್ರಯತ್ನಿಸಿದವು. ಏಕೆಂದರೆ – **ಇಟಲಿಯ ಏಕಸ್ವಾಮ್ಯವನ್ನು ಮುರಿಯಲು.**
21. ಬ್ರಿಟಿಷರು ಭಾರತದಲ್ಲಿ ವಶಪಡಿಸಿಕೊಂಡ ಮೊದಲ ಪ್ರಾಂತ್ಯ. – **ಬಂಗಾಳ**
22. ಭಾರತದಲ್ಲಿ ಅಧಿಪತ್ಯ ಸ್ಥಾಪಿಸಲು ದೇಶಿಯ ಸಂಸ್ಥಾನಗಳ ರಾಜಕೀಯದಲ್ಲಿ ಹಸ್ತಕ್ಷೇಪ ಮಾಡಿದವರು.– **ಬ್ರಿಟಿಷರು & ಫ್ರೆಂಚರು**

**ಪ್ರಶ್ನೆ 2] ಒಂದು ವಾಕ್ಯದಲ್ಲಿ ಉತ್ತರಿಸಿ.**

**1. ಯುರೋಪಿನಲ್ಲಿ ಭಾರತದ ಯಾವ ವಸ್ತುಗಳಿಗೆ ಹೆಚ್ಚಿನ ಬೇಡಿಕೆ ಇದ್ದಿತು?**
**ಉತ್ತರ :** ಭಾರತದ ಸಾಂಬಾರ ಪದಾರ್ಥಗಳಾದ ಮೆಣಸು, ದಾಲ್ಚಿನ್ನಿ, ಏಲಕ್ಕಿ, ಶುಂಠಿ ಇತ್ಯಾದಿ ವಸ್ತುಗಳಿಗೆ ಯುರೋಪಿನ ಜನರಿಂದ ಯಥೇಚ್ಛ ಬೇಡಿಕೆ ಇತ್ತು.

**2. ಮೀರ್‌ಕಾಸಿಮನನ್ನು ಬಂಗಾಳದ ನವಾಬನನ್ನಾಗಿ ಮಾಡಿದ್ದರಿಂದ ಅವನು ಬ್ರಿಟಿಷರಿಗೆ ಬಳುವಳಿಯಾಗಿ ನೀಡಿದ ಪ್ರದೇಶಗಳಾವವು?**
ಉತ್ತರ : ಬರ್ದವಾನ್, ಮಿಡ್ನಾಪುರ ಮತ್ತು ಚಿತ್ತಗಾಂಗ್

**3. ಪ್ಲಾಸಿ ಕದನವು ಯಾವಾಗ, ಯಾರ ಯಾರ ನಡುವೆ ನಡೆಯಿತು?**
ಉತ್ತರ : ಕ್ರಿಶ 1757 ಜೂನ್ 23 ರಂದು ಬಂಗಾಳದ ನವಾಬ ಸಿರಾಜುದ್ದೌಲ್ ಮತ್ತು ಬ್ರಿಟಿಷರಿಗೂ ನಡೆಯಿತು.

**4. ಮಧ್ಯಯುಗದಲ್ಲಿ ಯುರೋಪ ಮತ್ತು ಏಷ್ಯಾ ಖಂಡಗಳ ನಡುವಿನ ವ್ಯಾಪಾರವು ಯಾವ ಮಾರ್ಗಗಳ ಮೂಲಕ ನಡೆಯುತ್ತಿತ್ತು? ಅಥವಾ ಭಾರತದೊಂದಿಗೆ ಯುರೋಪಿನ ವ್ಯಾಪಾರವು ಹೇಗೆ ನಡೆಯುತ್ತಿತ್ತು?**
ಉತ್ತರ : ಮಧ್ಯಯುಗದಲ್ಲಿ ಯುರೋಪ ಮತ್ತು ಏಷ್ಯಾ ಖಂಡಗಳ ನಡುವಿನ ವ್ಯಾಪಾರವು ಪರ್ಶಿಯನ್ ಕೊಲ್ಲಿ, ಕೆಂಪುಸಮುದ್ರ ಮತ್ತು ಮೆಡಿಟೇರಿಯನ್ ಸಮುದ್ರಗಳ ಜಲಮಾರ್ಗ ಮತ್ತು ಭಾರತದ ವಾಯುವ್ಯ ಭಾಗದ ಮೂಲಕ ನಡೆಯುತ್ತಿತ್ತು.

**5. ನೌಕಾಯಾನದಲ್ಲಿ ನಾವಿಕರಿಗೆ ಸಹಾಯಕವಾದ ವೈಜ್ಞಾನಿಕ ಸಲಕರಣೆಗಳಾವುವು?**
ಉತ್ತರ : ನೌಕಾಯಾನದಲ್ಲಿ ನಾವಿಕರಿಗೆ ವೈಜ್ಞಾನಿಕ ಸಲಕರಣೆಗಳಾದ ದಿಕ್ಸೂಚಿ, ಸಿಡಿಮದ್ದು, ನೌಕಾ ಉಪಕರಣಗಳು, ಭೂಪಟ ಇತ್ಯಾದಿಗಳು ಸಹಾಯಕವಾದವು.

**6. ಬ್ರಿಟಿಷರು 24 ಪರಗಣಗಳ ಮೇಲಿನ ಜಮೀನ್ದಾರಿ ಹಕ್ಕನ್ನು ಹೇಗೆ ಪಡೆದರು?**
ಉತ್ತರ : ಪ್ಲಾಸಿ ಕದನದ ನಂತರ ಮೀರ್‌ಜಾಫರನನ್ನು ಬಂಗಾಳದ ನವಾಬನನ್ನಾಗಿ ನೇಮಿಸಿ ಪ್ರತಿಯಾಗಿ ಅವನಿಂದ ಬ್ರಿಟಿಷರು 24 ಪರಗಣಗಳ ಮೇಲಿನ ಜಮೀನ್ದಾರಿ ಹಕ್ಕನ್ನು ಪಡೆದುಕೊಂಡು ಅತ್ಯಂತ ಪ್ರಭಲರಾದರು.

**ಪ್ರಶ್ನೆ 3] ಈ ಕೆಳಗಿನ ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸಿ.**

**1. "ಸಮುದ್ರಯಾನಕ್ಕೆ ವೈಜ್ಞಾನಿಕ ಬೆಳವಣಿಗೆಯು ಕಾರಣ" ಈ ಹೇಳಿಕೆಯನ್ನು ಸಮರ್ಥಿಸಿ. (ಎಪ್ರಿಲ್ 2016)**
ಉತ್ತರ : ಜ್ಞಾನ ಪುನರುಜ್ಜೀವನ ಕಾಲದಲ್ಲಿ ಯುರೋಪಿನಲ್ಲಿ ನಡೆದ ಅನೇಕ ವೈಜ್ಞಾನಿಕ ಸಂಶೋಧನೆಗಳು ಹೊಸ ಸಮುದ್ರಮಾರ್ಗಗಳ ಆವಿಷ್ಕಾರಕ್ಕೆ ಕಾರಣವಾದವು. ಇವುಗಳಲ್ಲಿ ಪ್ರಮುಖವಾದವುಗಳೆಂದರೆ – ವೈಜ್ಞಾನಿಕ ಸಲಕರಣೆಗಳಾದ ದಿಕ್ಸೂಚಿ, ಗ್ರಹೋನ್ನತಿ ಮಾಪಕ, ಸಿಡಿಮದ್ದು, ನೌಕಾ ಉಪಕರಣಗಳು, ಭೂಪಟ ಇತ್ಯಾದಿಗಳು ಹೊಸ ಜಲಮಾರ್ಗಗಳನ್ನು ಕಂಡು ಹಿಡಿಯಲು ನಾವಿಕರಿಗೆ ಸಹಾಯಕವಾದವು.

**2. ಭಾರತಕ್ಕೆ ಹೊಸ ಜಲಮಾರ್ಗ ಕಂಡು ಹಿಡಿಯಲು ಪ್ರೇರಣೆಯಾದ ಅಂಶಗಳು ಯಾವುವು? (ಎಪ್ರಿಲ್ 2015, ಜೂನ್ 2015)**
**ಉತ್ತರ : ಭಾರತಕ್ಕೆ ಹೊಸ ಜಲಮಾರ್ಗ ಕಂಡು ಹಿಡಿಯಲು ಪ್ರೇರಣೆಯಾದ ಅಂಶಗಳು**
1. ವೈಜ್ಞಾನಿಕ ಸಲಕರಣೆಗಳಾದ ದಿಕ್ಸೂಚಿ, ಗ್ರಹೋನ್ನತಿ ಮಾಪಕ, ಸಿಡಿಮದ್ದು, ನೌಕಾ ಉಪಕರಣಗಳು, ಭೂಪಟ ಇತ್ಯಾದಿಗಳು.
2. ಪೂರ್ವ ದೇಶಗಳ ಸಂಪತ್ತಿನ ಬಗ್ಗೆ ಹೇಳಲಾಗುತ್ತಿದ್ದ ಕಥೆಗಳು,
3.ಧರ್ಮಪ್ರಚಾರಕ್ಕಾಗಿ ಉತ್ಸುಕರಾಗಿದ್ದ ಮಿಷಿನರಿಗಳು ಭಾರತಕ್ಕೆ ಪರ್ಯಾಯ ಹೊಸ ಜಲಮಾರ್ಗವನ್ನು ಹುಡುಕಲು ಪ್ರೇರಣೆಯನ್ನು ನೀಡಿದವು.

**3. ಪಶ್ಚಿಮ ಯುರೋಪಿಯನ್ ದೇಶಗಳು ಭಾರತಕ್ಕೆ ಒಂದು ಪರ್ಯಾಯ ವ್ಯಾಪಾರ ಮಾರ್ಗವನ್ನು ಹುಡುಕುವ ಪ್ರಯತ್ನಕ್ಕೆ ಕಾರಣವೇನು?**
ಉತ್ತರ : **ಯುರೋಪಿಯನ್ನರು ಪರ್ಯಾಯ ವ್ಯಾಪಾರ ಮಾರ್ಗ ಹುಡುಕಲು ಕಾರಣಗಳು**
1. ಮಧ್ಯ ಯುಗದಲ್ಲಿ ಮೆಡಿಟೇರಿಯನ್ ಹಾಗೂ ಯುರೋಪಿನ ವ್ಯಾಪಾರವು ಇಟಲಿಯ ಏಕಸ್ವಾಮ್ಯತೆಗೆ ಒಳಪಟ್ಟಿತ್ತು.
2. ಕ್ರಿಶ 1400ರ ಹೊತ್ತಿಗೆ ಈ ವ್ಯಾಪಾರವು ಅತ್ಯಂತ ಲಾಭದಾಯಕವಾಗಿತ್ತು.
3. ಇಟಲಿಯ ಏಕಸ್ವಾಮ್ಯವನ್ನು ಮುರಿಯಲು ಪಶ್ಚಿಮ ಯುರೋಪಿಯನ್ ದೇಶಗಳು ಭಾರತಕ್ಕೆ ಒಂದು ಪರ್ಯಾಯ ವ್ಯಾಪಾರ ಮಾರ್ಗವನ್ನು ಹುಡುಕಲು ಪ್ರಯತ್ನಿಸಿದರು.
4. ಸ್ಪೇನ್ & ಪೋರ್ಚಗಲ್ & ಯುರೋಪಿನ ಇತರ ದೇಶಗಳು ಹೊಸ ಭೂಪ್ರದೇಶಗಳನ್ನು ಹುಡುಕುವ ನಾವಿಕರಿಗೆ ಪ್ರೋತ್ಸಾಹ ನೀಡಿದವು.

**4. ಯುರೋಪಿಯನ್ನರಿಗೆ ಭಾರತದ ಸಾಂಬಾರ ಪದಾರ್ಥಗಳು ಬಹಳ ಪ್ರಿಯವಾಗಿದ್ದವು ಎಂಬುದನ್ನು ಹೇಗೆ ಹೇಳುವಿರಿ.**
ಉತ್ತರ : **ಯುರೋಪಿಯನ್ನರಿಗೆ ಭಾರತದ ಸಾಂಬಾರ ಪದಾರ್ಥಗಳು ಬಹಳ ಪ್ರಿಯವಾಗಿದ್ದವು ಹೇಗೆಂದರೆ –**
1. ಪ್ರಾಚೀನ ಕಾಲದಿಂದಲೂ ಭಾರತ ಹಾಗೂ ಯುರೋಪಿನ ಮಧ್ಯ ವಾಣಿಜ್ಯ ಸಂಬಂಧಗಳು ಬೆಸೆದುಕೊಂಡಿದ್ದವು.
2. ಪ್ರಮುಖವಾಗಿ ಭಾರತದ ಸಾಂಬಾರ ಪದಾರ್ಥಗಳಾದ ಮೆಣಸು, ದಾಲ್ಚಿನ್ನಿ, ಏಲಕ್ಕಿ, ಶುಂಠಿ ಇತ್ಯಾದಿ ವಸ್ತುಗಳಿಗೆ ಯುರೋಪಿನ ಜನರಿಂದ ಯಥೇಚ್ಛ ಬೇಡಿಕೆಯಿತ್ತು.
3. ಈ ವಸ್ತುಗಳನ್ನು ಯುರೋಪಿನ ಗ್ರೀಕ್ & ರೋಮನ್ ಸಾಮ್ರಾಜ್ಯಗಳಿಗೆ ರಫ್ತು ಮಾಡಲಾಗುತ್ತಿತ್ತು.

**5. ಕರ್ನಾಟಿಕ್ ಯುದ್ಧಗಳು ಇಂಗ್ಲೀಷರು ಭಾರತದಲ್ಲಿ ನೆಲೆಯೂರಲು ಹೇಗೆ ಸಹಾಯಕವಾದವು ಎಂಬುದನ್ನು ವಿವರಿಸಿ.**
ಉತ್ತರ : **ಕರ್ನಾಟಿಕ್ ಯುದ್ಧಗಳು ಇಂಗ್ಲೀಷರು ಭಾರತದಲ್ಲಿ ನೆಲೆಯೂರಲು ಸಹಾಯಕವಾದ ಅಂಶಗಳು**
1. ಮೊದಲನೇ ಕರ್ನಾಟಿಕ್ ಯುದ್ಧದಲ್ಲಿ ಬ್ರಿಟಿಷರು ಸೋತರೂ, ಮದ್ರಾಸ್ ಒಪ್ಪಂದದಿಂದ ಪ್ರೆಂಚರು ಮದ್ರಾಸನ್ನು ಇಂಗ್ಲೀಷರಿಗೆ ಬಿಟ್ಟುಕೊಟ್ಟರು.
2. ಎರಡನೇ ಕರ್ನಾಟಿಕ್ ಯುದ್ಧದಲ್ಲಿ ಪ್ರೆಂಚರ ಬೆಂಬಲಿತ ಚಂದಾಸಾಹೇಬನನ್ನು ಬ್ರಿಟಿಷರು ತಿರುಚಿನಾಪಳ್ಳಿಯಲ್ಲಿ ಕೊಂದು ಅರ್ಕಾಟನ್ನು ತಮ್ಮ ವಶಕ್ಕೆ ತೆಗೆದುಕೊಂಡರು.
3. ಮೂರನೇ ಕರ್ನಾಟಿಕ್ ಯುದ್ಧದ ವಾಂಡಿವಾಷ್ ಕದನದಲ್ಲಿ ಬ್ರಿಟಿಷರು ಪ್ರೆಂಚರನ್ನು ಸಂಪೂರ್ಣವಾಗಿ ಸೋಲಿಸಿ ಭಾರತದಲ್ಲಿ ತಮ್ಮ ನೆಲೆಯನ್ನು ಭದ್ರಪಡಿಸಿಕೊಂಡರು.

ಈ ರೀತಿ ಕರ್ನಾಟಿಕ್ ಯುದ್ಧಗಳು ಇಂಗ್ಲೀಷರು ಭಾರತದಲ್ಲಿ ನೆಲೆಯೂರಲು ಸಹಾಯ ಮಾಡಿದವು.

**6. ಎರಡನೇ ಕರ್ನಾಟಿಕ್ ಯುದ್ಧದಿಂದ ಇಂಗ್ಲೀಷರು & ಪ್ರೆಂಚರು ಪ್ರಭಲರಾದರು. ಹೇಗೆ ಸಮರ್ಥಿಸಿ.**
**ಉತ್ತರ :** 1. ಹೈದ್ರಾಬಾದ & ಕರ್ನಾಟಿಕ್ ಪ್ರದೇಶಗಳಲ್ಲಿ ನವಾಬನ ಪದವಿಗಾಗಿ

ಪೈಪೋಟಿ ಏರ್ಪಟ್ಟಿತ್ತು.

2. ಕರ್ನಾಟಿಕ್‌ನಲ್ಲಿ ಇಂಗ್ಲೀಷರು ಅನ್ವರುದ್ದೀನನಿಗೆ, ಪ್ರೇಂಚರು ಚಂದಾ ಸಾಹೇಬನಿಗೆ ಬೆಂಬಲ ನೀಡಿದರು.
3. ರಾಬರ್ಟ ಕ್ಲೈವ್‌ನು ತಿರುಚಿನಾಪಳ್ಳಿಯ ಮೇಲೆ ದಾಳಿ ಮಾಡಿ ಚಂದಾಸಾಹೇಬನನ್ನು ಕೊಂದು ಅದನ್ನು ವಶಪಡಿಸಿಕೊಂಡನು. ಇದರಿಂದ ಕರ್ನಾಟಿಕ್‌ದಲ್ಲಿ ಬ್ರಿಟಿಷರ ಪ್ರಾಬಲ್ಯ ಸ್ಥಾಪಿಸಿದರು.
4. ಹೈದ್ರಾಬಾದಿನಲ್ಲಿ ಇಂಗ್ಲೀಷರ ಬೆಂಬಲಿಗ ನಾಸಿರ್‌ಜಂಗನನ್ನು ಪ್ರೆಂಚರು ಸೋಲಿಸಿ ಹೈದ್ರಾಬಾದನ್ನು ವಶಪಡಿಸಿಕೊಂಡರು. ಇಲ್ಲಿ ಪ್ರೆಂಚರು ಪ್ರಾಭಲ್ಯ ಸ್ಥಾಪಿಸಿದರು.

**7. 3ನೇ ಕರ್ನಾಟಿಕ್ ಯುದ್ಧದ ಪರಿಣಾಮಗಳೇನು?**

ಉತ್ತರ : **3ನೇ ಕರ್ನಾಟಿಕ್ ಯುದ್ಧದ ಪರಿಣಾಮಗಳು**

1. 3ನೇ ಕರ್ನಾಟಿಕ್ ಯುದ್ಧವು ಬ್ರಿಟಿಷರು & ಪ್ರೆಂಚರ ನಡುವೆ ನಡೆಯಿತು.
2. ಈ ಯುದ್ಧದಲ್ಲಿ ಪ್ರೆಂಚರು ಸಂಪೂರ್ಣವಾಗಿ ಸೋತರು.
3. ಪ್ಯಾರಿಸ್ ಒಪ್ಪಂದದ ಪ್ರಕಾರ ಫ್ರೆಂಚರಿಗೆ ಬ್ರಿಟಿಷರು ವಶಪಡಿಸಿಕೊಂಡ ಪ್ರದೇಶಗಳನ್ನು ಹಿಂದಿರುಗಿಸಿದರು.
4. ಫ್ರೆಂಚರು ಕೋಟೆಗಳನ್ನು ಕಟ್ಟಿ ರಕ್ಷಿಸಿಕೊಳ್ಳುವಂತಿರಲಿಲ್ಲ. ಅವು ಕೇವಲ ವ್ಯಾಪಾರಿ ಕೇಂದ್ರವಾಗಿಯಷ್ಟೆ ಕಾರ್ಯ ನಿರ್ವಹಿಸಬೇಕಿತ್ತು.

**8. ಭಾರತದಲ್ಲಿ ಬ್ರಿಟಿಷರು ಸಾಮ್ರಾಜ್ಯದ ಒಡೆಯರಾಗಲು ಅವರ ರಾಜಕೀಯ ಮುತ್ಸದ್ದಿತನ ಮತ್ತು ಕುಟಿಲತೆಯೇ ಕಾರಣ ಈ ಹೇಳಿಕೆಯನ್ನು ಸಮರ್ಥಿಸಿ.**

**ಅಥವಾ ಬ್ರಿಟಿಷರು ಸಾಮ್ರಾಜ್ಯದ ಒಡೆಯರಾದದ್ದು ಹೇಗೆ?**

**ಅಥವಾ ಭಾರತದ ಮೇಲಿನ ವ್ಯಾಪಾರಕ್ಕೆ ಆಂಗ್ಲರು ಏಕಸ್ವಾಮ್ಯವನ್ನು ಹೇಗೆ ಪಡೆದರು?**

ಉತ್ತರ : ಬ್ರಿಟಿಷ್ ವ್ಯಾಪಾರಿಗಳು ಸಾಮ್ರಾಜ್ಯದೊಡೆಯರಾದದ್ದು ಕೇವಲ ಸೈನ್ಯ ಬಲದಿಂದಲ್ಲ. ಬದಲಿಗೆ ರಾಜಕೀಯ ಮುತ್ಸದ್ದಿತನ ಮತ್ತು ಕುಟಿಲತೆಯನ್ನು ಉಪಯೋಗಿಸಿದರು. ಹೇಗೆಂದರೆ ಭಾರತೀಯ ರಾಜರಲ್ಲಿದ್ದ ಅನೈಕ್ಯತೆ & ಆಂತರಿಕ ಕಲಹಗಳನ್ನು ಉಪಯೋಗಿಸಿ ಒಬ್ಬರ ಮೇಲೆ ಒಬ್ಬರನ್ನು ಮೇಲೆತ್ತಿ ಅವರಲ್ಲಿಯೇ ಒಡಕನ್ನುಂಟು ಮಾಡಿ ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸಿಕೊಂಡರು.

**9. ಪ್ಲಾಸಿ ಕದನದ ಫಲಿತಾಂಶಗಳೇನು? ಅಥವಾ ಪರಿಣಾಮಗಳೇನು? (ಜೂನ್ 2015)**

ಉತ್ತರ : **ಪ್ಲಾಸಿ ಕದನದ ಫಲಿತಾಂಶ ಅಥವಾ ಪರಿಣಾಮಗಳು –**

1. ಸಿರಾಜುದ್ದೌಲ್ ಕದನದಲ್ಲಿ ಕೊಲ್ಲಲ್ಪಟ್ಟನು.
2. ಬ್ರಿಟಿಷರೊಂದಿಗೆ ಸಹಕರಿಸಿದ ಮೀರ್‌ಜಾಫರ್‌ನನ್ನು ಬಂಗಾಳದ ನವಾಬನನ್ನಾಗಿ ನೇಮಿಸಿದರು.
3. ಬ್ರಿಟಿಷರು ಮೀರ್‌ಜಾಫರ್‌ನಿಂದ 24 ಪರಗಣಗಳ ಜಮಿನ್ದಾರಿ ಹಕ್ಕನ್ನು ಪಡೆದುಕೊಂಡು ಅತ್ಯಂತ ಪ್ರಭಲರಾದರು.

**10. ಬಕ್ಸಾರ ಕದನಕ್ಕೆ ಕಾರಣಗಳೇನು?**

ಉತ್ತರ : **ಬಕ್ಸಾರ ಕದನಕ್ಕೆ ಕಾರಣ**

1. ಇಂಗ್ಲೀಷರ ಹಿಡಿತದಿಂದ ಹೊರಬರಲು ಮೀರಕಾಸಿಂ ಪ್ರಯತ್ನಿಸಿದಾಗ ಬ್ರಿಟಿಷರು ಅವನನ್ನು ಪದಚ್ಯುತಗೊಳಿಸಿ ಮೀರಜಾಫರನನ್ನು ಮತ್ತೆ ಬಂಗಾಳದ ನವಾಬನನ್ನಾಗಿ ಮಾಡಿದರು.
2. ಮೀರಕಾಸಿಂನು ಮೊಘಲ್ ಚಕ್ರವರ್ತಿ ಷಾ ಅಲಂ, ಔದ್‌ನ ನವಾಬ ಷೂಜ ಉದ್ದೌಲರೊಡನೆ ತ್ರಿಮೈತ್ರಿಕೂಟ ಒಪ್ಪಂದ ಮಾಡಿಕೊಂಡು ಬ್ರಿಟಿಷರ ವಿರುದ್ಧ 1764 ರಲ್ಲಿ ದಾಳಿಮಾಡಿದನು.

**11. ಬಕ್ಸಾರ ಕದನದ ಪರಿಣಾಮಗಳೇನು?**

**ಬಕ್ಸಾರ ಕದನದ ಪರಿಣಾಮಗಳು**

1 ಈ ಯುದ್ದದಲ್ಲಿ ಮೀರ್‌ಕಾಸಿಮ್‌ನ ಒಕ್ಕೂಟ ಸೈನ್ಯ ಸೋಲು ಅನುಭವಿಸಿತು.

2 ಈ ಕದನದ ಪರಿಣಾಮವಾಗಿ ಬಿಹಾರ, ಒರಿಸ್ಸಾ ಮತ್ತು ಬಂಗಾಳ ಪ್ರಾಂತ್ಯಗಳು ಇಂಗ್ಲೀಷರ ವಶವಾದವು.

3 ಮೊಘಲ್ ಚಕ್ರವರ್ತಿ ಷಾ ಆಲಂ ದಿವಾನಿ ಹಕ್ಕನ್ನು ಇಂಗ್ಲಿಷರಿಗೆ ನೀಡಿದನು.

4 ರಾಬರ್ಟಕ್ಲೈವ್‌ನು ಬಂಗಾಳದಲ್ಲಿ ದ್ವಿ ಸರ್ಕಾರವನ್ನು ಜಾರಿಗೆ ತಂದನು.

**12. ದ್ವಿ – ಸರಕಾರ ಪದ್ಧತಿಯನ್ನು ವಿವರಿಸಿರಿ. (ಎಪ್ರಿಲ್ 2015) ಅಥವಾ ಬ್ರಿಟೀಷರಿಗೆ ಭಾರತದಲ್ಲಿ ಭದ್ರವಾಗಿ ನೆಲೆಯೂರಲು ದ್ವಿ ಸರ್ಕಾರ ಪದ್ಧತಿಯು ನೆರವಾಯಿತು. ಹೇಗೆ ಸಮರ್ಥಿಸಿರಿ.**

ಉತ್ತರ : **ದ್ವಿ – ಸರಕಾರ ಪದ್ಧತಿ**

1. 1765 ರಲ್ಲಿ ರಾಬರ್ಟಕ್ಲೈವ್‌ನು ಬಂಗಾಳದಲ್ಲಿ ದ್ವಿ – ಸರ್ಕಾರ ಪದ್ಧತಿಯನ್ನು ಜಾರಿಗೆ ತಂದನು.
2. ಇಂಗ್ಲೀಷರು ದಿವಾನಿ ಹಕ್ಕಿನಿಂದಾಗಿ ಭೂಕಂದಾಯವನ್ನು ವಸೂಲಿ ಮಾಡುವ ಅಧಿಕಾರ ಪಡೆದರು.
3. ಆಡಳಿತ, ನ್ಯಾಯ ಪ್ರತಿಪಾದನೆ ಮೊದಲಾದ ಆಡಳಿತಾತ್ಮಕ ಕಾರ್ಯಗಳನ್ನು ನವಾಬನು ನಿರ್ವಹಿಸುತ್ತಿದ್ದನು. ಇದನ್ನೆ ದ್ವಿ – ಸರ್ಕಾರವೆಂದು ಕರೆಯಲಾಗಿದೆ.
4. ಹೀಗೆ ಬ್ರಿಟೀಷರಿಗೆ ಭಾರತದಲ್ಲಿ ಭದ್ರವಾಗಿ ನೆಲೆಯೂರಲು ದ್ವಿ ಸರ್ಕಾರ ಪದ್ಧತಿಯು ನೆರವಾಯಿತು.

## ಅಧ್ಯಾಯ – 3. ಜನಪದ ಚರಿತ್ರೆ

**ಪ್ರಶ್ನೆ 1] ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

**1. ಬ್ರಿಟಿಷರ ಆಗಮನದಿಂದ ಚರಿತ್ರೆಯ ಬರವಣಿಗೆಯ ಮೇಲಾದ ಪ್ರಭಾವಗಳೇನು?**

ಉತ್ತರ : ಬ್ರಿಟಿಷರು ಭಾರತಕ್ಕೆ ಬಂದ ಮೇಲೆ ಚರಿತ್ರೆ ಬರವಣಿಗೆಯ ಮೇಲೆ ಸಹಜವಾಗಿಯೇ ಪ್ರಭಾವ ಉಂಟಾಯಿತು. ಯಾವುದೇ ಘಟನೆಗಳನ್ನು ನಿರೂಪಿಸುವಾಗ ಚರಿತ್ರೆಕಾರ ಅದಕ್ಕೊಂದು ತಾತ್ವಿಕ ರೂಪ ಕೊಡಲು ಆರಂಭಿಸಿದ. ಅದನ್ನು ಚರಿತ್ರೆ ಎಂದು ಅರ್ಥೈಸಲಾಯಿತು.

**2. ಭಾರತವು ಹೆಚ್ಚು ಲಿಖಿತ ಇತಿಹಾಸ ಆಕರಗಳನ್ನು ಹೊಂದಿರಲಿಲ್ಲ. ಏಕೆ? (ಜೂನ್ 2015)**

ಉತ್ತರ : ಭಾರತದ ದೇಶದ ಶೇ. 70ಕ್ಕೂ ಹೆಚ್ಚಿನ ಜನರಿಗೆ ಅಕ್ಷರ ಜ್ಞಾನವಿಲ್ಲದಿದ್ದರಿಂದ ಭಾರತವು ಹೆಚ್ಚು ಲಿಖಿತ ಇತಿಹಾಸ ಆಕರಗಳನ್ನು ಹೊಂದಿರಲಿಲ್ಲ.

**3. ಕಾಲಚಕ್ರ ಎಂದರೇನು? (ಎಪ್ರಿಲ್ 2015)**

ಉತ್ತರ : ಭಾರತೀಯ ಪರಂಪರೆಯಲ್ಲಿ ಚರಿತ್ರೆಯನ್ನು ಚಕ್ರೋಪಾದಿಯಲ್ಲಿ ನೋಡುವುದನ್ನು ಕಾಲಚಕ್ರವೆಂದು ಕರೆಯುತ್ತಾರೆ.

**4. ಚರಿತ್ರೆಕಾರರಿಗೆ ಮೌಖಿಕ ಚರಿತ್ರೆಯನ್ನು ರಚಿಸಲು ಸಹಾಯಕವಾದ ಅಂಶಗಳು ಯಾವುವು? ಅಥವಾ ಚರಿತ್ರೆಕಾರರು ಮೌಖಿಕ ಚರಿತ್ರೆಯನ್ನು ಹೇಗೆ ರಚಿಸುತ್ತಿದ್ದಾರೆ? ಚರಿತ್ರೆಕಾರನು ಜನಸಾಮಾನ್ಯರ ಚರಿತ್ರೆಯನ್ನು ರೂಪಿಸಲು ಏನನ್ನು ಆಶ್ರಯಿಸುತ್ತಾನೆ?**

ಉತ್ತರ : ಐತಿಹ್ಯ, ಲಾವಣಿ, ಜನಪದಗೀತೆ, ಕಾವ್ಯಗಳನ್ನು ಅಧ್ಯಯನ ಮಾಡುವ ಮೂಲಕ ಸಮಾಜದ ಸಂಪ್ರದಾಯ, ನಡಾವಳಿ ಇತ್ಯಾದಿಗಳನ್ನು ಅಭ್ಯಾಸ ಮಾಡಿ ಚರಿತ್ರೆ ರಚಿಸಲು ಚರಿತ್ರೆಕಾರರಿಗೆ ಸಹಾಯಕವಾಗಿವೆ.

**5. ಜನಪದ ಚರಿತ್ರೆ ಎಂದರೇನು? ಅಥವಾ ಮೌಖಿಕ ಚರಿತ್ರೆ ಎಂದರೇನು?**

ಉತ್ತರ : ಮೌಖಿಕ ಆಕರಗಳಾದ ಐತಿಹ್ಯ, ಲಾವಣಿ, ಜನಪದ ಗೀತೆ, ಕಾವ್ಯಗಳು, ಸಮಾಜದ ಸಂಪ್ರದಾಯ, ನಡಾವಳಿ ಇತ್ಯಾದಿಗಳಿಂದ ರೂಪಗೊಂಡ ಚರಿತ್ರೆಯನ್ನು ಜನಪದ ಚರಿತ್ರೆ ಅಥವಾ ಮೌಖಿಕ ಚರಿತ್ರೆ ಎಂದು ಕರೆಯುತ್ತಾರೆ.

**6. ಚರಿತ್ರೆ ಬರವಣಿಗೆಯ ರೇಖಾತ್ಮಕ ಮಾದರಿಯನ್ನು ವಿವರಿಸಿ.**

ಉತ್ತರ : ಚರಿತ್ರೆಯಲ್ಲಿ ಒಂದನೇ ಇಸವಿ ನಂತರ ಎರಡನೆಯ ಇಸವಿ ಬರಬೇಕು. 17 ನೇ ಶತಮಾನದ ಘಟನೆಗಳ ನಂತರ 18ನೇ ಶತಮಾನದ ಘಟನೆಯ ಬಗ್ಗೆ ಬರೆಯಬೇಕು. ಇದನ್ನು ಚರಿತ್ರೆ ಬರವಣಿಗೆಯ ರೇಖಾತ್ಮಕ ಮಾದರಿಯೆನ್ನುವರು.

**7. ಯುಗ ಎಂದರೇನು? ಉದಾಹರಣೆ ಕೊಡಿ.**

ಉತ್ತರ : ಒಂದು ಕಾಲಚಕ್ರದ ಆವರ್ತನ ಮುಗಿದ ಮೇಲೆ ಇನ್ನೊಂದು ಕಾಲಚಕ್ರದ ಆವರ್ತನ ಆರಂಭವಾಗುತ್ತದೆ. ಇದನ್ನು ಯುಗ ಎಂದು ಕರೆಯುತ್ತಾರೆ. ಉದಾ : ಕೃತ, ತ್ರೇತಾ, ದ್ವಾಪರ ಮತ್ತು ಕಲಿಯುಗಗಳು.

**8. ಭಾರತೀಯರು ಜನಪದ ಚರಿತ್ರೆಗೆ ಹೆಚ್ಚು ಪ್ರಾಶಸ್ತ್ಯ ನೀಡಿದ್ದರು. ಏಕೆ? (ಎಪ್ರಿಲ್ 2016)**

ಉತ್ತರ : ದೇಶದ ಶೇ. 70ಕ್ಕೂ ಹೆಚ್ಚಿನ ಜನರಿಗೆ ಅಕ್ಷರ ಜ್ಞಾನವಿಲ್ಲದ್ದರಿಂದ ಜನಪದ ಚರಿತ್ರೆಗೆ ಹೆಚ್ಚಿನ ಪ್ರಾಶಸ್ತ್ಯ ನೀಡಿದ್ದರು.

**9. ಚರಿತ್ರೆಯನ್ನು ಕಣ್ಮುಚ್ಚಿ ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಏಕೆ?**

ಉತ್ತರ : ಆಧಾರಗಳೇ ಚರಿತ್ರೆಯ ಜೀವಾಳವಾಗಿದ್ದು ಆಧಾರಗಳಿಲ್ಲದ ಚರಿತ್ರೆಯನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ.

**10. ಮೌಖಿಕ ಆಕರಗಳು ಅಥವಾ ಜನಪದ ಆಕರಗಳು ಇಂದು ಚರಿತ್ರೆಕಾರರಿಗೆ ವರಪ್ರಸಾದವಾಗಿವೆ ಎಂದು ಹೇಗೆ ಹೇಳುವಿರಿ.**

ಉತ್ತರ : ಜನಪದ ಆಕರಗಳ ಮೂಲಕ ಗ್ರಾಮ ಗ್ರಾಮಗಳ ಚರಿತ್ರೆಯನ್ನು, ಪ್ರಾದೇಶಿಕ ಚರಿತ್ರೆಯನ್ನು, ರೈತಾಪಿ ಜನರ ಚರಿತ್ರೆಯನ್ನು ದಾಖಲಿಸುವ ಮೂಲಕ ಸ್ಥಳೀಯ ಚರಿತ್ರೆಯ ವಿವಿಧ ಮಜಲುಗಳನ್ನು ಅರ್ಥಮಾಡಿಕೊಳ್ಳಲು ಸುಲಭವಾಗುತ್ತದೆ. ಆದ್ದರಿಂದ ಜನಪದ ಆಕರಗಳು ಇಂದು ಚರಿತ್ರೆಕಾರರಿಗೆ ವರಪ್ರಸಾದವಾಗಿವೆ ಎಂದು ಹೇಳಬಹುದು.

## ಅಧ್ಯಾಯ – 4. ಬ್ರಿಟಿಷ್ ಆಡಳಿತದ ಬುನಾದಿ ಹಾಗೂ ಅದರ ಪರಿಣಾಮಗಳು

**ಪ್ರಶ್ನೆ 1] ಬಿಟ್ಟಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1. ಎರಡನೇ ಆಂಗ್ಲೋ–ಮರಾಠ ಯುದ್ಧವು ಈ ಒಪ್ಪಂದದೊಂದಿಗೆ ಮುಕ್ತಾಯವಾಯಿತು. – **ಬಸ್ಸಿನ್**
2. ಸರ್ವೋಚ್ಚ ನ್ಯಾಯಾಲಯದ ಸ್ಥಾಪನೆಗೆ ಅವಕಾಶ ಮಾಡಿಕೊಟ್ಟ ಶಾಸನ. – **1773ರ ರೆಗ್ಯುಲೇಟಿಂಗ್**
3. ಮತೀಯ ಆಧಾರದ ಮೇಲೆ ಚುನಾವಣೆಗೆ ಶಿಫಾರಸ್ಸು ಮಾಡಿದ ಶಾಸನ. – **1909ರ ಶಾಸನ**
4. ಮೊದಲನೇ ಆಂಗ್ಲೋ ಮರಾಠ ಯುದ್ದವು ಈ ಒಪ್ಪಂದದೊಂದಿಗೆ ಕೊನೆಗೊಂಡಿತು.– **ಸಾಲ್ಬಾಯಿ**
5. 'ಪಂಜಾಬಿನ ಸಿಂಹ'ವೆಂದು ಪ್ರಖ್ಯಾತಿ ಪಡೆದವನು. – **ರಣಜಿತ್‌ಸಿಂಗ್**

ಇದು ಎಸ್ ಎಸ್ ಟಿ ಎಫ್ ಡಿಜಿಟಲ್ ಗ್ರೂಪ್ ನ ಕೊಡುಗೆ

6. ರಣಜಿತಸಿಂಗ್‌ನ ನಂತರ ಅಧಿಕಾರಕ್ಕೆ ಬಂದವರು. – **ದುಲೀಪಸಿಂಗ್**
7. ಸಿಖ್ ಸೈನ್ಯದ ಹೆಸರು – **ಖಾಲ್ಸಾ**
8. ಭಾರತದ ಮೊದಲನೇ ಗವರ್ನರ್ ಜನರಲ್. – **ವಾರನ್ ಹೇಸ್ಟಿಂಗ್ಸ್**
9. 1909 ರ ಶಾಸನವನ್ನು ರೂಪಿಸಿದವರು. – **ವೈಸರಾಯ್ ಮಿಂಟೋ & ಕಾರ್ಯದರ್ಶಿ ಮಾರ್ಲೆ**
10. 1773ರ ರೆಗ್ಯುಲೇಟಿಂಗ್ ಶಾಸನದ ಪ್ರಕಾರ ಸರ್ವೋಚ್ಚ ನ್ಯಾಯಾಲಯ ಸ್ಥಾಪಿನೆಯಾದದ್ದು. – **ಕಲ್ಕತ್ತಾ,**
11. ಪೇಶ್ವೆ ಎರಡನೇ ಬಾಜಿರಾಯ ಸಹಾಯಕ ಸೈನ್ಯ ಪದ್ಧತಿ ಸ್ವೀಕರಿಸಿದ್ದು ಈ ಒಪ್ಪಂದದ ಮೂಲಕ – **ಬಸ್ಸಿನ್**
12. 1919ರ ಭಾರತ ಸರ್ಕಾರದ ಶಾಸನವನ್ನು ರೂಪಿಸಿದವರು. – **ಮಾಂಟೆಗ್ಯೂ & ಚೆಮ್ಸಫರ್ಡ್**
13. ದುಲಿಪಸಿಂಗನ ಪ್ರದಾನಿ – **ಲಾಲಸಿಂಗ್**
14. ಭಾರತದ ಸಂವಿಧಾನ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸಿದ ಶಾಸನ – **1861ರ ಶಾಸನ**
15. ಸಹಾಯಕ ಸೈನ್ಯ ಪದ್ಧತಿಯನ್ನು ಜಾರಿಗೆ ತಂದ ಬ್ರಿಟಿಷ್ ಗವರ್ನರ್.– **ಲಾರ್ಡ ವೆಲ್ಲಸ್ಲಿ** **(ಎಪ್ರಿಲ್ 2015)**
16. ಭಾರತೀಯರಿಗೆ ಪ್ರಥಮ ಬಾರಿಗೆ ಶಾಸನೀಯ ಹಾಗೂ ಆಡಳಿತ ಕಾರ್ಯದಲ್ಲಿ ಪಾಲ್ಗೋಳ್ಳಲು ಅವಕಾಶ ಮಾಡಿಕೊಟ್ಟ ಶಾಸನ.– **1861ರ ಇಂಡಿಯನ್ ಕೌನ್ಸಿಲ್ ಆಕ್ಟ್**
17. ಭಾರತದ ಸಂವಿಧಾನಕ್ಕೆ ಆಧಾರವಾಗಿ ಪರಿಣಮಿಸಿದ ಶಾಸನ. – **1935ರ ಭಾರತ ಸರಕಾರ ಶಾಸನ**
19. ಅಖಿಲ ಭಾರತೀಯ ಸಂಯುಕ್ತವ್ಯವಸ್ಥೆಗೆ ಅವಕಾಶ ಮಾಡಿಕೊಟ್ಟ ಶಾಸನ. – **1935ರ ಭಾರತ ಸರಕಾರ ಶಾಸನ**
20. ರೆಗ್ಯುಲೇಟಿಂಗ್ ಶಾಸನ : **1773** : :ಪಿಟ್ಸ್ ಇಂಡಿಯಾ ಶಾಸನ : – **1784**
21. ಬ್ರಿಟಿಷರ ಈ ನೀತಿ ಇಂಗ್ಲಿಷರಿಗೆ ದೇಶಿಯ ರಾಜರುಗಳನ್ನು ತಮ್ಮ ಹಿಡಿತಕ್ಕೆ ತೆಗೆದುಕೊಳ್ಳಲು ಅವಕಾಶ ಮಾಡಿಕೊಟ್ಟಿತು.– **ಸಹಾಯಕ ಸೈನ್ಯ ಪದ್ಧತಿ**
22. ದ್ವಿಮುಖ ಸರ್ಕಾರ ರದ್ದಾದದ್ದು ಈ ಶಾಸನದಿಂದ. – **1773ರ ರೆಗ್ಯುಲೇಟಿಂಗ್ ಶಾಸನ**

**ಪ್ರಶ್ನೆ 2] ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

**1. ಎರಡನೇ ಬಾಜಿರಾಯನು ಸಹಾಯಕ ಸೈನ್ಯ ಪದ್ಧತಿಯನ್ನು ಒಪ್ಪಿಕೊಂಡನು. ಏಕೆ?**
ಉತ್ತರ : ಮರಾಠ ನಾಯಕರಲ್ಲಿ ಅಧಿಕಾರಕ್ಕಾಗಿ ಪರಸ್ಪರ ಕಚ್ಚಾಟಗಳು ಆರಂಭವಾಗಿದ್ದರಿಂದಾಗಿ ಇವುಗಳಿಂದ ತಪ್ಪಿಸಿಕೊಂಡು ನೆಮ್ಮದಿಯಿಂದ ಅಧಿಕಾರ ನಡೆಸುವ ಸಲುವಾಗಿ ಎರಡನೇ ಬಾಜಿರಾಯನು ಸಹಾಯಕ ಸೈನ್ಯ ಪದ್ಧತಿಯನ್ನು ಸ್ವೀಕರಿಸಿದನು.

**2. ದುಲೀಪಸಿಂಗ್‌ನಿಗೆ ಸಹಾಯಕ ಸೈನ್ಯ ಪದ್ಧತಿ ಒಪ್ಪಿಕೊಳ್ಳುವುದು ಅನಿವಾರ್ಯವಾಯಿತು ಏಕೆ?**
ಉತ್ತರ : ಆಗ್ಲೋ–ಸಿಖ್ ಯುದ್ಧಗಳಲ್ಲಿ ಸಿಖ್ ಸೈನ್ಯಕ್ಕೆ ಸೋಲು ಉಂಟಾಗಿದ್ದರಿಂದ ದುಲೀಪಸಿಂಗನಿಗೆ ಅಧಿಕಾರ ಉಳಿಸಿಕೊಳ್ಳುವ ಸಲುವಾಗಿ ಸಹಾಯಕ ಸೈನ್ಯ ಪದ್ಧತಿ ಸ್ವೀಕರಿಸುವುದು ಅನಿವಾರ್ಯವಾಯಿತು.

**3. ಬ್ರಿಟಿಷರು ಭಾರತದಲ್ಲಿ ಹೂಡಿದ ಕೈಗಾರಿಕಾ ಬಂಡವಾಳದ ಪರಿಣಾಮವೇನು?**
ಉತ್ತರ : ಬ್ರಿಟಿಷರು ಭಾರತದಲ್ಲಿ ಹೂಡಿದ ಕೈಗಾರಿಕಾ ಬಂಡವಾಳದ ಪರಿಣಾಮದಿಂದಾಗಿ ಭಾರತದ ಗೃಹ ಕೈಗಾರಿಕೆಗಳು ಅವನತಿ ಹೊಂದಿದವು. ಕುಶಲಕರ್ಮಿಗಳು ನಿರುದ್ಯೋಗಿಗಳಾದರು.

**4. ಯುರೋಪಿನಲ್ಲಿ ಬಂಡವಾಳಶಾಹಿತ್ವಕ್ಕೆ ಕಾರಣವಾದ ಅಂಶಗಳು ಯಾವುವು?**
ಉತ್ತರ : ಯುರೋಪಿನಲ್ಲಿ ಕೃಷಿ & ಕೈಗಾರಿಕೆಗಳಲ್ಲಿ ಹೊಸ ತಂತ್ರಜ್ಞಾನ ಮತ್ತು ಅನ್ವೇಷಣೆಗಳು ಉಂಟಾಗಿ ಬಂಡವಾಳಶಾಹಿತ್ವಕ್ಕೆ ಕಾರಣವಾಯಿತು.

**5. ಕೇಂದ್ರದಲ್ಲಿ ಎರಡು ಶಾಸನ ಸಭೆಗಳ ರಚನೆಗೆ ಸಿಫಾರಸ್ಸು ಮಾಡಿದ ಶಾಸನ ಯಾವುದು?**
ಉತ್ತರ : 1919ರ ಶಾಸನವು ಕೇಂದ್ರದಲ್ಲಿ ಎರಡು ಶಾಸನ ಸಭೆಗಳಾದ ಮೇಲ್ಮನೆ & ಕೆಳಮನೆಗಳ ರಚನೆಗೆ ಶಿಫಾರಸ್ಸು ಮಾಡಿತು.

**6. ಕ್ರಿಶ 1935 ರ ಭಾರತ ಸರ್ಕಾರದ ಕಾಯ್ದೆಯು ಒಂದು ಮುಖ್ಯ ದಾಖಲೆಯಾಗಿದೆ. ಹೇಗೆ? (ಜೂನ್ 2015) (ಎಪ್ರಿಲ್ 2016)**
ಉತ್ತರ : ಕ್ರಿಶ 1935 ರ ಭಾರತದ ಸರ್ಕಾರದ ಕಾಯ್ದೆಯು ಒಂದು ಮುಖ್ಯ ದಾಖಲೆಯಾಗಿದೆ. ಅದು ಅಖಿಲ ಭಾರತೀಯ ಸಂಯುಕ್ತ ರಾಜ್ಯಕ್ಕೆ ಅವಕಾಶ ಮಾಡಿಕೊಟ್ಟಿತು. & ಆಡಳಿತದಲ್ಲಿ ಪ್ರಾಂತ್ಯಗಳಿಗೆ ಸ್ವಾಯತ್ತತೆ ನೀಡಿದೆ.

**7. 1861ರ ಇಂಡಿಯನ್ ಕೌನ್ಸಿಲ್ ಕಾಯ್ದೆಯು ಭಾರತದ ಸಂವಿಧಾನದ ಬೆಳವಣಿಗೆಯಲ್ಲಿ ಹೇಗೆ ಪ್ರಮುಖವಾಗಿದೆ?**
ಉತ್ತರ : ಭಾರತದ ಸಂವಿಧಾನದ ಬೆಳವಣಿಗೆಯಲ್ಲಿ 1861ರ ಕಾಯ್ದೆಯು ಪ್ರಮುಖವಾಗಿದೆ. ಇದರ ಪ್ರಕಾರ ಕಾರ್ಯಕಾರಿ ಸಮಿತಿಯಲ್ಲಿ ಭಾರತೀಯರನ್ನು ನಾಮಕರಣ ಮಾಡಿಕೊಳ್ಳುವ ಅವಕಾಶ ಕಲ್ಪಿಸಲಾಯಿತು.

## ಅಧ್ಯಾಯ 5. ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆಗಳು

**ಪ್ರಶ್ನೆ 1] ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1. 'ಭಾರತೀಯ ನವೋದಯದ ಜನಕ' ಎಂದು ಇವರನ್ನು ಕರೆಯಲಾಗುತ್ತದೆ. – **ರಾಜಾರಾಮಮೋಹನರಾಯ**
2. ಸತಿಸಹಗಮನ ಪದ್ಧತಿ ನಿಷೇಧ ಕಾಯ್ದೆಯನ್ನು ಜಾರಿಗೆ ತಂದವರು. – **ಲಾರ್ಡ ವಿಲಿಯಂ ಬೆಂಟಿಂಗ್**
3. 'ವೇದಗಳಿಗೆ ಹಿಂತಿರುಗಿ' ಎನ್ನುವ ಘೋಷಣೆ ಮಾಡಿದವರು.– **ದಯಾನಂದ ಸರಸ್ವತಿ**
4. ಭಾರತದಲ್ಲಿ ಥಿಯೋಸಾಫಿಕಲ್ ಸೊಸೈಟಿಯ ಕಾರ್ಯಗಳಿಗೆ ನವಚೈತನ್ಯ ನೀಡಿದವರು. – **ಆನಿಬೆಸೆಂಟ್**
5. ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಪ್ರಥಮ ಬಾರಿಗೆ ಪ್ರೌಢಶಾಲೆಯನ್ನು ತೆರೆದವರು.– **ಎಂ.ಜಿ.ರಾನಡೆ**
6. ಡಾ : ಬಿ ಆರ್ ಅಂಬೇಡ್ಕರ್‌ರು ಇವರ ತತ್ವಗಳಿಂದ ಪ್ರಭಾವಿತರಾದರು.– **ಜ್ಯೋತಿಬಾ ಪುಲೆ**
7. ಅಲಿಘರ್ ಚಳುವಳಿಯ ನಾಯಕತ್ವವನ್ನು ವಹಿಸಿದ್ದವರು.– **ಸರ್ ಸೈಯದ್ ಅಹಮದ್‌ಖಾನ್**
8. ಕ್ರಿಶ 1893 ರಲ್ಲಿ ಚಿಕಾಗೋ ವಿಶ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸಿದ ಭಾರತೀಯ.– **ಸ್ವಾಮಿ ವಿವೇಕಾನಂದ**
9. ಥಿಯಾಸಾಫಿಕಲ್ ಸೋಸೈಟಿಯ ಮೂಲ ಸ್ಥಾಪಕರೆಂದರೆ – **ಮ್ಯಾಡಂ ಬ್ಲಾವಟಸ್ಕಿ ಮತ್ತು ಕರ್ನಲ್ ಎಚ್.ಎಸ್.ಅಲ್ಕಾಟ್**
10. ಈ ಶಿಕ್ಷಣ ಸಂಸ್ಥೆಯ ಮೂಲಕ ಪ್ರಾರ್ಥನಾ ಸಮಾಜವು ಶಿಕ್ಷಣ ಕ್ಷೇತ್ರದ ಪ್ರಗತಿಗೆ ಶ್ರಮಿಸಿತು. – **ಡೆಕ್ಕನ್ ಶಿಕ್ಷಣ ಸಂಸ್ಥೆ**
11. ಆಂಗ್ಲೋ–ಓರಿಯಂಟಲ್ ಕಾಲೇಜನ್ನು ಸ್ಥಾಪಿಸಿದವರು. – **ಸರ್ ಸೈಯದ್ ಅಹಮದ್ ಖಾನ್**
12. ಸ್ವಾತಂತ್ರ್ಯ ಪ್ರತಿಯೊಬ್ಬ ಮನುಷ್ಯನ ಪ್ರಥಮ ಅವಶ್ಯಕತೆ ಎಂದು ಪ್ರತಿಪಾದಿಸಿದವರು.– **ಜ್ಯೋತಿಬಾ ಪುಲ**
13. ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಪ್ರತಿಪಾದಿಸಿದ ಮೊದಲ ಸಮಾಜ ಸುಧಾರಕ. – **ಜ್ಯೋತಿಬಾ ಪುಲೆ**
14. ಸತಿಪದ್ಧತಿ ನಿಷೇಧಿಸಲು ಹೋರಾಡಿದ ಮೊದಲ ಸಮಾಜ ಸುಧಾರಕ. – **ರಾಜಾರಾಮ ಮೋಹನರಾಯ**
15. ಆನಿಬೆಸೆಂಟರು ಹೋಂರೂಲ್ ಚಳುವಳಿಯನ್ನು ಪ್ರಾರಂಭಿಸಿದ ವರ್ಷ.– **1916**
16. 'ಜಾತಿಯು ಯೋಗ್ಯತೆಯಿಂದ ಹೊರತು ಹುಟ್ಟಿನಿಂದಲ್ಲ' ಎಂದು ಪ್ರತಿಪಾಧಿಸಿದ ಸಮಾಜ ಸುಧಾರಕ.– **ದಯಾನಂದ ಸರಸ್ವತಿ**
17. ಎಂ.ಜಿ ರಾನಡೆಯವರು ಈ ಸಮಾಜವನ್ನು ಜನಪ್ರಿಯಗೊಳಿಸಿದರು – **ಪ್ರಾರ್ಥನಾ ಸಮಾಜ**
18. ಭಾರತದ ಇತಿಹಾಸದಲ್ಲಿ 19ನೇಯ ಶತಮಾನವನ್ನು ಹೀಗೆ ಕರೆಯಲಾಗುತ್ತದೆ. – **ನವೋದಯ ಕಾಲ**
19. ಶುದ್ಧಿ ಚಳುವಳಿಯು ಈ ಸಮಾಜದ ಪ್ರಮುಖ ಚಟುವಟಿಕೆಯಾಗಿದೆ. – **ಆರ್ಯ ಸಮಾಜ**
20. ಆನಿಬೆಸೆಂಟ್ ಈ ದೇಶದ ಮಹಿಳೆ. – **ಐರ್ಲೆಂಡ್**
21. ಹೊಂದಿಸಿ ಬರೆಯಿರಿ. **(ಜೂನ್ 2015)**

| | | |
|---|---|---|
| ಎ) ರಾಜಾರಾಂ ಮೋಹನ ರಾಯ್ | – | 1. ರಾಮಕೃಷ್ಣ ಮಿಷನ್ |
| ಬಿ) ಸ್ವಾಮಿ ದಯಾನಂದ ಸರಸ್ವತಿ | – | 2. ಸತ್ಯಶೋಧಕ ಸಮಾಜ |
| ಸಿ) ಸ್ವಾಮಿ ವಿವೇಕಾನಂದ | – | 3. ಬ್ರಹ್ಮ ಸಮಾಜ |
| ಡಿ) ಜ್ಯೋತಿ ಬಾಪುಲೆ | – | 4. ಆರ್ಯ ಸಮಾಜ |

ಉತ್ತರ : **ಎ–3, ಬಿ–4, ಸಿ–1, ಡಿ–2**

22. 'ಎ' ಪಟ್ಟಿಯಲ್ಲಿ ಸಮಾಜ ಸುಧಾರಕರು ಮತ್ತು 'ಬಿ' ಪಟ್ಟಿಯಲ್ಲಿ ಅವರ ಕೃತಿಗಳನ್ನು ಕೊಡಲಾಗಿದೆ. ಅವುಗಳಿಗೆ ಸರಿಹೊಂದುವ ಉತ್ತರದ ಗುಂಪನ್ನು ಗುರುತಿಸಿ. **(ಎಪ್ರಿಲ್ 2016)**

| 'ಎ' ಪಟ್ಟಿ | 'ಬಿ' ಪಟ್ಟಿ |
|---|---|
| ಎ) ರಾಜಾರಾಮ ಮೋಹನ ರಾಯ್ | 1. ಗುಲಾಮಗಿರಿ |
| ಬಿ) ದಯಾನಂದ ಸರಸ್ವತಿ | 2. ಸಂವಾದ ಕೌಮುದಿ |
| ಸಿ) ಜ್ಯೋತಿಬಾ ಪುಲೆ | 3. ನ್ಯೂ ಇಂಡಿಯಾ |
| ಡಿ) ಅನಿಬೆಸೆಂಟ್ | 4. ಸತ್ಯಾರ್ಥ ಪ್ರಕಾಶ |

ಉತ್ತರ : **ಎ–2, ಬಿ–4, ಸಿ–1, ಡಿ–3**

**ಪ್ರಶ್ನೆ 2] ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

**1. ರಾಜರಾಮಮೋಹನರಾಯರನ್ನು 'ಭಾರತೀಯ ನವೋದಯದ ಜನಕ' ಎಂದು ಕರೆಯಲು ಕಾರಣಗಳೇನು?**
ಉತ್ತರ : ಭಾರತೀಯ ಸಾಮಾಜಿಕ ಸುಧಾರಣಾ ಕ್ಷೇತ್ರದ ಬೆಳವಣಿಗೆಗೆ ದಿಟ್ಟ ನಾಯಕತ್ವವನ್ನು ವಹಿಸಿ ಅದಕ್ಕೆ ದಕ್ಷ ಚಾಲಕತ್ವ ಕೊಟ್ಟವರಲ್ಲಿ

ರಾಜಾರಾಮಮೋಹನರಾಯರು ಮೊದಲಿಗರು. ಆದ್ದರಿಂದ ಇವರನ್ನು 'ಭಾರತೀಯ ನವೋದಯ ಜನಕ' ಎಂದು ಕರೆಯಲಾಗಿದೆ.

**2. ದಯಾನಂದ ಸರಸ್ವತಿಯವರು 'ವೇದಗಳಿಗೆ ಹಿಂದುರುಗಿ' ಎಂದು ಕರೆ ನೀಡಲು ಕಾರಣವೇನು? (ಜೂನ್2015)**

ಉತ್ತರ : ದಯಾನಂದ ಸರಸ್ವತಿಯವರು 'ವೇದಗಳಿಗೆ ಹಿಂತಿರುಗಿ' ಎಂದು ಕರೆ ನೀಡಿದರು ಯಾಕೆಂದರೆ ವೇದಗಳು ಎಲ್ಲಾ ಸತ್ಯವನ್ನೂ ಹೊಂದಿವೆ. ಅವು ಸರ್ವಜ್ಞಾನದ ಮೂಲಾಧಾರಗಳಾಗಿವೆ ಎಂಬುದು ಅವರ ನಂಬಿಕೆ.

**3. ಅಲಿಘರ್ ಚಳುವಳಿಯ ಉದ್ದೇಶಗಳನ್ನು ವಿಶ್ಲೇಷಿಸಿ.**

ಉತ್ತರ : ಮುಸಲ್ಮಾನರು ರಾಜಕೀಯ, ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ, ತಾತ್ವಿಕ ವಿಚಾರಗಳನ್ನು ಬದಲಿಸಿಕೊಂಡು ಪೂರ್ವ ಪಶ್ಚಿಮಗಳ ವಿಚಾರಗಳ ಸಂಗಮಕ್ಕೆ ಬೆಂಬಲಿಸುವದು ಅಲಿಘರ್ ಚಳುವಳಿಯ ಉದ್ದೇಶವಾಗಿತ್ತು.

**4. ಆಂಗ್ಲೋ ಓರಿಯಂಟಲ್ ಕಾಲೇಜ ಈಗ ಯಾವ ಹೆಸರಿನಿಂದ ಪ್ರಖ್ಯಾತವಾಗಿದೆ?**

ಉತ್ತರ : ಆಂಗ್ಲೋ ಓರಿಯಂಟಲ್ ಕಾಲೇಜ ಈಗ ಅಲಿಘರ್ ಮುಸ್ಲಿಂ ವಿಶ್ವವಿದ್ಯಾಲಯ ಹೆಸರಿನಿಂದ ಪ್ರಖ್ಯಾತವಾಗಿದೆ.

**5. 1893ರ ಸರ್ವಧರ್ಮ ಸಮ್ಮೇಳನದಲ್ಲಿ ವಿವೇಕಾನಂದರು ಜಗತ್ತಿಗೆ ನೀಡಿದ ಸಂದೇಶವೇನು?**

ಉತ್ತರ : ಸ್ವಾಮಿ ವಿವೇಕಾನಂದರು 1893ರ ಸರ್ವಧರ್ಮ ಸಮ್ಮೇಳನದಲ್ಲಿ ಸರ್ವಧರ್ಮ ಸಹಿಷ್ಟುತೆ ಮತ್ತು ಸಕಲ ಧರ್ಮಗಳು ಸತ್ಯ ಎಂದು ಪ್ರತಿಪಾದಿಸಿ ಭಾರತದ ಹಿರಿಮೆಯನ್ನು ಜಗತ್ತಿಗೆ ಸಾರಿದರು.

**6. ಸ್ವಾಮಿ ವಿವೇಕಾನಂದರು ರಾಮಕೃಷ್ಣ ಮಿಷನ್ ಅನ್ನು ಏಕೆ ಸ್ಥಾಪಿಸಿದರು? (ಎಪ್ರಿಲ್ 2016)**

ಉತ್ತರ ; ಸ್ವಾಮಿ ವಿವೇಕಾನಂದರು ತಮ್ಮ ಗುರುಗಳಾದ ರಾಮಕೃಷ್ಣ ಪರಮಹಂಸರ ಧ್ಯೇಯಾದರ್ಶಗಳನ್ನು ಪ್ರಚಾರ ಮಾಡುವ ಸಲುವಾಗಿ ರಾಮಕೃಷ್ಣ ಮಿಷನ್‌ನ್ನು ಸ್ಥಾಪಿಸಿದರು.

**7. ಥಿಯೋಸಾಫಿಕಲ್ ಸೊಸೈಟಿ ಸ್ಥಾಪನೆಯ ಮುಖ್ಯ ಉದ್ದೇಶವೇನು?**

ಉತ್ತರ : ಥಿಯೋಸಾಫಿಕಲ್ ಸೊಸೈಟಿಯು ಯಾವುದೇ ಬೇಧ-ಭಾವ ಇಲ್ಲದ ವಿಶ್ವಭ್ರಾತೃತ್ವದ ನಿರ್ಮಾಣ, ವೈಚಾರಿಕತೆಯ ತುಲನಾತ್ಮಕ ಅಧ್ಯಯನ ನಡೆಸುವುದು ಮತ್ತು ಪ್ರಕೃತಿ ನಿಯಮ ಹಾಗೂ ಮಾನವನ ಸುಪ್ತ ಶಕ್ತಿಗಳನ್ನು ಪತ್ತೆ ಹಚ್ಚುವ ಮುಖ್ಯ ಉದ್ದೇಶದಿಂದ ಸ್ಥಾಪಿತವಾಯಿತು.

## ಪ್ರಶ್ನೆ 3] ಈ ಕೆಳಗಿನ ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸಿರಿ.

ಇದು ಎಸ್ ಎಸ್ ಟಿ ಎಫ್ ಡಿಜಿಟಲ್ ಗ್ರೂಪ್‌ನ ಕೊಡುಗೆ

**1. ಭಾರತೀಯ ಇತಿಹಾಸದಲ್ಲಿ 19ನೆಯ ಶತಮಾನವನ್ನು 'ಭಾರತೀಯ ನವೋದಯ' ಕಾಲವೆಂದು ಕರೆಯಲಾಗಿದೆ. ವಿಮರ್ಶಿಸಿ.**

ಉತ್ತರ : ಭಾರತೀಯ ಇತಿಹಾಸದಲ್ಲಿ 19ನೆಯ ಶತಮಾನವನ್ನು 'ಭಾರತೀಯ ನವೋದಯ' ಕಾಲವೆಂದು ಕರೆಯಲಾಗಿದೆ.

1. ಈ ಕಾಲಾವಧಿಯಲ್ಲಿ ಪಾಶ್ಚಿಮಾತ್ಯ ನಾಗರಿಕತೆಯ ಸಂಪರ್ಕವು ಭಾರತೀಯರಿಗೆ ದೊರೆಯಿತು.
2. ಈ ಅವಕಾಶದಿಂದ ಇಂಗ್ಲೀಷ್ ವಿದ್ಯಾಭ್ಯಾಸದ ಸೌಲಭ್ಯ ದೊರೆಯಿತು.
3. ಭಾರತೀಯರಲ್ಲಿ ವೈಚಾರಿಕತೆಯ ಮನೋಭಾವ ಬೆಳೆಯಿತು.
4. ಇದು ಮೂಢನಂಬಿಕೆಗಳನ್ನು ಪ್ರಶ್ನಿಸುವಂತೆ ಮಾಡಿತು.
5. ಭಾರತೀಯರಲ್ಲಿ ಪ್ರಜಾಪ್ರಭುತ್ವ, ಸ್ವಾತಂತ್ರ್ಯ, ಸಮಾನತೆ, ರಾಷ್ಟ್ರೀಯತೆಯಂತಹ ವಿಚಾರಗಳನ್ನು ಪಾಶ್ಚಾತ್ಯ ಪರಿಕಲ್ಪನೆಗಳು ಪರಿಚಯಿಸಿದವು.

**2. ಬ್ರಹ್ಮ ಸಮಾಜದ ಬೋಧನೆಗಳಾವವು?**

ಉತ್ತರ : ಬ್ರಹ್ಮ ಸಮಾಜದ ಬೋಧನೆಗಳು

1. ಹಿಂದೂ ಧರ್ಮದಲ್ಲಿದ್ದ ಆಚಾರ – ವಿಚಾರಗಳ ಸುಧಾರಣೆಗಾಗಿ ಪ್ರಯತ್ನ
2. ವಿಗ್ರಹಾರಾಧನೆ ಮತ್ತು ಬಹುದೇವತಾ ಆರಾಧನೆಗೆ ವಿರೋಧಿಸಿತು.
3. ಏಕದೇವತಾ ಆರಾಧನೆಯನ್ನು ಪ್ರೋತ್ಸಾಹಿಸಿತು.
4. ಯಜ್ಞಯಾಗಾದಿಗಳನ್ನು ಖಂಡಿಸಿ ಪುರೋಹಿತಶಾಹಿಯನ್ನು ವಿರೋಧಿಸಿತು.
5. ಸತಿಪದ್ಧತಿ & ಬಾಲ್ಯವಿವಾಹ ಪದ್ಧತಿಗಳ ವಿರುದ್ಧ ಸಂಘಟನಾತ್ಮಕ ಹೋರಾಟ ನಡೆಸಿತು.
6. ಸ್ತ್ರೀಯರ ವಿದ್ಯಾಭ್ಯಾಸ & ವಿಧವೆಯರ ಪುನರ್‌ವಿವಾಹಕ್ಕೆ ಪ್ರೋತ್ಸಾಹಿಸಿತು.

**3. ದಯಾನಂದ ಸರಸ್ವತಿಯವರ (ಆರ್ಯ ಸಮಾಜದ) ಬೋಧನೆಗಳನ್ನು ತಿಳಿಸಿ.**

ಉತ್ತರ : **ದಯಾನಂದ ಸರಸ್ವತಿಯವರ (ಆರ್ಯ ಸಮಾಜದ) ಬೋಧನೆಗಳು**

1. ವೇದಗಳು ಸತ್ಯ ಮತ್ತು ಜ್ಞಾನದ ಮೂಲಾಧಾರಗಳಾದ್ದರಿಂದ ಜನತೆಗೆ ವೇದಗಳಿಗೆ ಹಿಂದಿರುಗಿ ಎಂದು ಕರೆ ನೀಡಿದರು.
2. ವಿಗ್ರಹಾರಾಧನೆ ಮತ್ತು ಜಾತಿ ಪದ್ಧತಿಯನ್ನು ಖಂಡಿಸಿದರು.
3. ಜಾತಿಯು ಯೋಗ್ಯತೆಯಿಂದ ಹೊರತು ಹುಟ್ಟಿನಿಂದಲ್ಲ ಎಂದು ಪ್ರತಿಪಾಧಿಸಿದರು.
4. ಅನೇಕ ಅರ್ಥಹೀನ ಪದ್ಧತಿಗಳನ್ನು ಹಾಗೂ ಪುರೋಹಿತಶಾಯಿಯ ಅಧಿಕಾರವನ್ನು ತಿರಸ್ಕರಿಸಿದರು.
5. ವಿಧವಾ ವಿವಾಹವನ್ನು ಪ್ರೋತ್ಸಾಹಿಸಿದರು.
6. ಸ್ವದೇಶಿ ವಸ್ತುಗಳ ಬಳಕೆಗೆ ಕರೆ ನೀಡಿದರು.

**4. ಪ್ರಾರ್ಥನಾ ಸಮಾಜದ ಸುಧಾರಣೆಗಳನ್ನು ತಿಳಿಸಿರಿ.**

ಉತ್ತರ : **ಪ್ರಾರ್ಥನಾ ಸಮಾಜದ ಸುಧಾರಣೆಗಳು**

1. ಆತ್ಮಾರಾಂ ಪಾಂಡುರಂಗರವರು ಪ್ರಾರ್ಥನಾ ಸಮಾಜವನ್ನು ಸ್ಥಾಪಿಸಿದರು.
2. 'ಮಾನವನ ಸೇವೆಯೇ ಪರಮಾತ್ಮನ ಸೇವೆ' ಎಂಬುದು ಇದರ ನೆಲೆಗಟ್ಟಾಗಿತ್ತು.
3. ಈ ಸಮಾಜವು ಡೆಕ್ಕನ್ ಶಿಕ್ಷಣ ಸಂಸ್ಥೆಯ ಮೂಲಕ ಶಿಕ್ಷಣ ಕ್ಷೇತ್ರದ ಪ್ರಗತಿಗೆ ಪ್ರಯತ್ನಿಸಿತು.
4. ವಿಧವಾ ವಿವಾಹ, ಸ್ತ್ರೀ ಶಿಕ್ಷಣ, ಜಾತಿಪದ್ಧತಿ, ವಿಗ್ರಹಾರಾಧನೆ, ಪರ್ಧಾಪದ್ಧತಿಯನ್ನು ವಿರೋಧಿಸಿತು.
5. ಸರ್ವಧರ್ಮ ಸಮನ್ವಯ ಸಾರಿದ ಈ ಸಮಾಜವು ಪುನರುಜ್ಜೀವನ ಚಳುವಳಿಯ ಕಾಲದಲ್ಲಿ ಅನೇಕ ಅನಾಥಾಲಯಗಳು, ರಾಷ್ಟ್ರೀಯ ಶಾಲೆಗಳು ಮತ್ತು ವಿಧವಾಶ್ರಮಗಳನ್ನು ಸ್ಥಾಪಿಸಿತು.

**5. ಪ್ರಾರ್ಥನಾ ಸಮಾಜಕ್ಕೆ ಎಂ.ಜಿ.ರಾನಡೆಯವರು ನೀಡಿದ ಕೊಡುಗೆಯನ್ನು ತಿಳಿಸಿ.**

ಉತ್ತರ : 1. ಎಂ. ಜಿ. ರಾನಡೆಯವರು ಪ್ರಾರ್ಥನಾ ಸಮಾಜವನ್ನು ಜನಪ್ರಿಯಗೊಳಿಸಿದರು.

2. ಸಮಾಜವನ್ನು ಸುಧಾರಿಸದೆ ರಾಜಕೀಯ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಪ್ರಗತಿಯನ್ನು ಸಾಧಿಸುವುದು ಅಸಾಧ್ಯವೆಂದರು.
3. ಹಿಂದೂ, ಮುಸ್ಲಿಂ ಏಕತೆಯನ್ನು ಪ್ರತಿಪಾದಿಸಿದರು.
4. ಹೆಣ್ಣು ಮಕ್ಕಳ ಶಿಕ್ಷಣಕ್ಕಾಗಿ ಪ್ರೌಢ ಶಾಲೆಯನ್ನು ತೆರೆದರು.

**5. ಸತ್ಯಶೋಧಕ ಸಮಾಜವು ಪ್ರತಿಪಾದಿಸಿದ ಸುಧಾರಣೆಗಳನ್ನು ವಿವರಿಸಿ. ಅಥವಾ ಜ್ಯೋತಿಭಾ ಪುಲೆಯವರ ಸಾಮಾಜಿಕ ಸುಧಾರಣೆಗಳು ಅತ್ಯಂತ ಜನಪ್ರಿಯ ಏಕೆ? (ಎಪ್ರಿಲ್ 2015)**

ಉತ್ತರ : **ಸತ್ಯಶೋಧಕ ಸಮಾಜವು ಪ್ರತಿಪಾದಿಸಿದ ಸುಧಾರಣೆಗಳು.**

1. ಸತ್ಯಶೋಧಕ ಸಮಾಜವು ಪಾನನಿಷೇದವನ್ನು ಪ್ರತಿಪಾದಿಸಿತು.
2. ಮಾನವ ಹಕ್ಕುಗಳು ಮತ್ತು ಶೋಷಣೆಗೆ ಒಳಗಾದ ಜನರಿಗೆ ಸಾಮಾಜಿಕ ನ್ಯಾಯ ದೊರಕಿಸುವದು.
3. ಜಾತೀಯತೆ, ಅಸ್ಪೃಶ್ಯತೆ ಮತ್ತು ಸ್ತ್ರೀ ಶೋಷಣೆಗೆ ವಿರೋದ.
4. ಅಂತರ್ಜಾತಿಯ ವಿವಾಹ ಮತ್ತು ಎಲ್ಲಾ ಜಾತಿಯ ಜನರೊಂದಿಗೆ ಸಹಭೋಜನಕ್ಕೆ ಕರೆ ನೀಡಿತು.
5. ಶೂದ್ರರು ಮತ್ತು ಅತಿ ಶೂದ್ರರು ಅನುಭವಿಸುತ್ತಿದ್ದ ಗುಲಾಮಗಿರಿಯನ್ನು ಉಗ್ರವಾಗಿ ಖಂಡಿಸಿತು.

**6. ಸಾಮಾಜಿಕ ಸುಧಾರಣಾ ಚಳುವಳಿಯಲ್ಲಿ ಸರ್. ಸಯ್ಯದ್ ಅಹಮದ್ ಖಾನ್‌ರ ಪಾತ್ರವೇನು? ಅಥವಾ ಅಲಿಘರ್ ಚಳುವಳಿಯ ಉದ್ದೇಶಗಳನ್ನು ವಿಶ್ಲೇಷಿಸಿ.**

ಉತ್ತರ : **ಸಾಮಾಜಿಕ ಸುಧಾರಣಾ ಚಳುವಳಿಯಲ್ಲಿ ಸರ್. ಸಯ್ಯದ್ ಅಹಮದ್ ಖಾನ್‌ರ ಪಾತ್ರ**

1. ಅಲಿಘರ್ ಚಳುವಳಿಯ ನಾಯಕತ್ವವನ್ನು ಸರ್ ಸಯದ್ ಅಹಮದ್‌ಖಾನರವರು ವಹಿಸಿದ್ದರು.
2. ಮುಸಲ್ಮಾನರು ರಾಜಕೀಯ, ಸಾಮಾಜಿಕ, ಶೈಕ್ಷಣಿಕ, ಧಾರ್ಮಿಕ, ವಿಚಾರಗಳನ್ನು ಬದಲಿಸಿಕೊಂಡು ಪೂರ್ವ ಪಶ್ಚಿಮಗಳ ವಿಚಾರಗಳ ಸಂಗಮಕ್ಕೆ ಬೆಂಬಲಿಸುವದು ಅಲಿಘರ್ ಚಳುವಳಿಯ ಉದ್ದೇಶವಾಗಿತ್ತು.
3. ಪಾಶ್ಚಾತ್ಯ ಶಿಕ್ಷಣದೊಂದಿಗೆ ಧಾರ್ಮಿಕ ಶಿಕ್ಷಣವನ್ನು ಕೊಡುವುದು ಇವರ ಉದ್ದೇಶವಾಗಿತ್ತು.
4. ಪಾಶ್ಚಾತ್ಯ ಶಿಕ್ಷಣದಿಂದ ನವೀಕೃತ ಸಮಾಜದ ನಿರ್ಮಾಣ ಸಾಧ್ಯ ಎಂಬ ನಂಬಿಕೆಯನ್ನು ಇವರು ಹೊಂದಿದ್ದರು.

**7. ರಾಮಕೃಷ್ಣಮಿಷನ್ ದೃಷ್ಟಿಕೋನವನ್ನು ವಿವರಿಸಿ.**

ಉತ್ತರ : ರಾಮಕೃಷ್ಣಮಿಷನ್‌ನ ದೃಷ್ಟಿಕೋನ (ಸೇವೆಗಳು)

1. ಪ್ರಾರ್ಥನೆ, ಯೋಗಸಾಧನೆಯ ಜೊತೆಗೆ ಸಮಾಜ ಸೇವೆಗೂ ಒತ್ತು ಕೊಡಲಾಯಿತು.
2. ಜನ ಸೇವೆಗಾಗಿ ಅನೇಕ ಶಾಲಾ ಕಾಲೇಜು, ಅನಾಥಾಲಯಗಳನ್ನು ಹಾಗೂ ಆಸ್ಪತ್ರೆಗಳನ್ನು ಸ್ಥಾಪಿಸಲಾಗಿದೆ.
3. ಪ್ರವಾಹ, ಬರಗಾಲ, ಕ್ಷಾಮ ಮತ್ತು ರೋಗ ಪರಿಹಾರ ಕಾರ್ಯಗಳಲ್ಲಿ ಜನತೆಗೆ ಸೇವೆ ಮತ್ತು ಸಾಂತ್ವನಗಳನ್ನು ನೀಡಲಾಗಿದೆ.
4. ಸರ್ವಧರ್ಮ ಸಮಾನತೆಯನ್ನು ಎತ್ತಿ ಹಿಡಿಯಲಾಗಿದೆ.

**8. ಸ್ವಾಮಿ ವಿವೇಕಾನಂದರು ಯುವ ಶಕ್ತಿಯ ಪ್ರೇರಕರಾಗಿದ್ದರು. ಹೇಗೆ ಎಂಬುದನ್ನು ವಿವರಿಸಿ.**

ಉತ್ತರ : **ಸ್ವಾಮಿ ವಿವೇಕಾನಂದರು ಯುವ ಶಕ್ತಿಯ ಪ್ರೇರಕರಾಗಿದ್ದರು ಹೇಗೆಂದರೆ –**

1. ಸ್ವಾಮಿ ವಿವೇಕಾನಂದರು ಜೀವನ ಪ್ರೀತಿಯಲ್ಲಿರುವ ಮಹತ್ವವನ್ನು ತೆರೆದಿಟ್ಟು ಭಾರತೀಯರನ್ನು ಎಚ್ಚರಗೊಳಿಸಿದ ಕ್ರಾಂತಿಕಾರಿ ಸನ್ಯಾಸಿ.
2. ವ್ಯಕ್ತಿ ಮತ್ತು ವ್ಯಕ್ತಿಯ ಇರುವಿಕೆಗೆ ಮತ್ತು ಸಾಮರ್ಥ್ಯಕ್ಕೆ ಮಹತ್ವ ನೀಡಬಯಸಿದರು.
3. ಮೋಕ್ಷಕ್ಕಾಗಿ ದುಡಿಯಲು ಪ್ರಾರ್ಥನೆ, ಯೋಗ ಸಾಧನೆಗಳಲ್ಲದೆ ಸಮಾಜ ಸೇವೆಯು ಮುಖ್ಯವೆಂದರು.
4. ಭಾರತೀಯ ಸಂಸ್ಕೃತಿಯನ್ನು ವಿಶ್ವಕ್ಕೆ ಪರಿಚಯಿಸಿದರು.

5. ಯುವಜನತೆಯೇ ದೇಶದ ಭವಿಷ್ಯವೆಂದು ತಿಳಿದಿದ್ದ ಸ್ವಾಮಿ ವಿವೇಕಾನಂದರು 'ಏಳಿ ಎದ್ದೇಳಿ ಗುರಿ ಮುಟ್ಟುವ ತನಕ ನಿಲ್ಲದಿರಿ' ಎಂದು ಕರೆಕೊಟ್ಟರು.
6. ಭಾರತೀಯ ಸಂಸ್ಕೃತಿಯ ಘನತೆಯನ್ನು ವಿಶ್ವಕ್ಕೆ ಪರಿಚಯಿಸುವ ಮೂಲಕ ಅಸಂಖ್ಯಾತ ಯುವಕರಿಗೆ ಪ್ರೇರಣಾಶಕ್ತಿಯಾಗಿದ್ದಾರೆ.
7. ಇವರ ಚಿಂತನೆಗಳಿಂದ ಗಾಂಧೀಜಿಯವರು ಸೇರಿದಂತೆ ಅನೇಕ ರಾಷ್ಟ್ರನಾಯಕರು ಪ್ರೇರಣೆಗೊಂಡರು.

**9. ಥಿಯೋಸಾಫಿಕಲ್ ಸೊಸೈಟಿಗೆ ಅನಿಬೆಸೆಂಟ್‌ರ ಕೊಡುಗೆ ಏನು?**

ಉತ್ತರ : 1. ಐರ್ಲೆಂಡ್ ದೇಶದ ಮಹಿಳೆ ಅನಿಬೆಸೆಂಟ್‌ರವರು ಥಿಯೋಸಾಫಿಕಲ್ ಸೊಸೈಟಿಯ ಕಾರ್ಯ ಚಟುವಟಿಕೆಗಳನ್ನು ಭಾರತದಲ್ಲಿ ಆರಂಭಿಸಿ ಅದಕ್ಕೆ ನವಚೈತನ್ಯ ನೀಡಿದರು.

2. ಉಪನ್ಯಾಸಗಳ ಮೂಲಕ ಭಾರತೀಯ ಸಂಸ್ಕೃತಿಯ ಬಗ್ಗೆ ಅಭಿಮಾನ ಬಿತ್ತಿದರು.
3. ಸಮಾಜದಲ್ಲಿ ಸಮಾನತೆ ಮತ್ತು ಸೋದರತೆಯನ್ನು ವೃದ್ಧಿಸಿದರು.
4. ಸಮಾಜದಲ್ಲಿ ಸಾಮರಸ್ಯ ಸಾಧಿಸಲು ಪ್ರಯತ್ನಿಸಿದರು.
5. ಭಾರತದ ತಾತ್ವಿಕತೆಗೆ ಮತ್ತು ಸ್ವಾತಂತ್ರ್ಯ ಚಳುವಳಿಗೆ ಇವರು ಅಪಾರ ಕೊಡುಗೆಯನ್ನು ನೀಡಿದರು.

**10. ಸಾಮಾಜಿಕ & ಧಾರ್ಮಿಕ ಸುಧಾರಣಾ ಚಳುವಳಿಯ ತತ್ವಗಳನ್ನು ತಿಳಿಸಿ.**

ಉತ್ತರ : **ಸಾಮಾಜಿಕ ಧಾರ್ಮಿಕ ಸುಧಾರಣಾ ಚಳುವಳಿಯ ತತ್ವಗಳು**

1. ಬಾಲ್ಯವಿವಾಹ ಮತ್ತು ಬಹು ಪತ್ನಿತ್ವಕ್ಕೆ ವಿರೋದ.
2. ಸ್ತ್ರೀಯರ ವಿದ್ಯಾಭ್ಯಾಸ & ವಿಧವೆಯರ ಪುನರ್‌ವಿವಾಹಕ್ಕೆ ಪ್ರೋತ್ಸಾಹ.
3. ಜಾತೀಯತೆ, ಅಸ್ಪೃಶ್ಯತೆ, ಘೋಷಾ ಪದ್ಧತಿ ಮತ್ತು ಸ್ತ್ರೀ ಶೋಷಣೆಗೆ ವಿರೋದ.
4. ಅಂತರ್ಜಾತಿಯ ವಿವಾಹ ಮತ್ತು ಎಲ್ಲಾ ಜಾತಿಯ ಜನರೊಂದಿಗೆ ಸಹಭೋಜನಕ್ಕೆ ಕರೆ.
5. ಸತಿಸಹಗಮನ ಪದ್ಧತಿಗೆ ವಿರೋಧ.
6. ಮಾನವ ಹಕ್ಕುಗಳು ಮತ್ತು ಶೋಷಣೆಗೆ ಒಳಗಾದ ಜನರಿಗೆ ಸಾಮಾಜಿಕ ನ್ಯಾಯ ದೊರಕಿಸುವದು.

## ಅಧ್ಯಾಯ 6. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ

**ಪ್ರಶ್ನೆ 1] ಈ ಕೆಳಗಿನ ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸಿ.**

ಇದು ಎಸ್ ಎಸ್ ಪಿ ಡಿ ಎಫ್ ಡಿಜಿಟಲ್ ಗ್ರೂಪ್ ನ ಕೊಡುಗೆ

**1. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೆ ರಾಜಕೀಯ ಕಾರಣಗಳಾವುವು? (ಜೂನ್ 2015) (ಎಪ್ರಿಲ್ 2016)**

**ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯಿಂದಾದ ಪರಿಣಾಮಗಳಾವವು? ವಿಶ್ಲೇಷಿಸಿ.**

**ಅಥವಾ**

**ಉತ್ತರ : ದತ್ತು ಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯಿಂದಾದ ಪರಿಣಾಮಗಳು. ಅಥವಾ 1857 ರ ದಂಗೆಗೆ ರಾಜಕೀಯ ಕಾರಣಗಳು.**

1. ಸ್ವಂತ ಮಕ್ಕಳಿಲ್ಲದ ದೇಶಿಯ ಸಂಸ್ಥಾನಗಳು ತಮ್ಮ ಅಸ್ತಿತ್ವವನ್ನು ಕಳೆದುಕೊಳ್ಳಬೇಕಾಯಿತು. ಉದಾ – ಸತಾರ, ಝಾನ್ಸಿ, ಜೈಪುರ, ಉದಯಪುರ
2. ತಂಜಾವೂರು ಮತ್ತು ಕಾರ್ನಾಟಿಕ್ ನವಾಬರಿಗಿದ್ದ ರಾಜಪದವಿಯನ್ನು ರದ್ದುಪಡಿಸಲಾಯಿತು.
3. ಮೊಘಲ್ ಚಕ್ರವರ್ತಿ, ಔದ್‌ನ ನವಾಬ ಮೊದಲಾದ ರಾಜರುಗಳನ್ನು ಅಧಿಕಾರದಿಂದ ಪದಚ್ಯುತಗೊಳಿಸಿದರು.
4. ಲಕ್ಷಾಂತರ ಸೈನಿಕರು ನಿರುದ್ಯೋಗಿಗಳಾದರು.

**2. ಕ್ರಿಶ 1857ರ ದಂಗೆಗೆ ಆರ್ಥಿಕ ಬದಲಾವಣೆಗಳು ಸಹ ಕಾರಣ ಸಮರ್ಥಿಸಿ. (ಎಪ್ರಿಲ್ 2016)**

ಉತ್ತರ : **ಕ್ರಿಶ 1857ರ ದಂಗೆಗೆ ಆರ್ಥಿಕ ಕಾರಣಗಳು**

1. ಇಂಗ್ಲಂಡಿನಲ್ಲಾದ ಕೈಗಾರಿಕಾ ಕ್ರಾಂತಿಯಿಂದಾಗಿ ಭಾರತದ ಗೃಹ ಕೈಗಾರಿಕೆಗಳು ಅವನತಿ ಹೊಂದಿದವು.
2. ಲಕ್ಷಾಂತರ ನೇಕಾರರು ಹಾಗೂ ನೂಲುವವರು ಉದ್ಯೋಗ ಕಳೆದುಕೊಂಡರು.
3. ಭಾರತದ ಬಟ್ಟೆ ಇಂಗ್ಲಂಡಿನಲ್ಲಿ ಮಾರಾಟವಾಗದಂತೆ ಅದರ ಮೇಲೆ ದುಬಾರಿ ಸುಂಕ ಹೇರಿದರು.
4. ಜಮಿನ್ದಾರಿ ಪದ್ಧತಿ ಜಾರಿಗೆ ತಂದು ರೈತರನ್ನು ಶೋಷಣೆಗೆ ಒಳಪಡಿಸಿದರು.

**3. 1857ರ ದಂಗೆಗೆ ಆಡಳಿತಾತ್ಮಕ ಕಾರಣಗಳಾವವು?**

ಉತ್ತರ : **1857ರ ದಂಗೆಗೆ ಆಡಳಿತಾತ್ಮಕ ಕಾರಣಗಳು**

1. ಕಾನೂನಿನ ವಿಚಾರದಲ್ಲಿ ಇಂಗ್ಲೀಷರು & ಭಾರತೀಯರ ಮದ್ಯೆ ತಾರತಮ್ಯ ಮಾಡಲಾಗುತ್ತಿತ್ತು.
2. ಇಂಗ್ಲೀಷ ನ್ಯಾಯಾದೀಶರು ಬಹುತೇಕವಾಗಿ ಇಂಗ್ಲೀಷರ ಪರವಾಗಿ ನ್ಯಾಯ ನೀಡುತ್ತಿದ್ದರು.
3. ಆಂಗ್ಲ ಭಾಷೆಯು ನ್ಯಾಯಾಲಯದ ಭಾಷೆಯಾಗಿದ್ದರಿಂದ ಹೊಸ ಕಾನೂನಿನ ಆಶಯಗಳು ಜನರಿಗೆ ಅರ್ಥವಾಗಲಿಲ್ಲ.

**4. 1857ರ ದಂಗೆಗೆ ಸೈನಿಕ ಅಂಶಗಳು ಹೇಗೆ ಪ್ರೇರಣೆಯಾದವು? (ಜೂನ್ 2015)**

**1857ರ ದಂಗೆಗೆ ಸೈನಿಕ ಕಾರಣಗಳು**

1. ಬ್ರಿಟಿಷರ ಸೈನ್ಯದಲ್ಲಿದ್ದ ಭಾರತೀಯ ಸಿಪಾಯಿಗಳ ಸ್ಥಿತಿಯು ಗಂಭೀರವಾಗಿತ್ತು.
2. ಸೈನ್ಯದ ಉನ್ನತ ಹುದ್ದೆಗಳೆಲ್ಲ ಇಂಗ್ಲೀಷ ಸೈನಿಕರಿಗೆ ಮೀಸಲಾಗಿತ್ತು.
3. ಆಂಗ್ಲ ಸೈನಿಕರಿಗಿದ್ದ ಸ್ಥಾನಮಾನ, ವೇತನ, ಬಡ್ತಿ ಅವಕಾಶಗಳು ಭಾರತೀಯ ಸೈನಿಕರಿಗೆ ಇರಲಿಲ್ಲ.
4. ಭಾರತೀಯ ಸೈನಿಕರನ್ನು ಸಾಗರೋತ್ತರ ಸೇವೆಗೆ ಒತ್ತಾಯಿಸಿದ್ದು ಧಾರ್ಮಿಕವಾಗಿ ಸೈನಿಕರನ್ನು ಪ್ರಚೋದಿಸಿತು.

**5. ಕ್ರಿಶ 1857ರ ದಂಗೆಯಲ್ಲಿ ಸೈನಿಕರ ಧಾರ್ಮಿಕ ಮನೋಭಾವವನ್ನು ಪ್ರಚೋದಿಸಿದ ಅಂಶಗಳಾವವು?**

ಉತ್ತರ : **ಸೈನಿಕರ ಧಾರ್ಮಿಕ ಮನೋಭಾವವನ್ನು ಪ್ರಚೋದಿಸಿದ ಅಂಶಗಳು**

1. ಬ್ರಿಟಿಷರ ಸೈನ್ಯದಲ್ಲಿದ್ದ ಭಾರತೀಯ ಸಿಪಾಯಿಗಳ ಸ್ಥಿತಿಯು ಗಂಭೀರವಾಗಿತ್ತು.
2. ಭಾರತೀಯ ಸೈನಿಕರನ್ನು ಸಾಗರೋತ್ತರ ಸೇವೆಗೆ ಒತ್ತಾಯಿಸಿದ್ದು ಧಾರ್ಮಿಕವಾಗಿ ಸೈನಿಕರನ್ನು ಪ್ರಚೋದಿಸಿತು.
3. ರಾಯಲ್ ಎನ್‌ಫೀಲ್ಡ್ ಬಂದುಕುಗಳ ತುಪಾಕಿಗಳಿಗೆ ಹಂದಿ & ಹಸುವಿನ ಕೊಬ್ಬನ್ನು ಸವರಿದ್ದಾರೆಂಬ ವದಂತಿ ಸೈನಿಕರನ್ನು ಕೆರಳಿಸಿತು.
4. ಹಿಂದುಗಳಿಗೆ ಹಸು ಪವಿತ್ರವಾದರೆ, ಮುಸ್ಲಿಮರಿಗೆ ಹಂದಿಯು ನಿಷಿದ್ಧವಾಗಿತ್ತು.

**6. 1857ರ ದಂಗೆಯು ಹರಡಿದ ರೀತಿಯನ್ನು ತಿಳಿಸಿ.**

ಉತ್ತರ : 1. ಎನ್‌ಫೀಲ್ಡ್ ಬಂದುಕುಗಳನ್ನು ಉಪಯೋಗಿಸಲು ನಿರಾಕರಿಸಿ ಬ್ಯಾರಕ್‌ಪುರ ಸೈನ್ಯದಲ್ಲಿ ಮೊದಲು ದಂಗೆ ಪ್ರಾರಂಭವಾಯಿತು.

2. ಈ ದಂಗೆಯು ಕ್ರಮೇಣವಾಗಿ ಮೀರತ್, ದೆಹಲಿ, ಕಾನ್ಪುರ & ಝಾನ್ಸಿಗೆ ಹರಡಿತು.
3. ಕಾನ್ಪುರದಲ್ಲಿ ನಾನಾಸಾಹೇಬ & ತಾತ್ಯಾಟೋಪಿ, ಝಾನ್ಸಿಯಲ್ಲಿ ರಾಣಿ ಲಕ್ಷ್ಮೀಬಾಯಿ ದಂಗೆಯೆದ್ದರು.
4. ಬ್ರಿಟಿಷರು ಬಹುಬೇಗ ಚಾಣಾಕ್ಷತೆಯಿಂದ ದಂಗೆಯನ್ನು ಹತ್ತಿಕ್ಕಿದರು.

**ಪ್ರಶ್ನೆ 2] ಈ ಕೆಳಗಿನ ಪ್ರಶ್ನೆಗಳಿಗೆ 5–6 ವಾಕ್ಯಗಳಲ್ಲಿ ಉತ್ತರಿಸಿ.**

**1. ಮಂಗಲ ಪಾಂಡೆಯು ಬ್ರಿಟಿಷ್ ಅಧಿಕಾರಿಯನ್ನು ಕೊಲ್ಲಲು ಕಾರಣವಾದ ಘಟನೆ ಯಾವುದು? ಅಥವಾ 1857ರ ದಂಗೆಗೆ ತಕ್ಷಣದ ಕಾರಣವೇನು?**

ಉತ್ತರ : **1857ರ ದಂಗೆಗೆ ತಕ್ಷಣದ ಕಾರಣ**

1. 1857ರಲ್ಲಿ ಭಾರತದಲ್ಲಿನ ಬ್ರಿಟಿಷ್ ಸೈನಿಕರಿಗೆ ರಾಯಲ್ ಎನ್‌ಫೀಲ್ಡ್ ಎಂಬ ಹೊಸ ಬಂದೂಕುಗಳನ್ನು ನೀಡಲಾಗಿತ್ತು.
2. ಈ ಬಂದೂಕುಗಳಿಗೆ ಬಳಸುತ್ತಿದ್ದ ತುಪಾಕಿಗಳಿಗೆ ಹಸು ಮತ್ತು ಹಂದಿಯ ಕೊಬ್ಬನ್ನು ಸವರಿದ್ದಾರೆಂಬ ವದಂತಿ ಹಬ್ಬಿತು.
3. ಈ ವದಂತಿಯು ಬ್ಯಾರಕಪುರದಲ್ಲಿನ ಸೈನಿಕ ಪಡೆಯಲ್ಲಿ ತೀವ್ರ ಅಸಮಾಧಾನಕ್ಕೆ ಕಾರಣವಾಯಿತು.
4. ಸೈನಿಕರಿಗೆ ತುಪಾಕಿಗಳನ್ನು ಹಲ್ಲಿನಿಂದ ಕಚ್ಚಿ ತೆಗೆಯುವಂತೆ ಬ್ರಿಟಿಷರು ಆದೇಶಿಸಿದಾಗ ಇದನ್ನು ತಿರಸ್ಕರಿಸಿ ಮೇಲಾಧಿಕಾರಿಯ ವಿರುದ್ಧ ಬ್ಯಾರಕಪುರ ಸೈನಿಕರು ದಂಗೆಯೆದ್ದರು.
5. ಇದೇ ಸಂದರ್ಭದಲ್ಲಿ ಮಂಗಲ ಪಾಂಡೆ ಎಂಬ ಸೈನಿಕನು ಬ್ರಿಟಿಷ್ ಸೈನ್ಯದ ಮೇಲಾಧಿಕಾರಿಯೊಬ್ಬನನ್ನು ಕೊಂದನು.
6. ಇದರ ಪರಿಣಾಮವಾಗಿ ಮಂಗಲ ಪಾಂಡೆಯನ್ನು ಬಂಧಿಸಿ ವಿಚಾರಣೆಗೊಳಪಡಿಸಿ ಗಲ್ಲಿಗೇರಿಸಲಾಯಿತು.
7. ಪರಿಣಾಮವಾಗಿ ದಂಗೆಯು ಎಲ್ಲೆಡೆ ತೀವ್ರವಾಗಿ ಹಬ್ಬಿತು.

**2. 1857ರ ದಂಗೆಯ ವಿಫಲತೆಗೆ ಕಾರಣಗಳನ್ನು ಪಟ್ಟಿ ಮಾಡಿ. ಅಥವಾ 1857ರ ದಂಗೆಯು ಬ್ರಿಟಿಷರನ್ನು ಭಾರತದಿಂದ ಹೊರ ಹಾಕುವಲ್ಲಿ ವಿಫಲವಾಯಿತು ಏಕೆ? (ಎಪ್ರಿಲ್ 2015)**

ಉತ್ತರ : 1857 ರ ದಂಗೆಯ ವೈಫಲ್ಯಕ್ಕೆ ಕಾರಣಗಳು

1. ಸಿಪಾಯಿಗಳಲ್ಲಿ ಯುದ್ಧತಂತ್ರ, ಸೈನಿಕ ಪರಿಣಿತಿ, ಸೂಕ್ತ ಸೇನಾ ನಾಯಕತ್ವ ಮತ್ತು ಶಿಸ್ತಿನ ಕೊರತೆ ಇತ್ತು.
2. ಇಂಗ್ಲೀಷರಲ್ಲಿದ್ದ ಸುಧಾರಿತ ಶಸ್ತ್ರಾಸ್ತ್ರಗಳು, ಸಂಪರ್ಕ ಸಾಧನಗಳು ಸಿಪಾಯಿಗಳಲ್ಲಿ ಇರಲಿಲ್ಲ.
3. ಹಲವು ದೇಶಿಯ ರಾಜರುಗಳು ಬ್ರಿಟಿಷರಿಗೆ ಬೆಂಬಲಿಸಿದರು ಆದರೆ ಸಿಪಾಯಿಗಳಿಗೆ ಬೆಂಬಲ ನೀಡಲಿಲ್ಲ.
4. ಸಿಪಾಯಿಗಳಲ್ಲಿ ಸೂಕ್ತ ಮಾರ್ಗದರ್ಶನ ಮತ್ತು ವ್ಯವಸ್ಥಿತ ಸಂಘಟನೆಯ ಕೊರತೆ ಇತ್ತು.
5. ಇಂಗ್ಲಿಷರು ತಮ್ಮ ಆಡಳಿತ ಉಳಿಸಿಕೊಳ್ಳುವ ಗುರಿ ಹೊಂದಿದ್ದರು. ಆದರೆ ಸಿಪಾಯಿಗಳಿಗೆ ಎಲ್ಲರಿಗೂ ಒಪ್ಪಿಗೆಯಾಗುವಂತಹ ಗುರಿ ಇರಲಿಲ್ಲ.
6. ಸಿಪಾಯಿಗಳು ಅನೇಕ ಕಡೆ ಲೂಟಿ, ದರೋಡೆ ಮಾಡಿ ಜನಸಾಮಾನ್ಯರ ವಿಶ್ವಾಸ ಕಳೆದುಕೊಂಡರು.

**3. 1858ರ ಬ್ರಿಟನ್ ರಾಣಿಯ ಘೋಷಣೆಯಲ್ಲಿದ್ದ ಅಂಶಗಳಾವವು? ಅಥವಾ 1857ರ ದಂಗೆಯ ಪರಿಣಾಮಗಳಾವವು?**
ಉತ್ತರ : **1858ರ ಬ್ರಿಟನ್ ರಾಣಿಯ ಘೋಷಣೆಯಲ್ಲಿದ್ದ ಅಂಶಗಳು ಅಥವಾ 1857ರ ದಂಗೆಯ ಪರಿಣಾಮಗಳು**

1 ಈಸ್ಟ್ ಇಂಡಿಯಾ ಕಂಪನಿಯ ಆಳ್ವಿಕೆ ಅಂತ್ಯಗೊಂಡು ಇಂಗ್ಲಿಷ ಸರ್ಕಾರ ನೇರವಾಗಿ ಆಡಳಿತವನ್ನು ತನ್ನ ಕೈಗೆ ತೆಗೆದುಕೊಂಡಿತು.
2. ಕಂಪನಿಯು ದೇಶಿಯರಾಜರೊಂದಿಗೆ ಮಾಡಿಕೊಂಡಿದ್ದ ಒಪ್ಪಂದವನ್ನು ಅಂಗೀಕರಿಸಲಾಯಿತು.
3. ಪ್ರಾದೇಶಿಕ ವಿಸ್ತರಣೆಯ ಆಪೇಕ್ಷೆಯನ್ನು ಕೈಬಿಡುವುದು.
4. ಇಂಗ್ಲಿಷ ಸರ್ಕಾರ ದತ್ತು ಪುತ್ರರಿಗೆ ಹಕ್ಕಿಲ್ಲ ಎಂಬ ಕಾನೂನನ್ನು ಹಿಂತೆದುಕೊಂಡಿತು.
5. ಭಾರತೀಯರಿಗೆ ಸುಭದ್ರ ಸರ್ಕಾರ ನೀಡುವುದು.
6. ಭಾರತೀಯರ ಧಾರ್ಮಿಕ ನಂಬಿಕೆಗಳಲ್ಲಿ ಬ್ರಿಟಿಷ ಸರ್ಕಾರ ಹಸ್ತಕ್ಷೇಪ ಮಾಡುವದಿಲ್ಲವೆಂದು ರಾಣಿ ಭರವಸೆ ಇತ್ತಳು.
7. ಭಾರತೀಯರ ಬೆಂಬಲ ಗಳಿಸಿದರೆ ಮಾತ್ರ ಇಲ್ಲಿ ಶಾಂತಿಯಿಂದ ಆಳಬಹುದೆಂದು ಬ್ರಿಟಿಷರು ಮನಗಂಡರು.

## ಅಧ್ಯಾಯ 9. ಸ್ವಾತಂತ್ರ್ಯಾನಂತರ ಭಾರತ

**ಪ್ರಶ್ನೆ 1] ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1. ಭಾರತದ ಕೊನೆಯ ಬ್ರಿಟಿಷ್ ಗವರ್ನರ್ ಜನರಲ್.– **ಲಾರ್ಡ ಮೌಂಟ್ ಬ್ಯಾಟನ್**
2. ರಾಜ್ಯ ಪುನರ್ವಿಂಗಡನಾ ಕಾನೂನು ಜಾರಿಗೆ ಬಂದ ವರ್ಷ.– **1956**
3. ಸಂವಿಧಾನದ ಎಷ್ಟನೇ ತಿದ್ದುಪಡಿಯ ಮೂಲಕ ಸಂವಿಧಾನದಲ್ಲಿ ಜ್ಯಾತ್ಯಾತೀತ & ಸಮಾಜವಾದಿ ಅಂಶ ಗಳನ್ನು ಸೇರಿಸಲಾಯಿತು. – **42ನೇ ತಿದ್ದುಪಡಿ**
4. ಭಾರತದ ಸಂವಿಧಾನ ಜಾರಿಗೆ ಬಂದದ್ದು.– **1950ರ ಜನವರಿ 26**
5. ಭಾರತದ ಪ್ರಥಮ ಪ್ರಧಾನ ಮಂತ್ರಿ – **ಜವಾಹರಲಾಲ ನೆಹರು**
6. ಭಾರತದ ಪ್ರಥಮ ರಾಷ್ಟ್ರಾಧ್ಯಕ್ಷರು – **ಡಾ : ಬಾಬು ರಾಜೇಂದ್ರ ಪ್ರಸಾದ,**
7. ಭಾರತದ ಪ್ರಥಮ ಗೃಹಮಂತ್ರಿ – **ಸರ್ದಾರ್ ವಲ್ಲಭಭಾಯಿ ಪಟೇಲ್,**
8. ಸರ್ಧಾರ ವಲ್ಲಭಭಾಯಿ ಪಟೇಲರಿಗಿದ್ದ ಬಿರುದು – **ಉಕ್ಕಿನ ಮನುಷ್ಯ**
9. ಭಾರತಕ್ಕೆ ಸ್ವಾತ್ರಂತ್ರ್ಯ ದೊರೆತಾಗ ದೇಶದಲ್ಲಿ ಇದ್ದ ಸಂಸ್ಥಾನಗಳ ಸಂಖ್ಯೆ – **562 ಸಂಸ್ಥಾನಗಳು**
10. ಸಂಸ್ಥಾನಗಳ ವಿಲೀನಿಕರಣವನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದವರು – **ಸರ್ಧಾರ್ ವಲ್ಲಭಭಾಯಿ ಪಟೇಲರು,**
11. ಭಾರತಕ್ಕೆ ಸ್ವಾತಂತ್ರ್ಯ ದೊರೆತಾಗ ಜಮ್ಮು & ಕಾಶ್ಮೀರದ ರಾಜನಾಗಿದ್ದವನು. – **ಹರಿಸಿಂಗ್**
12. ದೇಶೀಯ ಸಂಸ್ಥಾನಗಳ ಅರಸರಿಗೆ ರಾಜಧನ ನೀಡುವುದನ್ನು ನಿಲ್ಲಿಸಿದ ವರ್ಷ. – **ಕ್ರಿಶ 1969,**
13. ಪಾಂಡಿಚೇರಿ ಇವರ ವಸಾಹತುವಾಗಿತ್ತು.– **ಫ್ರೆಂಚರು**
14. ಪಾಂಡಿಚೇರಿಯು ಭಾರತದ ಕೇಂದ್ರಾಡಳಿತ ಪ್ರದೇಶವನ್ನಾಗಿ ಘೋಷಿಸಿದ ವರ್ಷ – **ಕ್ರಿಶ 1963**
15. ಗೋವಾ ಇವರ ವಸಾಹತುವಾಗಿತ್ತು.– **ಪೋರ್ಚಗೀಸರು**
16. ಗೋವಾವನ್ನು ಪೋರ್ಚಗೀಸರಿಂದ ವಿಮೋಚನೆ ಗೊಳಿಸಿದ ವರ್ಷ – **ಕ್ರಿಶ 1961,**
17. ಕೇಂದ್ರಾಡಳಿತ ಪ್ರದೇಶವಾದ ಗೋವಾ ರಾಜ್ಯವಾಗಿ ಬದಲಾವಣೆಯಾದ ವರ್ಷ– **ಕ್ರಿ ಶ 1987**
18.ಭಾರತಕ್ಕೆ ಮೊದಲ ಬಂದ & ಭಾರತ ಬಿಟ್ಟು ಹೋದ ಕಡೆಯ ಯುರೋಪಿಯನ್ನರು – **ಪೋರ್ಚಗೀಸರು**
19. ವಿಶಾಲಾಂಧ್ರ ರಚನೆಗಾಗಿ 58 ದಿನ ಉಪವಾಸ ಸತ್ಯಾಗ್ರಹ ಕೈಗೊಂಡ ಅಸುನೀಗಿದವರು – **ಪೊಟ್ಟಿ ಶ್ರೀರಾಮುಲು**
20. ರಾಜ್ಯಗಳ ಪುನರ್‌ವಿಂಗಡನಾ ಆಯೋಗ ರಚನೆ ಯಾದ ವರ್ಷ – **ಕ್ರಿಶ 1953**
21.ರಾಜ್ಯಗಳ ಪುನರ್‌ವಿಂಗಡನಾ ಆಯೋಗದ ಅಧ್ಯಕ್ಷರು. – **ಜಸ್ಟೀಸ್ ಫಜಲ ಅಲಿ**
22. 1953ರಲ್ಲಿ ಭಾಷಾವಾರು ಆಧಾರದಲ್ಲಿ ಮೊದಲು ರಚನೆಯಾದ ರಾಜ್ಯ – **ಆಂದ್ರಪ್ರದೇಶ,**
23. ವಿಶಾಲ ಮೈಸೂರು ಅಸ್ತಿತ್ವಕ್ಕೆ ಬಂದದ್ದು ಅಥವಾ ಕರ್ನಾಟಕ ರಾಜ್ಯ ಏಕೀಕರಣಗೊಂಡಿದ್ದು – **1956 ನವಂಬರ್ 1**
24. ವಿಶಾಲ ಮೈಸೂರು ರಾಜ್ಯಕ್ಕೆ ಕರ್ನಾಟಕ ಎಂದು ನಾಮಕರಣವಾದದ್ದು – **1973 ನವಂಬರ್ 1**
25. ಬ್ರಿಟಿಷ್ ಸರಕಾರವು ಭಾರತ & ಪಾಕಿಸ್ತಾನ ಎಂಬ ಎರಡು ಸ್ವತಂತ್ರ ರಾಷ್ಟ್ರಗಳ ಘೋಷಣೆ ಮಾಡಿದ್ದು ಈ ವರದಿಯ ಆಧಾರದ ಮೇಲೆ – **ಮೌಂಟ್‌ಬ್ಯಾಟನ್ ವರದಿ**
26. ಮಂಟ್ ಬ್ಯಾಟನ್ ವರದಿ ಆಧರಿಸಿ ಬ್ರಿಟನ್ ಭಾರತದ ವಿಭಜನೆಯನ್ನು ಅಧಿಕೃತವಾಗಿ ಘೋಷಿಸಿದ್ದು.–**1947 ಜೂನ್ 3ರಂದು**
27. ಸಂವಿಧಾನದ 42ನೇ ತಿದ್ದುಪಡಿಯ ಮೂಲಕ ಸಂವಿಧಾನದಲ್ಲಿ ಈ ಅಂಶಗಳನ್ನು ಸೇರಿಸಲಾಯಿತು.– **ಜ್ಯಾತ್ಯಾತೀತ & ಸಮಾಜವಾದಿ**
28. ಹೈದ್ರಾಬಾದ್ ಸಂಸ್ಥಾನವು ಭಾರತದ ಒಕ್ಕೂಟಕ್ಕೆ ಸೇರ್ಪಡೆಯಾದದ್ದು. – **1948 ಸಪ್ಟಂಬರ್ 17**
29. ರಾಜ್ಯಗಳ ಪುನರ್‌ವಿಂಗಡನಾ ಆಯೋಗದ ಸದಸ್ಯರು – **ಕೆ.ಎಂ.ಪಣಿಕ್ಕರ್ & ಎಚ್.ಎನ್.ಕುಂಜ್ರು**
30. ರಾಜ್ಯಗಳ ಪುನರ್‌ವಿಂಗಡನಾ ಕಾನೂನಿನ ಪ್ರಕಾರ ರಚನೆಯಾದ ರಾಜ್ಯ & ಕೇಂದ್ರಾಡಳಿತ ಪ್ರದೇಶಗಳ ಸಂಖ್ಯೆ – **14 ರಾಜ್ಯಗಳು & 6 ಕೇಂದ್ರಾಡಳಿತ ಪ್ರದೇಶಗಳು.**
31. ಭಾರತದಲ್ಲಿ ಇಂದು ಇರುವ ರಾಜ್ಯ & ಕೇಂದ್ರಾಡಳಿತ ಪ್ರದೇಶಗಳ ಸಂಖ್ಯೆ – **29 ರಾಜ್ಯಗಳು & 6 ಕೇಂದ್ರಾಡಳಿತ ಪ್ರದೇಶಗಳು.**
32. 'ಪಾಕ್ ಆಕ್ರಮಿತ ಪ್ರದೇಶ' ಎಂದು ಈಗಲೂ ಕರೆಯಲ್ಪಡುವ ಪ್ರದೇಶ.– **ಕಾಶ್ಮೀರದ ವಾಯುವ್ಯ ಭಾಗ**

ಇದು ಎಸ್ ಎಸ್ ಎಸ್ ಓ ಎಫ್ ಡಿಜಿಟಲ್ ಗ್ರೂಪ್ ನ ಕೊಡುಗೆ

**ಪ್ರಶ್ನೆ 2] ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

**1. ಜುನಾಗಡದ ಪ್ರಜೆಗಳು ನವಾಬನ ವಿರುದ್ಧ ದಂಗೆಯೇಳಲು ಕಾರಣವೇನು?**
ಉತ್ತರ : ನವಾಬನು ಜುನಾಗಡವನ್ನು ಪಾಕಿಸ್ತಾನಕ್ಕೆ ಸೇರಿಸಲು ಇಚ್ಚಿಸಿದ್ದರಿಂದ ಅಲ್ಲಿನ ಪ್ರಜೆಗಳು ನವಾಬನ ವಿರುದ್ಧ ದಂಗೆಯೆದ್ದರು.
**2. ಹೈದರಾಬಾದ ನಿಜಾಮನು ಭಾರತ ಸೇರಲು ನಿರಾಕರಿಸಿದನು ಏಕೆ?**
ಉತ್ತರ : ಹೈದರಾಬಾದ ನಿಜಾಮನು ಸ್ವತಂತ್ರವಾಗುಳಿಯುವ ಉದ್ದೇಶದಿಂದ ಭಾರತದ ಒಕ್ಕೂಟ ಸೇರಲು ನಿರಾಕರಿಸಿದನು.
**3. ಜಮ್ಮು–ಕಾಶ್ಮೀರದ ಸ್ವಾತಂತ್ರ್ಯಕ್ಕಾಗಿ ದುಡಿದ ನ್ಯಾಷನಲ್ ಕಾನ್ಫರೆನ್ಸ್ ಪಕ್ಷದ ನಾಯಕನಾರು?**
ಉತ್ತರ : ಷೇಕ ಅಬ್ದುಲ್ಲಾ ಜಮ್ಮು–ಕಾಶ್ಮೀರದ ಸ್ವಾತಂತ್ರ್ಯಕ್ಕಾಗಿ ದುಡಿದ ನ್ಯಾಷನಲ್ ಕಾನ್ಪರೆನ್ಸ್ ಪಕ್ಷದ ನಾಯಕನಾಗಿದ್ದಾನೆ.
**4. ಸಂಸ್ಥಾನಗಳ ವಿಲೀನಿಕರಣವನ್ನು ವಿರೋಧಿಸಿದ ದೇಶೀಯ ಸಂಸ್ಥಾನಗಳು ಯಾವುವು?**
ಉತ್ತರ : **ಜುನಾಗಡ್, ಹೈದ್ರಾಬಾದ್ & ಜಮ್ಮು ಕಾಶ್ಮೀರ** ಈ ಮೂರು ಸಂಸ್ಥಾನಗಳು ಸಂಸ್ಥಾನಗಳ ವಿಲೀನಿಕರಣವನ್ನು ತೀವ್ರವಾಗಿ ವಿರೋಧಿಸಿದವು.

**ಪ್ರಶ್ನೆ 3] ಈ ಕೆಳಗಿನ ಪ್ರಶ್ನೆಗಳಿಗೆ 2–3 ವಾಕ್ಯಗಳಲ್ಲಿ ಉತ್ತರಿಸಿ.**

**1. ಪಾಂಡಿಚೇರಿಯನ್ನು ಫ್ರೆಂಚರಿಂದ ವಿಮುಕ್ತಿಗೊಳಿಸಿದ ರೀತಿಯನ್ನು ವಿವರಿಸಿ.**
ಉತ್ತರ : ಸ್ವಾತಂತ್ರ್ಯದ ನಂತರದಲ್ಲಿ ಫ್ರೆಂಚ್ ವಸಾಹತುಶಾಹಿಗಳು ಪಾಂಡಿಚೇರಿ, ಕಾರ್‍ಯಕಲ್, ಮಾಹೆ ಮತ್ತು ಚಂದ್ರನಗರಗಳ ಮೇಲಿನ ಹಿಡಿತವನ್ನು ಮುಂದುವರಿಸಿದ್ದರು. ಇವು ಭಾರತಕ್ಕೆ ಸೇರಬೇಕೆಂದು ಕಾಂಗ್ರೆಸ್, ಕಮ್ಯುನಿಸ್ಟ್ ಮತ್ತು ಇತರ ಸಂಘಟನೆಗಳ ನೇತೃತ್ವದಲ್ಲಿ ನಡೆದ ಹೋರಾಟದ ಫಲವಾಗಿ 1954 ರಲ್ಲಿ ಈ ಪ್ರದೇಶಗಳು ಭಾರತಕ್ಕೆ ಸೇರ್ಪಡೆಗೊಂಡವು.
**2. ಗೋವಾವನ್ನು ಪೋರ್ಚಗೀಸರಿಂದ ಹೇಗೆ ಮುಕ್ತಿಗೊಳಿಸಲಾಯಿತು?** **(ಎಪ್ರಿಲ್ 2016)**
ಉತ್ತರ : 1. ಭಾರತ ಸ್ವಾತಂತ್ರ್ಯಾನಂತರವೂ ಗೋವಾ ಪೋರ್ಚಗೀಸರ ಆಳ್ವಿಕೆಯಲ್ಲಿತ್ತು.
2. ಗೋವಾವನ್ನು ಭಾರತಕ್ಕೆ ಸೇರಬೇಕೆಂದು ನಿರಂತರವಾಗಿ ಚಳುವಳಿ ನಡೆಯಿತು.
3. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಗೋವಾ ವಿಮೋಚನಾ ಚಳುವಳಿಯನ್ನು ಬೆಂಬಲಿಸಿತು.
4. ಪೋರ್ಚಗೀಸ್ ಸರಕಾರ ಚಳುವಳಿಗಾರರ ಮೇಲೆ ದಮನಕಾರಿ ಕ್ರಮಗಳನ್ನು ಕೈಗೊಂಡಿತು.
5. ಇದರಿಂದಾಗಿ ಪೋಲಿಸರ ದೌರ್ಜನ್ಯ ಹೆಚ್ಚಿತು. 1961ರಲ್ಲಿ ಭಾರತದ ಸೈನ್ಯ ಮಧ್ಯಪ್ರವೇಶಿಸಿ ಗೋವಾವನ್ನು ವಶಪಡಿಸಿಕೊಂಡಿತು.

**3. ಸ್ವಾತಂತ್ರ್ಯಾನಂತರ ಭಾಷಾವಾರು ಪ್ರಾಂತ್ಯಗಳ ರಚನೆ ಅನಿವಾರ್ಯವಾಗಿತ್ತು, ಏಕೆ?** **(ಎಪ್ರಿಲ್ 2015)**
ಉತ್ತರ : ಸ್ವಾತಂತ್ರ್ಯಾನಂತರ ಭಾಷಾವಾರು ಪ್ರಾಂತ್ಯಗಳ ರಚನೆ ಅನಿವಾರ್ಯವಾಗಿತ್ತು. ಏಕೆಂದರೆ –
1. ಜನರಿಗೆ ಉತ್ತಮವಾದ ಆಡಳಿತವನ್ನು ನೀಡಲು ಜನರ ಭಾಷೆಯನ್ನು ಆಧರಿಸಿದ ಭೌಗೋಳಿಕ ಗಡಿಗಳನ್ನು ಗುರುತಿಸಬೇಕೆಂಬ ಒತ್ತಾಯ ತೀವ್ರವಾಗಿತ್ತು.
2. ಬ್ರಿಟಿಷ್ & ದೇಶೀಯ ಸಂಸ್ಥಾನಗಳೆರಡರಲ್ಲೂ ಜನರಾಡುವ ಭಾಷೆಯಲ್ಲಿ ಆಡಳಿತ ನಡೆಸುತ್ತಿರಲಿಲ್ಲ.

3. ಈ ಹಿನ್ನೆಲೆಯಲ್ಲಿ ದೇಶಾದ್ಯಂತ ಭಾಷಾವಾರು ರಾಜ್ಯಗಳನ್ನು ರಚಿಸಬೇಕೆಂಬ ಕೂಗು ತೀವ್ರವಾಗಿತ್ತು.

**4. ಜುನಾಗಡ್ ಭಾರತದ ಒಕ್ಕೂಟದಲ್ಲಿ ಹೇಗೆ ವಿಲೀನಗೊಂಡಿತು?**

ಉತ್ತರ : 1. ಜುನಾಗಡದ ನವಾಬನು ತನ್ನ ಸಂಸ್ಥಾನವನ್ನು ಪಾಕಿಸ್ತಾನಕ್ಕೆ ಸೇರಿಸಲು ಇಚ್ಚಿಸಿದ್ದನು.

2. ಇದನ್ನು ವಿರೋಧಿಸಿ ಪ್ರಜೆಗಳು ಆತನ ವಿರುದ್ಧ ಬೀದಿಗಿಳಿದರು.
3. ಇದನ್ನು ಎದುರಿಸಲಾರದೇ ನವಾಬನು ರಾಜ್ಯ ಬಿಟ್ಟು ಪಾಕಿಸ್ತಾನಕ್ಕೆ ಪಲಾಯನ ಮಾಡಿದನು.
4. ಜನಮತ ಗಣನೆಯ ಆಧಾರದ ಮೇಲೆ ಭಾರತ ಸರ್ಕಾರವು 1948ರಲ್ಲಿ ಭಾರತದ ಒಕ್ಕೂಟಕ್ಕೆ ಸೇರಿಸಿತು.

**ಪ್ರಶ್ನೆ 4] ಈ ಕೆಳಗಿನ ಪ್ರಶ್ನೆಗಳಿಗೆ 5–6 ವಾಕ್ಯಗಳಲ್ಲಿ ಉತ್ತರಿಸಿ.**

**1. ನಿರಾಶ್ರೀತರ ಸಮಸ್ಯೆಯನ್ನು ಹೋಗಲಾಡಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿತು? ಅಥವಾ**

ನಿರಾಶ್ರೀತರ ಸಮಸ್ಯೆಯನ್ನು ದೇಶವು ಹೇಗೆ ಎದುರಿಸಿತು? **(ಎಪ್ರಿಲ್ 2016)**

ಉತ್ತರ : **ನಿರಾಶ್ರೀತರ ಸಮಸ್ಯೆ ಬಗೆಹರಿಸಲು ಸರ್ಕಾರ ಕೈಗೊಂಡ ಕ್ರಮಗಳು.**

1. ಭಾರತದ ವಿಭಜನೆಯು ಸೃಷ್ಟಿಸಿದ ಘೋರ ಪರಿಣಾಮಗಳಲ್ಲಿ ನಿರಾಶ್ರಿತರ ಸಮಸ್ಯೆಯೂ ಒಂದು.
2. ಪಾಕಿಸ್ತಾನದಲ್ಲಿದ್ದ ಲಕ್ಷಾಂತರ ಮುಸ್ಲಿಮೇತರರು ಮನೆ ಮಠಗಳನ್ನು ಕಳೆದುಕೊಂಡು ಭಾರತಕ್ಕೆ ನಿರಾಶ್ರಿತರಾಗಿ ಬಂದರು.
3. ಇವರಿಗೆಲ್ಲಾ ವಸತಿ, ವೈದ್ಯಕೀಯ ಮತ್ತು ಸುರಕ್ಷತಾ ಕ್ರಮಗಳನ್ನು ಕೈಗೊಳ್ಳುವದು ಸರಕಾರದ ಕರ್ತವ್ಯವಾಗಿತ್ತು.
4. ಈ ಲಕ್ಷಾಂತರ ನಿರಾಶ್ರಿತರ ಪುನರ್‌ವಸತಿಗಾಗಿ ಸರ್ಕಾರ ಯೋಜನೆ ರೂಪಿಸಿತು.
5. ನಿರಾಶ್ರಿತರು ಪಂಜಾಬ್, ರಾಜಸ್ತಾನ, ಹಿಮಾಚಲ ಪ್ರದೇಶ, ಮಹಾರಾಷ್ಟ್ರ ಹಾಗೂ ಉತ್ತರ ಪ್ರದೇಶಗಳಲ್ಲಿ ನೆಲೆಸಿದರು.

**2. ದೇಶೀಯ ಸಂಸ್ಥಾನಗಳ ವಿಲೀನೀಕರಣವನ್ನು ಸರ್ಧಾರ ವಲ್ಲಭಭಾಯಿ ಪಟೇಲರು ಹೇಗೆ ಸಮರ್ಥವಾಗಿ ನಿಭಾಯಿಸಿದರು? ವಿವರಿಸಿ. (ಎಪ್ರಿಲ್ 2015)**

ಉತ್ತರ : **ದೇಶೀಯ ಸಂಸ್ಥಾನಗಳ ವಿಲೀನೀಕರಣವನ್ನು ಸರ್ಧಾರ ವಲ್ಲಭಭಾಯಿ ಪಟೇಲರ ಪಾತ್ರ.**

1. ಬ್ರಿಟಿಷರು ಭಾರತ ಬಿಟ್ಟು ಹೋಗುವಾಗ ದೇಶದಲ್ಲಿ 562 ಸಂಸ್ಥಾನಗಳಿದ್ದವು.
2. 1947 ರ ವಿಲೀನ ಕಾಯ್ದೆಯ ಪ್ರಕಾರ ಭಾರತ ಸರ್ಕಾರ ಎಲ್ಲಾ ದೇಶಿಯ ಸಂಸ್ಥಾನಗಳನ್ನು ಭಾರತ ಒಕ್ಕೂಟಕ್ಕೆ ಸೇರಿಸಿಕೊಳ್ಳಲು ಗೃಹ ಮಂತ್ರಿ ಸರ್ಧಾರ ವಲ್ಲಭಭಾಯಿ ಪಟೇಲರ ನೇತೃತ್ವದಲ್ಲಿ ಆಹ್ವಾನ ನೀಡಿತು.
3. ಈ ರೀತಿ ವಿಲೀನಗೊಂಡವರಿಗೆ ಪ್ರತಿಯಾಗಿ ರಾಜ್ಯಾದಾಯವನ್ನು ಆಧರಿಸಿ ರಾಜಧನವನ್ನು ನಿಗದಿಪಡಿಸಿತು.
4. ಸಂಸ್ಥಾನಗಳ ವಿಲೀನಗೊಳ್ಳುವ ಪ್ರಕ್ರಿಯೆಯಲ್ಲಿ ಜುನಾಗಡ್, ಹೈದ್ರಾಬಾದ್ ಮತ್ತು ಜಮ್ಮು ಕಾಶ್ಮೀರ ಸಂಸ್ಥಾನಗಳು ತೀವ್ರ ಪ್ರತಿರೋಧವನ್ನು ತೋರಿದವು.
5. ಭಾರತದ ಗೃಹ ಮಂತ್ರಿ ಸರ್ಧಾರ ವಲ್ಲಭಭಾಯಿ ಪಟೇಲರ ನೇತೃತ್ವದಲ್ಲಿ ಜನಾಭಿಪ್ರಾಯ & ಸೈನಿಕ ಕಾರ್ಯಾಚರಣೆ ಮೂಲಕ ಭಾರತದ ದೇಶೀಯ ಸಂಸ್ಥಾನಗಳನ್ನು ವಿಲೀನಗೊಳಿಸುವ ಕಾರ್ಯಭಾರವನ್ನು ಯಶಸ್ವಿಯಾಗಿ ನಿರ್ವಹಿಸಲಾಯಿತು.

**3. ಭಾಷವಾರು ಪ್ರಾಂತ್ಯಗಳ ವಿಂಗಡನೆಗೆ ಸರ್ಕಾರ ಕೈಗೊಂಡ ಕ್ರಮವನ್ನು ಕುರಿತು ಬರೆಯಿರಿ.**

ಉತ್ತರ : **ಭಾಷಾವಾರು ಪ್ರಾಂತ್ಯಗಳ ವಿಂಗಡನೆಗೆ ಸರ್ಕಾರ ಕೈಗೊಂಡ ಕ್ರಮಗಳು**

1. ಭಾರತ ಸ್ವತಂತ್ರಾನಂತರ ದೇಶದಾದ್ಯಂತ ಭಾಷಾವಾರು ರಾಜ್ಯಗಳನ್ನು ರಚಿಸಬೇಕೆಂಬ ಕೂಗು ತೀವ್ರವಾಯಿತು.
2. ವಿಶಾಲಾಂದ್ರ ರಚಿಸಬೇಕೆಂದು 1952ರಲ್ಲಿ ಪೊಟ್ಟಿ ಶ್ರೀರಾಮುಲು 58 ದಿನಗಳ ಕಾಲ ಉಪವಾಸ ಮಾಡಿ ಅಸುನೀಗಿದ ನಂತರ ಈ ಬೇಡಿಕೆ ತೀವ್ರ ಸ್ವರೂಪವನ್ನು ಪಡೆಯಿತು.
3. ಹೋರಾಟದ ಸ್ವರೂಪವನ್ನು ಅರಿತ ಕೇಂದ್ರ ಸರಕಾರ 1953ರಲ್ಲಿ ರಾಜ್ಯಗಳ ಪುನರ್ ವಿಂಗಡನೆಗೆ ಫಜಲ್ ಅಲಿಯವರ ಅಧ್ಯಕ್ಷತೆಯಲ್ಲಿ ಆಯೋಗವನ್ನು ರಚಿಸಿತು.
4. ಕೆ.ಎಂ.ಪಣಿಕ್ಕರ್ ಮತ್ತು ಹೆಚ್.ಎನ್.ಕುಂಜ್ರು ಈ ಆಯೋಗದ ಸದಸ್ಯರಾಗಿದ್ದರು.
5. ಈ ಆಯೋಗದ ವರದಿಯಂತೆ 1956ರಲ್ಲಿ ರಾಜ್ಯ ಪುನರ್ವಿಂಗಡನಾ ಕಾನೂನು ಜಾರಿಗೆ ಬಂದಿತು.
6. ಈ ಕಾನೂನಿನ ಪ್ರಕಾರ ದೇಶದಲ್ಲಿ 14 ರಾಜ್ಯಗಳು & 6 ಕೇಂದ್ರಾಡಳಿತ ಪ್ರದೇಶಗಳು ರಚನೆಯಾದವು.

**4. ಸರ್ಧಾರ ಪಟೇಲರು ಹೈದರಾಬಾದಿನ ಮೇಲೆ ಪೋಲಿಸ್ ಕಾರ್ಯಾಚರಣೆ ಕೈಗೊಳ್ಳಲು ಕಾರಣವೇನು? ಅಥವಾ**

**ಹೈದ್ರಾಬಾದ್ ಭಾರತದ ಒಕ್ಕೂಟದಲ್ಲಿ ವಿಲೀನವಾದ ಬಗೆ ಹೇಗೆ?(ಜೂನ್ 2015)**

ಉತ್ತರ : 1. ಭಾರತ ಸ್ವತಂತ್ರ ಪಡೆದ ಸಂದರ್ಭದಲ್ಲಿ ಹೈದರಾಬಾದ ನಿಜಾಮನು ಸ್ವತಂತ್ರವಾಗಿ ಉಳಿಯುವ ಉದ್ದೇಶದಿಂದ ಭಾರತದ ಒಕ್ಕೂಟಕ್ಕೆ ಸೇರಲು ನಿರಾಕರಿಸಿದನು.

2. ಇದರಿಂದ ಸಾಕಷ್ಟು ಹೋರಾಟಗಳು ನಡೆದವು.
3. ಭಾರತ ಸರಕಾರ ನಿಜಾಮನೊಂದಿಗೆ ನಡೆಸಿದ ಮಾತುಕತೆಗಳು ಫಲಪ್ರದವಾಗಲಿಲ್ಲ.
4. ನಿಜಾಮರು ಭಾರತದೊಂದಿಗೆ ಯುದ್ಧ ಮಾಡಲು ಯುದ್ಧ ಸಾಮಗ್ರಿಗಳನ್ನು ಆಮದು ಮಾಡಿಕೊಂಡನು.
5. ಇದನ್ನರಿತ ಸರ್ಧಾರ ಪಟೇಲರು ಹೈದರಾಬಾದ ಮೇಲೆ ಸೈನ್ಯವನ್ನು ಕಳುಹಿಸಿ ನಿಜಾಮನನ್ನು ಸೋಲಿಸಿ 1948 ರಲ್ಲಿ ಭಾರತದೊಂದಿಗೆ ವಿಲೀನಗೊಳಿಸಿದರು.

**5. ಜಮ್ಮು & ಕಾಶ್ಮೀರದ ಸಮಸ್ಯೆಯನ್ನು ಸಂಕ್ಷಿಪ್ತವಾಗಿ ವಿವರಿಸಿ. ಅಥವಾ**

**ಜಮ್ಮು – ಕಾಶ್ಮೀರವು ಭಾರತ ಒಕ್ಕೂಟವನ್ನು ಸೇರಿದ್ದು ಹೇಗೆ ವಿವರಿಸಿ**

ಉತ್ತರ : 1. ಜಮ್ಮು & ಕಾಶ್ಮೀರದ ಅರಸ ಹರಿಸಿಂಗ್ ಭಾರತದ ಒಕ್ಕೂಟ ಸೇರುವಲ್ಲಿ ವಿಳಂಬ ಮಾಡಿದ್ದು ಸಮಸ್ಯೆಗೆ ಕಾರಣವಾಯಿತು.

2. ಪಾಕಿಸ್ತಾನವು ಕಾಶ್ಮೀರವನ್ನು ವಶಪಡಿಸಿಕೊಳ್ಳಲು ನಿರ್ಧರಿಸಿ ದಾಳಿ ಮಾಡಿತು. ಭಾರತದ ಸೇನೆ ಕಾಶ್ಮೀರದ ರಕ್ಷಣೆಗೆ ಧಾವಿಸಿ ಈ ದಾಳಿಯನ್ನು ಹಿಮ್ಮೆಟ್ಟಿಸಿತು.
3. ಅಕ್ಟೋಬರ್ 26 1947 ರಂದು ಕಾಶ್ಮೀರದ ಮಹಾರಾಜ ಹರಿಸಿಂಗ್ & ನ್ಯಾಷನಲ್ ಕಾನ್ಫರೆನ್ಸ್ ಪಕ್ಷದ ಷೇಕ್ ಅಬ್ದುಲ್ಲಾರ ಬೆಂಬಲದೊಂದಿಗೆ ಭಾರತದ ಒಕ್ಕೂಟದಲ್ಲಿ ವಿಲೀನಗೊಳಿಸಲು ಒಪ್ಪಿದರು.
4. ಪಾಕಿಸ್ತಾನವು ಕಾಶ್ಮೀರದ ವಿಲೀನವನ್ನು ಪ್ರಶ್ನಿಸಿ ವಿಶ್ವಸಂಸ್ಥೆಯಲ್ಲಿ ದಾವೆ ಹೂಡಿತು.
5. ಯುದ್ಧ ನಿಲ್ಲಿಸುವಂತೆ ವಿಶ್ವಸಂಸ್ಥೆ ಆದೇಶ ನೀಡಲು ಕೆಲವೊಂದು ಭಾಗ ಪಾಕಿಸ್ತಾನದ ವಶ ಉಳಿಯಿತು. ಇದನ್ನು ಪಾಕ್ ಆಕ್ರಮಿತ ಕಾಶ್ಮೀರ ಎಂದು ಕರೆಯಲಾಗುತ್ತದೆ.

6 ಕಾಶ್ಮೀರ ಸಮಸ್ಯೆ ಇಂದಿಗೂ ಸಮಸ್ಯೆಯಾಗಿ ಉಳಿದಿದೆ.

## ಅಧ್ಯಾಯ 10. 20ನೇ ಶತಮಾನದ ರಾಜಕೀಯ ಆಯಾಮಗಳು

**ಪ್ರಶ್ನೆ 1] ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1. ಮೊದಲನೆ ಮಹಾಯುದ್ಧವು 1919ರಲ್ಲಿ ________ ಒಪ್ಪಂದದೊಂದಿಗೆ ಕೊನೆಗೊಂಡಿತು.– **ವರ್ಸೈಲ್ಸ್ ಒಪ್ಪಂದ**
2. 1ನೇ ಜಾಗತಿಕ ಮಹಾ ಯುದ್ದದ ನಂತರ ಯುದ್ದವನ್ನು ತಡೆಯಲು ಸ್ಥಾಪಿಸಿದ ಸಂಸ್ಥೆ– **ರಾಷ್ಟ್ರಸಂಘ**
3. 19ನೇ ಶತಮಾನದಲ್ಲಿ ರಷ್ಯಾವನ್ನು ಆಳಿದ ದೊರೆಗಳು.– **ಝಾರ್ ದೊರೆಗಳು**
4. ಇವರ ಆಳ್ವಿಕೆಯನ್ನು ರಾಷ್ಟ್ರೀಯತೆಯ ಜೈಲು ಎಂದು ಕರೆಯಲಾಗುತ್ತಿತ್ತು. – **ಝಾರ್ ದೊರೆಗಳ ಆಳ್ವಿಕೆ**
5. 1905ರಲ್ಲಿ ಪುಟ್ಟ ಜಪಾನ ರಾಷ್ಟ್ರ ಈ ದೇಶವನ್ನು ಸೋಲಿಸಿತು.– **ರಷ್ಯಾ**
6. ರಷ್ಯಾದ ಕೊನೆಯ ದೊರೆ.– **2ನೇ ನಿಕೋಲಸ್**
7. ರಷ್ಯಾದಲ್ಲಿ ಕಮ್ಯುನಿಸ್ಟ್ ಸರ್ಕಾರವನ್ನು ಸ್ಥಾಪಿಸಿದವರು. – **ಲೇನಿನ್**
8. ರಷ್ಯಾ ಕ್ರಾಂತಿ ನಡೆದ ವರ್ಷ.– **ಕ್ರಿಶ 1917**
9. ರಷ್ಯಾದಲ್ಲಿ ಪಂಚವಾರ್ಷಿಕ ಯೋಜನೆಯನ್ನು ಜಾರಿಗೆ ತಂದವರು.– **ಸ್ಟಾಲಿನ್ (ಜೂನ್ 2015)**
10. ಈ ದೇಶದ ಮಾದರಿಯಲ್ಲಿ ಭಾರತ ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೊಳಿಸಿತು. – **ರಷ್ಯಾ ದೇಶ**
11. ಜಗತ್ತಿನ ಮೊದಲ ಗಗನಯಾತ್ರಿ.– **ಯೂರಿಗಗಾರಿನ್ (ರಷ್ಯಾ)**
12. 'ಜರ್ಮನ್ನರ ಎಲ್ಲಾ ಸಮಸ್ಯೆಗಳಿಗೂ ಯಹೂದಿಗಳೇ ಕಾರಣ' ಎಂದು ಹೇಳಿದವರು – **ಹಿಟ್ಲರ್**
13. ಜರ್ಮನಿಯ ನಾಜಿ ಪಕ್ಷದ ನಾಯಕ.– **ಅಡಾಲ್ಫ್ ಹಿಟ್ಲರ್**
14. ಹಿಟ್ಲರ್‌ನಿಗೆ ಇದ್ದ ಬಿರುದು. – **ಫ್ಯೂರರ್**
15. ಹಿಟ್ಲರ್‌ನು ರಚಿಸಿದ ಕ್ರೂರ ಸೈನ್ಯ ಪಡೆ – **ಬೂದು ಅಂಗಿ ದಳ**
16. ಇಟಲಿಯ ಪ್ಯಾಸಿಸ್ಟ್ ಸರ್ವಾಧಿಕಾರಿ.– **ಮುಸಲೋನಿ**
17. ಜರ್ಮನಿ : **ನಾಜಿವಾದ** : : ಇಟಲಿ : ________ – **ಪ್ಯಾಸಿಸ್ಟವಾದ**
18. ಜರ್ಮನಿ : **ಹಿಟ್ಲರ್** : : ಇಟಲಿ : ________ – **ಮುಸಲೋನಿ**
19. ಚೀನಾ ಕಮ್ಯುನಿಸ್ಟ್ ರಾಷ್ಟ್ರವಾಗಿ ಉದಯವಾದ ವರ್ಷ. – **ಕ್ರಿಶ 1949**
20. ಚೀನಾದ ಕಮ್ಯುನಿಸ್ಟ್ ಪಕ್ಷದ ನೇತಾರ.– **ಮಾವೋತ್ಸೆತುಂಗ್**
21. ಮುನ್ನೆಡೆತ ಮಹಾಜಿಗಿತ ನೀತಿಯನ್ನು ಜಾರಿಗೊಳಿಸಿದ ದೇಶ.– **ಚೀನಾ**
22. ಎರಡನೇ ಮಹಾಯುದ್ಧವು ನಡೆದದ್ದು ಈ ಅವಧಿಯಲ್ಲಿ.–**1939 – 1945**
23. ಅಮೇರಿಕಾದ ಎರಡನೇ ಜಾಗತಿಕ ಮಹಾಯುದ್ಧ ಸೇರಲು ಇದು ಕಾರಣ.– **ಜಪಾನ ಪರ್ಲಹಾರ್ಬರ್ ಮೇಲೆ ದಾಳಿ ಮಾಡಿದ್ದು**

24. ಕದನ ಬಾಂಧವ್ಯತ್ರಯ ಮೈತ್ರಿಕೂಟ ರಾಷ್ಟ್ರಗಳ ಗುಂಪು – **ಬ್ರಿಟನ್, ಫ್ರಾನ್ಸ್, ರಷ್ಯಾ**

25. ಮೊದಲ ಮಹಾಯುದ್ಧ ನಡೆದದ್ದು ಈ ಅವಧಿಯಲ್ಲಿ. **1914 – 1918**

26. ಲೆನಿನ್ ರಷ್ಯಾದ ಜನತೆಗೆ ನೀಡಿದ ಘೋಷಣೆ –**'ಶಾಂತಿ, ಆಹಾರ, ಭೂಮಿ'**

27. ಕದನ ಸೌಹಾರ್ದತ್ರಯ ಮೈತ್ರಿಕೂಟ ರಾಷ್ಟ್ರಗಳ ಗುಂಪು – **ಜರ್ಮನಿ, ಆಸ್ಟ್ರೀಯ–ಹಂಗೇರಿ, ಇಟಲಿ.**

28. ಯುರೋಪಿಯನ್ ದೇಶಗಳಲ್ಲಿ ತೀವ್ರವಾದ ಪೈಪೋಟಿಯನ್ನು ಸೃಷ್ಟಿಸಿದ ಎರಡು ಅಂಶಗಳು – **ಕೈಗಾರಿಕಾ ಕ್ರಾಂತಿ & ನೂತನ ಆವಿಷ್ಕಾರಗಳು**

29. ಮೊದಲ ಮಹಾಯುದ್ದಕ್ಕೆ ಕಾರಣವಾದ ತತ್‌ಕ್ಷಣದ ಅಂಶ – **ಆಸ್ಟ್ರೀಯಾದ ರಾಜಕುಮಾರ ಅರ್ಚಡ್ಯೂಕ್ ಫ್ರಾನ್ಸಿಸ್ ಫರ್ಡಿನೆಂಡನ ಹತ್ಯೆ.**

30. ಜರ್ಮನಿಯಲ್ಲಿ ಹಿಟ್ಲರ್‌ನು ಗೋಬೆಲ್ಸ್ ಎಂಬ ವಿಶೇಷವಾದ ಮಂತ್ರಿಯನ್ನು ನೇಮಿಸಿದ ಉದ್ದೇಶ – **ಜನಾಂಗೀಯ ದ್ವೇಷವನ್ನು ಪ್ರಸಾರ ಮಾಡಲು.**

31. ಜಗತ್ತಿನ ಮಿಲಿಟರಿ ಕಾರ್ಯವ್ಯೂಹದಲ್ಲೇ ಅತ್ಯಂತ ವಿಶಿಷ್ಟವಾದ ಪ್ರಯೋಗ – **ಕಮ್ಯುನಿಷ್ಟರ ದೀರ್ಘ ಪಯಣ.**

32. ಶೀತಲಸಮರದ ಎರಡು ಬಣಗಳ ನೇತೃತ್ವ ವಹಿಸಿದ ರಾಷ್ಟ್ರಗಳು – **ಅಮೇರಿಕಾ ಮತ್ತು ರಷ್ಯಾ**

33. ಅ ಪಟ್ಟಿಯಲ್ಲಿ ನಾಯಕರು ಮತ್ತು ಬಿ ಪಟ್ಟಿಯಲ್ಲಿ ಅವರ ಕಾರ್ಯಗಳನ್ನು ಸೂಚಿಸಲಾಗಿದೆ. ಅವುಗಳಿಗೆ ಸರಿ ಹೊಂದುವ ಉತ್ತರದ ಗುಂಪನ್ನು ಗುರುತಿಸಿ. **(ಎಪ್ರಿಲ್ 2015)**

| ಅ ಪಟ್ಟಿ | ಬ ಪಟ್ಟಿ |
|---|---|
| ಚ) ಗೋರ್ಬಚೆವ್ | 1. ರಾಷ್ಟ್ರೀಯ ಪ್ಯಾಸಿಸ್ಟ್ ಪಕ್ಷ |
| ಛ) ಸ್ಟಾಲಿನ್ | 2. ನಾಜಿ ಪಕ್ಷ |
| ಝ) ಹಿಟ್ಲರ್ | 3. ಪಂಚವಾರ್ಷಿಕ ಯೋಜನೆಗಳು |
| ಜ) ಮುಸೋಲಿನಿ | 4. ಗ್ಲಾಸ್‌ನೋಸ್ತ |

**ಉತ್ತರ : ಚ–4, ಛ–3, ಝ–2, ಜ–1**

**ಪ್ರಶ್ನೆ 3] ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ.**

**1. ಶೀತಲ ಸಮರ ಎಂದರೇನು?**

ಉತ್ತರ : ಎರಡನೇ ಮಹಾಯುದ್ಧದ ನಂತರ ಜಗತ್ತಿನಲ್ಲಿ ಎರಡು ಬಣಗಳ ಅಂದರೆ ಅಮೇರಿಕಾ ಮತ್ತು ರಷ್ಯಾ ಬಣಗಳ ನಡುವೆ ಉದ್ಭವಿಸಿದ ನಿರಂತರ ಭಯ, ದ್ವೇಷ, ಅಸೂಯೆ ಮತ್ತು ಆತಂಕದ ಪರಿಸ್ಥಿತಿಯನ್ನು ಶೀತಲ ಸಮರ ಎಂದು ಕರೆಯುತ್ತಾರೆ.

**2. ರಷ್ಯಾವು ಮೊದಲ ಮಹಾಯುದ್ಧದಿಂದ ಹಿಂದೆ ಸರಿಯಲು ಕಾರಣವೇನು?**

ಉತ್ತರ : 1917ರಲ್ಲಿ ರಷ್ಯಾದಲ್ಲಿ ಸಮಾಜವಾದಿ ಕ್ರಾಂತಿ ಸಂಭವಿಸದ್ದುದರಿಂದ ಮೊದಲ ಮಹಾಯುದ್ಧದಿಂದ ಹಿಂದೆ ಸರಿಯಿತು.

**3. ಹೊಲೋಕಾಸ್ಟ್ ಎಂದರೇನು?**

ಉತ್ತರ : ಜರ್ಮನಿಯಲ್ಲಿ ಹಿಟ್ಲರನು ಜನಾಂಗೀಯ ದ್ವೇಷವನ್ನು ಬಿತ್ತುವ ಮೂಲಕ ಸುಮಾರು 6 ಮಿಲಿಯನ್ ಯೆಹೂದಿಗಳನ್ನು, ಕೋಟಿಗೂ ಹೆಚ್ಚು ಇತರೆ ಜನರನ್ನು ಕೊಲ್ಲಿಸಿದನು. ಇವನ ಸಾಮೂಹಿಕ ಕಗ್ಗೊಲೆಗಳನ್ನು ಹೊಲೋಕಾಸ್ಟ್ ಎಂದು ಕರೆಯಲಾಗಿದೆ.

**4. ಅಣುಬಾಂಬಿಗೆ ತುತ್ತಾದ ಜಪಾನಿನ ಎರಡು ನಗರಗಳು ಯಾವುವು?**

ಉತ್ತರ : ಹಿರೋಶಿಮಾ & ನಾಗಾಸಾಕಿ ನಗರಗಳು ಅಣುಬಾಂಬಿಗೆ ತುತ್ತಾದ ಜಪಾನಿನ ಎರಡು ನಗರಗಳಾಗಿವೆ.

**5. ರಷ್ಯಾದಲ್ಲಿ 1905ರಲ್ಲಿ ಝಾರ್ ದೊರೆಗಳ ವಿರುದ್ಧ ವ್ಯಾಪಕವಾದ ಬಂಡಾಯ ಉಂಟಾಯಿತು. ಏಕೆ? (ಎಪ್ರಿಲ್ 2016)**

ಉತ್ತರ : ರಷ್ಯಾ ದೇಶವು 1905ರಲ್ಲಿ ಜಪಾನ ವಿರುದ್ಧ ಯುದ್ಧದಲ್ಲಿ ಸೋತಿದ್ದರಿಂದ ರಷ್ಯಾದಲ್ಲಿ ಝಾರ್ ದೊರೆಗಳ ವಿರುದ್ಧ ವ್ಯಾಪಕವಾದ ಬಂಡಾಯ ಉಂಟಾಯಿತು.

**6. ಮೊದಲನೇ ಮಹಾಯುದ್ಧದ ವೇಳೆಯಿದ್ದ ಎರಡು ಮೈತ್ರಿಕೂಟಗಳಾವುವು?**

ಉತ್ತರ : ಮೊದಲನೇ ಮಹಾಯುದ್ಧದ ವೇಳೆಯಿದ್ದ ಎರಡು ಮೈತ್ರಿಕೂಟಗಳೆಂದರೆ ಕದನ ಬಾಂಧವ್ಯತ್ರಯ ಮತ್ತು ಕದನ ಸೌಹಾರ್ದತ್ರಯ.

**7. ಗೋಬೆಲ್ಸ್ ಎಂದರೆ ಯಾರು?**

ಉತ್ತರ : ಹಿಟ್ಲರ್ ಜನಾಂಗೀಯ ದ್ವೇಷವನ್ನು ಪ್ರಸಾರ ಮಾಡಲು 'ಗೋಬೆಲ್ಸ್' ಎಂಬ ವಿಲೀಶವಾದ ಮಂತ್ರಿಯನ್ನು ನೇಮಕ ಮಾಡಿದ್ದನು.

**8. ಎರಡನೇ ಮಹಾಯುದ್ಧಕ್ಕೆ ತಕ್ಷಣದ ಕಾರಣವೇನು?**

ಉತ್ತರ : 2ನೇ ಮಹಾಯುದ್ಧವು 1939 ಸೆಪ್ಟಂಬರ್ 1ರಂದು ಜರ್ಮನಿಯು ಪೋಲೆಂಡಿನ ಮೇಲೆ ದಾಳಿ ಮಾಡುವುದರೊಂದಿಗೆ ಪ್ರಾರಂಭವಾಯಿತು.

**9. ಜಪಾನ್ ದಾಳಿಗೆ ತುತ್ತಾದ ಅಮೇರಿಕಾದ ನೌಕಾ ನೆಲೆ ಯಾವುದು?**

ಉತ್ತರ : ಜಪಾನ್ ದಾಳಿಗೆ ತುತ್ತಾದ ಅಮೇರಿಕಾದ ನೌಕಾ ನೆಲೆ ಪರ್ಲ್‌ಹಾರ್ಬರ್.

**ಪ್ರಶ್ನೆ 4] ಈ ಕೆಳಗಿನ ಪ್ರಶ್ನೆಗಳಿಗೆ 3 – 4 ವಾಕ್ಯದಲ್ಲಿ ಉತ್ತರಿಸಿ.**

**1. ಪ್ರಥಮ ಮಹಾಯುದ್ಧಕ್ಕೆ ಕಾರಣಗಳೇನು?**

ಉತ್ತರ : ಪ್ರಥಮ ಮಹಾಯುದ್ಧಕ್ಕೆ ಕಾರಣಗಳು –

1. ಅತ್ಯುಗ್ರ ರಾಷ್ಟ್ರೀಯತೆ, 2. ಪ್ರತಿಸ್ಪರ್ಧೆಯ ಮೈತ್ರಿಕೂಟಗಳ ಪೈಪೋಟಿ, 3. ಶಸ್ತ್ರಾಸ್ತ್ರಗಳ ಪೈಪೋಟಿ

**2. ಪ್ರಥಮ ಮಹಾಯುದ್ಧಕ್ಕೆ ತತ್‌ಕ್ಷಣದ ಕಾರಣವನ್ನು ವಿವರಿಸಿ.**

ಉತ್ತರ : **ಪ್ರಥಮ ಮಹಾಯುದ್ಧಕ್ಕೆ ತತ್‌ಕ್ಷಣದ ಕಾರಣವೆಂದರೆ –**

1. 1914 ಜುಲೈ 28 ರಂದು ಆಸ್ಟ್ರೀಯಾದ ರಾಜಕುಮಾರ ಅರ್ಕಡ್ಯೂಕ್ ಫ್ರಾನ್ಸಿಸ್ ಫರ್ಡಿನೆಂಡ್‌ನ ಹತ್ಯೆಯಾಯಿತು.
2. ಈ ಘಟನೆಯಿಂದಾಗಿ ಆಸ್ಟ್ರೀಯಾ ಮತ್ತು ಸರ್ಬಿಯಾದ ಮೇಲೆ ದಾಳಿ ಮಾಡಿತು.
3. ಹೀಗೆ ಮೊದಲ ಮಹಾಯುದ್ಧ ಆರಂಭವಾಯಿತು.

**3. ಪ್ರಥಮ ಮಹಾಯುದ್ದದಿಂದ ಆದ ಪರಿಣಾಮಗಳೇನು?**

ಉತ್ತರ : **ಪ್ರಥಮ ಮಹಾಯುದ್ದದಿಂದ ಆದ ಪರಿಣಾಮಗಳು**

1. ಸಾಮಾನ್ಯ ನಾಗರಿಕರು ಸೇರಿ ಲಕ್ಷಾಂತರ ಜನರು ಯುದ್ಧದಲ್ಲಿ ಸತ್ತರು.
2. ಹೆಚ್ಚು ಜನ ಯುದ್ದದಲ್ಲಿ ಗಾಯಗೊಂಡು ಅಂಗವಿಕಲರಾದರು.
3. ನಗರಗಳು, ರಸ್ತೆ, ಸೇತುವೆಗಳು, ರೈಲುಮಾರ್ಗಗಳು ಕಾರ್ಖಾನೆಗಳು ನಾಶವಾದವು.
4. ಇದು ಅಮೇರಿಕಾದ ಮಹಾಕುಸಿತಕ್ಕೂ ಕಾರಣವಾಯಿತು.
5. ಭವಿಷ್ಯದಲ್ಲಿ ಯುದ್ಧ ನಡೆಯುವದನ್ನು ತಡೆಯಲು ರಾಷ್ಟ್ರ ಸಂಘ ಸ್ಥಾಪನೆಯಾಯಿತು.

**4. ರಷ್ಯಾದಲ್ಲಿ ಝಾರ್ ಶಾಹಿಯ ಆಳ್ವಿಕೆಯನ್ನು ರಾಷ್ಟ್ರೀಯತೆಯ ಜೈಲು ಎಂದು ಏಕೆ ಕರೆಯಲಾಗುತ್ತಿತ್ತು?**

ಉತ್ತರ : 1. 19ನೇ ಶತಮಾನದಲ್ಲಿ ಝಾರ್ ದೊರೆಗಳು ತಮ್ಮ ಕೆಳಗಿದ್ದ ಕುಲೀನರು, ಜಮೀನ್ದಾರರು, ರೈತರನ್ನು ಮತ್ತು ಬಡವರನ್ನು ತೀವ್ರವಾಗಿ ಶೋಷಿಸುತ್ತಿದ್ದರು.

2. ಝಾರ್ ಚಕ್ರವರ್ತಿಗಳ ಆಳ್ವಿಕೆಯಿಂದ ಜನರು ತುಂಬಾ ಬೇಸತ್ತಿದ್ದರು.
3. ಆದ್ದರಿಂದ ರಷ್ಯಾದಲ್ಲಿ ಝಾರ್‌ಶಾಹಿಯನ್ನು ರಾಷ್ಟ್ರೀಯತೆಯ ಜೈಲು ಎಂದು ಕರೆಯಲಾಗುತ್ತಿತ್ತು.

**5. ರಷ್ಯಾದಲ್ಲಿ ಸಮಾಜವಾದಿ ವ್ಯವಸ್ಥೆ ಕುಸಿಯಲು ಕಾರಣವೇನು? ಅಥವಾ ಸೋವಿಯತ್ ರಷ್ಯಾದ ವಿಘಟನೆಗೆ ಕಾರಣವಾದ ಎರಡು ಸುಧಾರಣೆಗಳು ಯಾವುವು?**

ಉತ್ತರ : ಸೋವಿಯತ್ ಒಕ್ಕೂಟದ ಅಧ್ಯಕ್ಷರಾದ ಗೋರ್ಬಚೇವ್ 1985ರಲ್ಲಿ ಗ್ಲಾಸ್‌ನೋಸ್ತ್(ಮುಕ್ತತೆ) ಮತ್ತು 1987ರಲ್ಲಿ ಪೆರೆಸ್ಟ್ರೋಯಿಕ(ಪುನರ್‌ಸಂಘಟನೆ) ಎಂಬ ಸುಧಾರಣೆಗಳನ್ನು ಜಾರಿಮಾಡಿದ ನಂತರ ರಷ್ಯಾದಲ್ಲಿ ಸಮಾಜವಾದಿ ವ್ಯವಸ್ಥೆ ಕುಸಿದು ಸೋವಿಯತ್ ಒಕ್ಕೂಟ ವಿಘಟನೆಯಾಯಿತು.

**6. ರಷ್ಯಾದ ಪ್ರಗತಿಯಲ್ಲಿ ಲೆನಿನ್‌ನ ಪಾತ್ರವೇನು?**

ಉತ್ತರ : . **ರಷ್ಯಾದ ಪ್ರಗತಿಯಲ್ಲಿ ಲೆನಿನ್‌ನ ಪಾತ್ರ**

1. ಲೇನಿನ್ ಅಧ್ಯಕ್ಷರಾದ ಕೂಡಲೇ ಎಲ್ಲಾ ಭೂಮಿ ರೈತರಿಗೆ ಸೇರಿದ್ದು ಎಂದು ಘೋಷಿಸಿದರು.
2. ಎಲ್ಲಾ ರಷ್ಯನ್ನರಿಗೂ ಉಚಿತವಾದ ಶಿಕ್ಷಣ, ಕ್ರೀಡೆ, ಆರೋಗ್ಯ, ವಸತಿ ನೀಡುವಂತಹ ಆರ್ಥಿಕ & ರಾಜಕೀಯ ನೀತಿಗಳನ್ನು ಜಾರಿ ಮಾಡಿದರು.
3. ಲೆನಿನ್‌ನು ಕಾರ್ಲ್‌ಮಾರ್ಕ್ಸ್‌ನ ವೈಜ್ಞಾನಿಕ ಸಮಾಜವಾದದ ಚಿಂತನೆಯನ್ನು ಪ್ರಾಯೋಗಿಕವಾಗಿ ಮೊದಲ ಬಾರಿ ಜಾರಿ ಮಾಡಿದನು.
4. ಇದು ಮಾನವಕುಲದ ಇತಿಹಾಸದಲ್ಲಿ ಕಂಡರಿಯದ ಸಾಮಾಜಿಕ ಪದ್ಧತಿಯಾಗಿತ್ತು.

**7. ರಷ್ಯಾದಲ್ಲಿ ಸ್ಟಾಲಿನ್ ಕೈಗೊಂಡ ಸುಧಾರಣಾ ಕ್ರಮಗಳು ಯಾವುವು?**

ಉತ್ತರ : **ಸ್ಟಾಲಿನ್‌ನ ಸುಧಾರಣಾ ಕ್ರಮಗಳು**

1. ಸ್ಟಾಲಿನ್ ರಷ್ಯಾದಲ್ಲಿ ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೆ ತರುವ ಮೂಲಕ ಕೈಗಾರಿಕೆಗಳನ್ನು ವಿಸ್ತರಿಸಿದನು.
2. ರಷ್ಯಾ ಬಾಹ್ಯಾಕಾಶ ವಿಜ್ಞಾನದಲ್ಲಿ ವಿಶ್ವದ ಮೊದಲ ಮಾನವರಹಿತ ಉಪಗ್ರಹವನ್ನು ಉಡಾವಣೆ ಮಾಡಿತು.
3. ಭೂಮಿಯ ಖಾಸಗಿ ಒಡೆತನವನ್ನು ಮುಕ್ತಾಯಗೊಳಿಸಿ ಸಾಮೂಹಿಕ ಸಾಗುವಳಿ ವ್ಯವಸ್ಥೆಯನ್ನು ಜಾರಿಗೊಳಿಸಿದನು.
4. ಸೇನಾಬಲ ಬೆಳಸಿ ಸೋವಿಯತ್ ರಷ್ಯಾವು ಅಮೇರಿಕಕ್ಕೆ ಸರಿಸಮವಾದ ಸಮೃದ್ಧ ದೇಶವನ್ನಾಗಿ ಮಾಡಿದನು.

**8. ಎರಡನೇ ಮಹಾಯುದ್ಧಕ್ಕೆ ಕಾರಣಗಳೇನು?**

ಉತ್ತರ : **ಎರಡನೇ ಮಹಾಯುದ್ಧಕ್ಕೆ ಕಾರಣಗಳು**

1. ಜರ್ಮನಿ ಹಾಗೂ ಇಟಲಿ ದೇಶಗಳ ವಿಸ್ತರಣಾವಾದ, ಸಾಮ್ರಾಜ್ಯವಾದಗಳು 2ನೇ ಮಹಾಯುದ್ಧಕ್ಕೆ ಮೊದಲ ಕಾರಣ.
2. ಶಾಂತಿಯನ್ನು ಕಾಪಾಡುವದೆಂದು ಭಾವಿಸಲಾದ ರಾಷ್ಟ್ರಸಂಘ ವಿಸ್ತರಣಾವಾದಿಗಳ ಆಕ್ರಮಣಶೀಲತೆಯನ್ನು ತಡೆಯಲಾರದೇ ಹೋಯಿತು.
3. ಹಿಟ್ಲರ್ & ಮುಸ್ಸಲೋನಿಯರ ಆಕ್ರಮಣಗಳ ವಿರುದ್ಧ ಯಾರು ಸಶಸ್ತ್ರಕ್ರಮ ಕೈಗೊಳ್ಳಲು ಮುಂದಾಗಲಿಲ್ಲ.
4. ಇವುಗಳನ್ನು ಪ್ರಾರಂಭದ ಹಂತದಲ್ಲಿ ತಡೆಯದ ಇತರೆ ರಾಷ್ಟ್ರಗಳು ನಂತರ ಪಾಲ್ಗೊಂಡು ಮಹಾಯುದ್ಧಕ್ಕೆ ಕಾರಣವಾದವು.

**9. ಎರಡನೆಯ ಮಹಾಯುದ್ಧದಿಂದ ಆದ ಪರಿಣಾಮಗಳೇನು? (ಜೂನ್ 2015)**

ಉತ್ತರ **ಎರಡನೆಯ ಮಹಾಯುದ್ಧದಿಂದ ಆದ ಪರಿಣಾಮಗಳು**

1. ಸಾಮಾನ್ಯ ನಾಗರಿಕರು ಸೇರಿ ಲಕ್ಷಾಂತರ ಜನರು ಯುದ್ಧದಲ್ಲಿ ಸತ್ತರು.
2. ಹೆಚ್ಚು ಜನ ಯುದ್ಧದಲ್ಲಿ ಗಾಯಗೊಂಡು ಅಂಗವಿಕಲರಾದರು.
3. ನಗರಗಳು, ರಸ್ತೆ, ಸೇತುವೆಗಳು, ರೈಲುಮಾರ್ಗಗಳು ಕಾರ್ಖಾನೆಗಳು ನಾಶವಾದವು.
4. ವಿಶ್ವ ಶಾಂತಿ ಸ್ಥಾಪಿಸಲೆಂದೆ ರಾಷ್ಟ್ರಸಂಘದ ಜಾಗದಲ್ಲಿ ವಿಶ್ವಸಂಸ್ಥೆ ಸ್ಥಾಪನೆಯಾಯಿತು.
5. ಏಷ್ಯಾ ಮತ್ತು ಆಫ್ರಿಕಾದ ವಸಾಹತು ರಾಷ್ಟ್ರಗಳು ಸ್ವಾತಂತ್ರ್ಯ ಪಡೆಯಲು ವಾತಾವರಣ ಪೂರಕವಾಯಿತು.
6. ಅಮೇರಿಕ ಅಣ್ವಸ್ತ್ರ ಪ್ರಯೋಗಿಸಿದ್ದರಿಂದ ಬೃಹತ್ ದೇಶಗಳ ನಡುವೆ ಅಣ್ವಸ್ತ್ರ ಸ್ಪರ್ಧೆಗೆ ದಾರಿಯಾಯಿತು.

**11. ಚೀನಾ ಕಮ್ಯುನಿಸ್ಟರ ದೀರ್ಘ ಪಯಣವನ್ನು ವಿವರಿಸಿ.**

ಉತ್ತರ : 1. ಷಿಯಾಂಗ್ ಕೈ ಷೇಕ್‌ನು ಚೀನಾ ಕಮ್ಯುನಿಸ್ಟ್ ಕ್ರಾಂತಿಕಾರಿಗಳ ಮೇಲೆ ದಾಳಿ ಸಮಾರು 70,000 ಕ್ರಾಂತಿಕಾರಿಗಳನ್ನು ಕೊಲ್ಲಿಸಿದನು.

2. ಷಿಯಾಂಗ್ ಕೈ ಷೇಕ್‌ನ ದಾಳಿಯಿಂದ ಕ್ರಾಂತಿಕಾರಿಗಳನ್ನು ರಕ್ಷಿಸುವ ಸಲುವಾಗಿ ಮಾವೋತ್ಸೆ ತುಂಗನ ನೇತೃತ್ವದಲ್ಲಿ ಕಮ್ಯುನಿಸ್ಟರು ಉತ್ತರ ಚೀನಾದ ಕಡೆಗೆ ಪಯಣಿಸಿದರು. ಇದನ್ನೇ ಐತಿಹಾಸಿಕ 'ದೀರ್ಘ ಪಯಣ' ಎಂದು ಕರೆಯುತ್ತಾರೆ.

**12. ಆರ್ಥಿಕ ಮಹಾಕುಸಿತದ ಪರಿಣಾಮಗಳೇನು?**

ಉತ್ತರ : **ಆರ್ಥಿಕ ಮಹಾಕುಸಿತದ ಪರಿಣಾಮಗಳು**

1. ಅಮೇರಿಕಾದ ಆರ್ಥಿಕ ಬೆಳವಣಿಗೆಯು ಕುಂಠಿತಗೊಂಡಿತು.
2. ಯುರೋಪ ಮತ್ತು ಅಮೇರಿಕದಲ್ಲಿ ಸಂಕಷ್ಟದ ಪರಿಸ್ಥಿತಿಗಳು ನಿರ್ಮಾಣಗೊಂಡವು.
3. ಕೈಗಾರಿಕೆ & ಕೃಷಿ ಕ್ಷೇತ್ರಗಳಲ್ಲಿ ಉತ್ಪಾದನೆ ಕುಸಿಯಿತು.
4. ಗಣಿಗಾರಿಕೆ,ಹಡಗು ಕಟ್ಟುವಿಕೆ, ಗ್ರಾಹಕರ ವಸ್ತುಗಳಾದ ಆಟೋಮೊಬೈಲ್ ಮತ್ತು ಗೃಹಬಳಕೆ ವಸ್ತುಗಳ ಉತ್ಪಾದನೆಗೆ ಹಿನ್ನೆಡೆ ಉಂಟಾಯಿತು.
5. ಜನರ ಜೀವನ ಮಟ್ಟ ತೀವ್ರವಾಗಿ ಕುಸಿಯಿತು.
6. ನಿರುದ್ಯೋಗ ವಿಪರೀತವಾಯಿತು.
7. ಆರ್ಥಿಕ ಕುಸಿತ ರಾಜಕೀಯ ಬದಲಾವಣೆಗೆ ಸಾಕ್ಷಿಯಾಯಿತು.

ಇದು ಎಸ್ ಎಸ್ ಎಫ್ ಟಿ ಎಫ್ ಡಿಜಿಟಲ್ ಗ್ರೂಪ್ ನ ಕೊಡುಗೆ

**ಪ್ರಶ್ನೆ 5] ಈ ಕೆಳಗಿನ ಪ್ರಶ್ನೆಗಳಿಗೆ 5 – 6 ವಾಕ್ಯದಲ್ಲಿ ಉತ್ತರಿಸಿ.**

**1. ರಷ್ಯಾ ಕ್ರಾಂತಿಯಲ್ಲಿ ಲೇನಿನ್‌ನ ಪಾತ್ರವೇನು?**

ಉತ್ತರ : **ರಷ್ಯಾ ಕ್ರಾಂತಿಯಲ್ಲಿ ಲೇನಿನ್‌ನ ಪಾತ್ರ**

1. ರಷ್ಯಾ ಆಳುತ್ತಿದ್ದ ಝಾರ್ ದೊರೆಗಳು ರೈತರನ್ನು, ಕಾರ್ಮಿಕರನ್ನು & ಬಡವರನ್ನು ತೀವ್ರವಾಗಿ ಶೋಷಿಸುತ್ತಿದ್ದರು.
2. ರಷ್ಯಾದ ಎಲ್ಲಾ ಕಡೆಗೂ ಝಾರ್ ವಿರುದ್ಧ ದಂಗೆಗಳಾದವು.
3. ಲೇನಿನ್ ಜನರಿಗೆ ಸರಳವಾದ **'ಶಾಂತಿ, ಆಹಾರ, ಭೂಮಿ'** ಎಂಬ ಜನಪರ ಘೋಷಣೆಗಳನ್ನು ನೀಡಿದರು.
4. ಇವನ ಘೋಷಣೆಗೆ ಕಾರ್ಮಿಕರು & ಗ್ರಾಮೀಣ ಬಡವರು ವ್ಯಾಪಕವಾಗಿ ಸ್ಪಂದಿಸಿದರು.
5. ಕ್ರಿಶ 1917ರ ಅಕ್ಟೋಬರ್‌ನಲ್ಲಿ ರಷ್ಯಾವನ್ನು ಸಮಾಜವಾದಿ ಗಣರಾಜ್ಯ ಎಂದು ಘೋಷಣೆ ಮಾಡಿದರು.

**2. 'ನಾಜಿ ಸಿದ್ದಾಂತವು ಜರ್ಮನಿಯನ್ನು ಹಾಳು ಮಾಡಿತು' ಹೇಗೆ ವಿವರಿಸಿರಿ. (ಎಪ್ರಿಲ್ 2016)**

ಉತ್ತರ : **'ನಾಜಿ ಸಿದ್ಧಾಂತವು ಜರ್ಮನಿಯನ್ನು ಹಾಳು ಮಾಡಿತು' ಹೇಗೆಂದರೆ –**

1. ಹಿಟ್ಲರನು ಜರ್ಮನಿಯಲ್ಲಿ ನಾಜಿ ಸಿದ್ಧಾಂತವನ್ನು ಹರಡಿದನು.
2. ನಾಜಿವಾದವೆಂದರೆ ಜಗತ್ತಿನಲ್ಲಿ ಶ್ರೇಷ್ಠವಾದ ಜನಾಂಗವೆಂದರೆ ಆರ್ಯ ಜನಾಂಗ. ಜಗತ್ತನ್ನು ಆಳ್ವಿಕೆ ಮಾಡಲು ಜರ್ಮನ್ನರು ಮಾತ್ರ ಯೋಗ್ಯರು ಎಂಬ ಭಾವನೆ.
3. ಇದು ಬೇರೆ ಜನಾಂಗಗಳನ್ನು ಹೀನಾಯವಾಗಿ ಕಾಣುವಂತೆ ಮಾಡಿತು.
4. ಸುಮಾರು 6 ಮಿಲಿಯನ್ ಯಹೂದಿಗಳನ್ನು ವಿಷಾನಿಲ ಗೃಹದಲ್ಲಿ ಕೂಡಿಹಾಕಿ ಕೊಲೆ ಮಾಡಿದನು.
5. ಹಿಟ್ಲರನ ನಾಜಿ ಸಿದ್ಧಾಂತವೇ ಎರಡನೇ ಮಹಾಯುದ್ಧಕ್ಕೆ ಕಾರಣವಾಯಿತು.
6. ಈ ಯುದ್ಧದಲ್ಲಿ ಜರ್ಮನಿ ಸೋಲುವದರ ಮೂಲಕ ಜರ್ಮನಿಯರ ಅದೋಗತಿಗೆ ಕಾರಣವಾಯಿತು.

**3. ಹಿಟ್ಲರನ ಜನಾಂಗೀಯ ದ್ವೇಷವೇ ಅವನ ಅಂತ್ಯಕ್ಕೆ ಕಾರಣ ಈ ಹೇಳಿಕೆಯನ್ನು ಉದಾಹರಣೆಯೊಂದಿಗೆ ವಿಶ್ಲೇಷಿಸಿ.**

ಉತ್ತರ : 1. ಜಗತ್ತಿನಲ್ಲಿ ಶ್ರೇಷ್ಠವಾದ ಜನಾಂಗವೆಂದರೆ ಆರ್ಯ ಜನಾಂಗ. ಜಗತ್ತನ್ನು ಆಳ್ವಿಕೆ ಮಾಡಲು ಜರ್ಮನ್ನರು ಮಾತ್ರ ಯೋಗ್ಯರು ಎಂಬ ಭಾವನೆಯನ್ನು ಹಿಟ್ಲರ್ ಪ್ರಸಾರ ಮಾಡಿದನು.

2. ಜನಾಂಗೀಯ ದ್ವೇಷವನ್ನು ಪ್ರಸಾರ ಮಾಡಲು ಗೋಬೆಲ್ಸ್ ಎಂಬ ವಿಶೇಷ ಮಂತ್ರಿಯನ್ನು ನೇಮಿಸಿದನು.

3. ಊಟ ನೀರು ಯಾವುದನ್ನೂ ನೀಡದೇ ಗುಲಾಮರ ರೀತಿಯಲ್ಲಿ ದುಡಿಸಿಕೊಳ್ಳಲಾಗುತ್ತಿತ್ತು.

4. ಗಾಳಿ ಬೆಳಕಿಲ್ಲದ ಗ್ಯಾಸ್ ಛೇಂಬರ್‌ಗಳಲ್ಲಿ ಯಹೂದಿಗಳನ್ನು ನೂಕಿ ವಿಷಗಾಳಿ ಬಿಟ್ಟು ಕೊಲ್ಲುತ್ತಿದ್ದನು.

5. ಮಕ್ಕಳೆನ್ನದೇ, ಮಹಿಳೆಯರೆನ್ನದೆ, ಮುದುಕರೆನ್ನದೆ ಎಲ್ಲರನ್ನೂ ಸಾಮೂಹಿಕವಾಗಿ ಕೊಲ್ಲಲು ವಿಶೇಷ ಪಡೆಗಳನ್ನು ರೂಪಿಸಿದನು.

6. ಇದು ವಿರೋದಿ ರಾಷ್ಟ್ರಗಳ ಕೆಂಗಣ್ಣಿಗೆ ಗುರಿಯಾಗಿ ಎರಡನೇ ಜಾಗತಿಕ ಮಹಾಯುದ್ಧಕ್ಕೆ ಕಾರಣವಾಯಿತು.

7. ಈ ಯುದ್ಧದಲ್ಲಿ ಜನಾಂಗೀಯ ದ್ವೇಷದ ಅಧ್ಯಾಯವು ಅವನ ಸಾವಿನೊಂದಿಗೆ ಅಂತ್ಯವಾಯಿತು.

**4. ಚೀನಾ ಕ್ರಾಂತಿಯ ಪರಿಣಾಮಗಳಾವವು? ಅಥವಾ**

**5. ಚೀನಾ ಕಮ್ಯುನಿಸ್ಟ್ ರಾಷ್ಟ್ರವಾಗಿ ಉದಯವಾದ ನಂತರ ಜಾರಿಗೆ ತಂದ ಸುಧಾರಣೆಗಳಾವುವು?**

ಉತ್ತರ : **ಚೀನಾ ಕ್ರಾಂತಿಯ ಪರಿಣಾಮಗಳು ಅಥವಾ ಚೀನಾದಲ್ಲಿ ಜಾರಿಗೆ ತಂದ ಸುಧಾರಣೆಗಳು**

1. ಚೀನಾ ಕ್ರಾಂತಿಯಿಂದಾಗಿ ದೇಶದಲ್ಲಿ ಮಾವೋತ್ಸೆತುಂಗ್ ನಾಯಕತ್ವದಲ್ಲಿ ಕಮ್ಯುನಿಸ್ಟ್ ಆಳ್ವಿಕೆ ಆರಂಭವಾಯಿತು.
2. ಚೀನಾದಲ್ಲಿ ಸಾಮೂಹಿಕ ಕೃಷಿ ಪದ್ಧತಿಯನ್ನು ಜಾರಿಗೊಳಿಸಲಾಯಿತು.
3. ಎಲ್ಲರಿಗೂ ಉಚಿತ ಶಿಕ್ಷಣ, ಆರೋಗ್ಯ ಮೊದಲಾದ ಸೌಲಭ್ಯಗಳನ್ನು ನೀಡಲಾಯಿತು.
4. ಕೈಗಾರಿಕಾ ಬೆಳವಣಿಗೆ ಸಾಧಿಸಲು ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಹೆಚ್ಚು ಪ್ರಾಧಾನ್ಯತೆ ನೀಡಲಾಯಿತು.
5. ಮುನ್ನೆಡೆಯ ಮಹಾಜಿಗಿತ ನೀತಿಯಿಂದ ಖಾಸಗಿ ಆಸ್ತಿಯನ್ನು ಸಮಾಜದ ಆಸ್ತಿಯಾಗಿ ಪರಿವರ್ತಿಸಲಾಯಿತು.
6. ಖಾಸಗಿ ಆಸ್ತಿಯನ್ನು ಸಮಾಜದ ಆಸ್ತಿಯಾಗಿ ಪರಿವರ್ತಿಸಿದರು.

## ರಾಜ್ಯಶಾಸ್ತ್ರ – ಅಧ್ಯಾಯ 1.

## ಭಾರತದ ಸಮಸ್ಯೆಗಳು ಹಾಗೂ ಅವುಗಳ ಪರಿಹಾರೋಪಾಯಗಳು

**ಪ್ರಶ್ನೆ 1] ಈ ಕೆಳಗಿನ ಬಿಟ್ಟಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1. ಕರ್ನಾಟಕದಲ್ಲಿ ಭ್ರಷ್ಟಾಚಾರ ನಿಯಂತ್ರಿಸಲು ಸ್ಥಾಪಿತವಾದ ಸಂಸ್ಥೆ.– **ಲೋಕಾಯುಕ್ತ**
2. 2011ರ ಜನಗಣತಿ ಪ್ರಕಾರ ಭಾರತದ ಜನಸಂಖ್ಯೆ.– **121 ಕೋಟಿ**
3. 2011ರ ಜನಗಣತಿಯ ಪ್ರಕಾರ ಭಾರತದ ಸಾಕ್ಷರತೆಯ ಪ್ರಮಾಣ.– **ಶೇ. 74**
4. ಸಂವಿಧಾನದ _____ ವಿಧಿಯನ್ವಯ ಶಿಕ್ಷಣದ ಹಕ್ಕನ್ನು ಮೂಲಭೂತ ಹಕ್ಕಾಗಿ ಪರಿಗಣಿಸಿದೆ. – **21ನೇ ವಿಧಿ**
5. ದೇಶದಾದ್ಯಂತ ಶಿಕ್ಷಣ ಹಕ್ಕು ಕಾಯ್ದೆ ಜಾರಿಗೆ ಬಂದ ವರ್ಷ.– **2009**
6. ಕರ್ನಾಟಕದ ಸ್ಥಳೀಯ ಸಂಸ್ಥೆಗಳಲ್ಲಿನ ಚುನಾವಣೆಗಳಲ್ಲಿ ಮಹಿಳೆಯರಿಗೆ ನೀಡಿದ ಮೀಸಲಾತಿ ಪ್ರಮಾಣ.– **ಶೇ 33%,**
7. ಕರ್ನಾಟಕದಲ್ಲಿ ಪ್ರಾದೇಶಿಕ ಅಸಮತೋಲನದ ಅಧ್ಯಯನಕ್ಕಾಗಿ ಈ ಸಮಿತಿಯು ನೇಮಕವಾಗಿದೆ. – **ಡಾ : ಡಿ.ಎಂ. ನಂಜುಂಡಪ್ಪ ಸಮಿತಿ**
8. ಸರ್ವ ಶಿಕ್ಷಣ ಅಭಿಯಾನವು ದೇಶಾದ್ಯಂತ ಜಾರಿಗೆ ಬಂದ ವರ್ಷ – **2001**
9. ಕರ್ನಾಟಕ ಸರಕಾರವು ಗ್ರಾಮಾಂತರ ಮಹಿಳೆಯರ ವಿಕಾಸಕ್ಕಾಗಿ ಜಾರಿಗೆ ತಂದ ಯೋಜನೆ–**ಸ್ತ್ರೀಶಕ್ತಿ ಯೋಜನೆ (ಎಪ್ರಿಲ್ 2016)**
10. ತಾವು ವಾಸಿಸುವ ಪ್ರದೇಶದ ಬಗ್ಗೆ ಅತ್ಯಂತ ಗಾಢವಾದ ಅಭಿಮಾನ ಬೆಳೆಸಿಕೊಂಡಿರುವುದನ್ನು ಹೀಗೆ ಕರೆಯುತ್ತಾರೆ. – **ಪ್ರಾದೇಶಿಕವಾದ**
11. ಬಳಕೆದಾರರಿಂದ ಹೆಚ್ಚಿನ ಲಾಭ ಗಳಿಸುವ ಧೋರಣೆಯನ್ನು ಹೀಗೆ ಕರೆಯುತ್ತಾರೆ.– **ಲಾಭಕೋರತನ**
12. ಅನ್ಯ ಧರ್ಮೀಯರ ಬಗ್ಗೆ ಸೈರಣೆ ಇಲ್ಲದಿರುವದನ್ನು ಹೀಗೆ ಕರೆಯಬಹುದು. – **ಕೋಮುವಾದ**
13. ಅನಕ್ಷರಸ್ಥರನ್ನು ಸಾಕ್ಷರನನ್ನಾಗಿ ಮಾಡಲು ಭಾರತ ಸರ್ಕಾರ 1988 ರಲ್ಲಿ ಜಾರಿಗೆ ತಂದ ಯೋಜನೆ. – **ರಾಷ್ಟ್ರೀಯ ಸಾಕ್ಷರತಾ ಮಿಷನ್**
14. ಕರ್ನಾಟಕ ಸರಕಾರವು ಸ್ತ್ರೀಶಕ್ತಿ ಎಂಬ ಕಾರ್ಯಕ್ರಮ ಜಾರಿಗೆ ತಂದ ಉದ್ದೇಶ. –**ಗ್ರಾಮಾಂತರ ಮಹಿಳೆಯರ ವಿಕಾಸಕ್ಕಾಗಿ,**
15. 2001 ರಿಂದ ದೇಶಾದ್ಯಂತ 6 ರಿಂದ 14 ವರ್ಷದ ಮಕ್ಕಳಿಗೆ ಶಿಕ್ಷಣದ ವ್ಯವಸ್ಥೆಗಾಗಿ ಜಾರಿಗೆ ತಂದ ಕಾರ್ಯಕ್ರಮ.– **ಸರ್ವ ಶಿಕ್ಷಣ ಅಭಿಯಾನ**
16. ರಾಷ್ಟ್ರೀಯ ಸಾಕ್ಷರತಾ ಮಿಷನ್ ಸ್ಥಾಪಿಸಿದ ವರ್ಷ – **1988**

**ಪ್ರಶ್ನೆ 2] ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

**1. ಕೋಮುವಾದ ಎಂದರೇನು? (ಜೂನ್ 2015)**

ಉತ್ತರ : ಧರ್ಮದ ಆಧಾರದಲ್ಲಿ ಸಮಗ್ರ ಸಮಾಜದ ವಿಭಜನೆ ಹಾಗೂ ಆ ನೆಲೆಯಲ್ಲೇ ಗುರುತಿಸಿಕೊಂಡು ಪರಸ್ಪರ ವಿರುದ್ಧ ಹಿತಾಸಕ್ತಿಗಳನ್ನು

ಬೆಳಸಿಕೊಳ್ಳುವುದನ್ನು ಕೋಮುವಾದ ಅಥವಾ ಮತೀಯವಾದ ಎಂದು ಕರೆಯುತ್ತೇವೆ.

ಕೋಮುವಾದವೆಂದರೆ ಅನ್ಯ ಧರ್ಮೀಯರ ಬಗ್ಗೆ ಸೈರಣೆ ಇಲ್ಲದಿರುವುದಾಗಿದೆ.

**2. ಪ್ರಾದೇಶಿಕವಾದ ಎಂದರೇನು?**

**ಉತ್ತರ :** ಒಂದು ನಿರ್ದಿಷ್ಟ ಜನಸಮುದಾಯ ತಾವು ವಾಸಿಸುವ ಪ್ರದೇಶವನ್ನೇ ಅತ್ಯಂತ ಗಾಡವಾಗಿ ಪ್ರೀತಿಸಿ, ಕೇವಲ ಆ ಭಾಗದ ಬಗ್ಗೆಯೇ ಸಂಕುಚಿತವಾದ ಅತಿಯಾದ ಅಭಿಮಾನವನ್ನು ಬೆಳೆಸಿಕೊಂಡರೆ ಅದನ್ನು ಪ್ರಾದೇಶಿಕವಾದ ಎಂದು ಕರೆಯುತ್ತಾರೆ.

**3. ಭ್ರಷ್ಟಾಚಾರ ಎಂದರೇನು? ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳಾವುವು?**

**ಉತ್ತರ :** ಭ್ರಷ್ಟಾಚಾರವೆಂದರೆ ಲಂಚ ಅಥವಾ ಇನ್ನಾವುದೇ ಕ್ರಮದಿಂದ ಕಾನೂನುಬಾಹಿರ ಕ್ರಮಕ್ಕೆ ಪ್ರಚೋದನೆ ನೀಡುವುದು ಎಂದು ಅರ್ಥ. ಭ್ರಷ್ಟಾಚಾರವನ್ನು ತಡೆಗಟ್ಟಲು ಲೋಕಪಾಲ, ಲೋಕಾಯುಕ್ತದಂತಹ ಸಂಸ್ಥೆಗಳನ್ನು ಸ್ಥಾಪಿಸಲಾಗಿದೆ.

**4. ರಾಜಕೀಯ ಭ್ರಷ್ಟಾಚಾರವು ವ್ಯವಸ್ಥಿತ ಅಪರಾಧಗಳಿಗೆ ಹೇಗೆ ಎಡೆಮಾಡಿಕೊಡುತ್ತದೆ?**

ಉತ್ತರ : ರಾಜಕೀಯ ಭ್ರಷ್ಟಾಚಾರವು ವ್ಯವಸ್ಥಿತ ಅಪರಾದಗಳಿಗೆ ಎಡೆಮಾಡಿಕೊಡುತ್ತದೆ ಸಾರ್ವಜನಿಕ ಸೇವೆಯ ಕ್ಷೇತ್ರಗಳಲ್ಲಿ ಅಧಿಕಾರಶಾಹಿಯಲ್ಲಿ ಒದಗುವ ಲೋಪದೋಷಗಳಿಗೂ, ವಂಚನೆಗಳಿಗೂ ಅನುವು ಮಾಡಿಕೊಡುತ್ತದೆ.

**5. ಕರ್ನಾಟಕದ ಸ್ಥಳೀಯ ಸಂಸ್ಥೆಗಳಲ್ಲಿ ಸ್ತ್ರೀಯರಿಗೆ ಶೆ. 33 ಮೀಸಲಾತಿ ನೀಡುವ ಮೂಲ ಕಾರಣವೇನು?**

ಉತ್ತರ : ಮಹಿಳೆಯರ ಸ್ಥಾನಮಾನ ಉತ್ತಮಪಡಿಸುವ ಸಲುವಾಗಿ ರಾಜಕೀಯ ಮೀಸಲಾತಿ ನೀಡುವ ಉದ್ದೇಶದಿಂದ ಕರ್ನಾಟಕದ ಸ್ಥಳೀಯ ಸಂಸ್ಥೆಗಳಲ್ಲಿ ಸ್ತ್ರೀಯರಿಗೆ ಶೆ. 33 ಮೀಸಲಾತಿ ನೀಡಲಾಗಿದೆ.

**6. ಮಹಿಳಾ ಸಬಲೀಕರಣ ಎಂದರೇನು?**

ಉತ್ತರ : ಮಹಿಳೆಯು ಪುರುಷರಿಗೆ ಸರಿಸಮಾನವಾಗಿ ದೇಶದ ಪ್ರತಿ ರಂಗದಲ್ಲೂ ದಿಟ್ಟತನದಿಂದ ದುಡಿದು ಆರ್ಥಿಕವಾಗಿ ಸಾಮಾಜಿಕವಾಗಿ ಸ್ವಾವಲಂಬಿಯಾವುದನ್ನು ಮಹಿಳಾ ಸಬಲೀಕರಣ ಎನ್ನತ್ತಾರೆ.

**7. ಬಡತನ ಎಂದರೇನು?**

**ಉತ್ತರ :** ಜನರು ಸರಿಯಾದ ಆಹಾರ, ಬಟ್ಟೆ, ವಸತಿ ಹಾಗೂ ಮೂಲಭೂತ ಸೌಕರ್ಯಗಳನ್ನು ಹೊಂದದೆ ಪಡುವ ಕಷ್ಟವನ್ನು ಬಡತನ ಎಂದು ಕರೆಯುತ್ತೇವೆ.

**ಪ್ರಶ್ನೆ 3] ಈ ಕೆಳಗಿನ ಪ್ರಶ್ನೆಗಳಿಗೆ 2–3 ವಾಕ್ಯದಲ್ಲಿ ಉತ್ತರಿಸಿರಿ.**

**1. ಕೋಮುವಾದವನ್ನು ಹೇಗೆ ತಡೆಗಟ್ಟಬಹುದು?**

ಉತ್ತರ : 1. ಎಲ್ಲಾ ಮತ ಸಂಪ್ರದಾಯಗಳು ಜನರಲ್ಲಿ ಸಾಮಾನ್ಯ ಹಾಗೂ ಆರೋಗ್ಯಕರ ರಾಷ್ಟ್ರೀಯ ಚಿಂತನೆಗಳನ್ನು ಬೆಳೆಸಲು ಪ್ರಯತ್ನಿಸಬೇಕು.

2. ಶಿಕ್ಷಣದಲ್ಲಿ ಜಾತ್ಯಾತೀತ ತತ್ವವನ್ನು ಅಳವಡಿಸಿ ಅರಿವು ಮೂಡಿಸಬೇಕು.
3. ಮತೀಯ ಮೂಲಭೂತವಾದಿಂದ ರಾಷ್ಟ್ರೀಯ ಹಿತಾಸಕ್ತಿಗೆ ಮತ್ತು ರಾಷ್ಟಾಭ್ರಿಮಾನಕ್ಕೆ ದಕ್ಕೆ ಆಗದಂತೆ ತಡೆಗಟ್ಟಬೇಕು.
4. ರಾಜಕೀಯ ಅಚಲ ನಿರ್ಧಾರ, ಆಡಳಿತಾತ್ಮಕ ಸಮತೋಲನ, ಕ್ರಮಬದ್ಧ ಕಾನೂನು ವ್ಯವಸ್ಥೆ, ಸದೃಡ ರಾಷ್ಟ್ರೀಯ ಮನೋಭಾವ, ಆರೋಗ್ಯಕರ ಪೂರಕ ಸುದ್ದಿ ಮಾಧ್ಯಮ ಇವೆಲ್ಲದರ ಸಮ್ಮಿಳನದೊಂದಿಗೆ ಕೋಮುವಾದವನ್ನು ನಿಯಂತ್ರಿಸಬಹುದು.

**2. ಪ್ರಾದೇಶಿಕವಾದವು ದೇಶದ ಅಭಿವೃದ್ಧಿಗೆ ಮಾರಕವಾಗುತ್ತದೆ. ಚರ್ಚಿಸಿ.**

**ಉತ್ತರ : ಪ್ರಾದೇಶಿಕವಾದವು ದೇಶದ ಅಭಿವೃದ್ಧಿಗೆ ಮಾರಕವಾಗುತ್ತದೆ. ಹೇಗೆಂದರೆ –**

1. ಪ್ರಾದೇಶಿಕ ಮನೋಭಾವ ತೀರಾ ಹೆಚ್ಚು ಎನಿಸಿದರೆ ಅದು ರಾಷ್ಟ್ರದ ಏಕತೆ ಹಾಗೂ ಹಿತಾಸಕ್ತಿಗೆ ಧಕ್ಕೆ ಒದಗಿಸುತ್ತದೆ.
2. ಅತಿಯಾದ ಭಾಷಾಭಿಮಾನವೂ ರಾಷ್ಟ್ರೀಯವಾದದ ವಿರುದ್ಧ ಸಂಕುಚಿತ ಮನೋಭಾವವನ್ನು ಬೆಳೆಸುತ್ತದೆ. ಉದಾ : ತೆಲಂಗಾಣ ವಿವಾದ.
3. ಇದು ದೇಶದ ಅಭಿವೃದ್ಧಿಯನ್ನು ಕುಂಠಿತಗೊಳಿಸುತ್ತದೆ.
4. ಪ್ರಾದೇಶಿಕವಾದಕ್ಕೆ ಪುಷ್ಠಿ ದೊರೆತರೆ ಆಗ ಅಂತರಾಜ್ಯ ಗಡಿ ಸಮಸ್ಯೆ, ಅಂತರರಾಜ್ಯ ನದಿ ನೀರಿನ ಸಮಸ್ಯೆ ಮುಂತಾದವುಗಳು ತಲೆದೋರಬಹುದು.

**3. ಪ್ರಾದೇಶಿಕವಾದವನ್ನು ತಪ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳಾವುವು?**

ಉತ್ತರ : **ಪ್ರಾದೇಶಿಕವಾದವನ್ನು ತಪ್ಪಿಸಲು ಸರ್ಕಾರ ಕೈಗೊಂಡ ಕ್ರಮಗಳು**

1. ಏಕ ಪೌರತ್ವವನ್ನು ನೆಲೆಗೊಳಿಸುವ ಮೂಲಕ ನಮ್ಮ ಸಂವಿಧಾನ ರಾಷ್ಟ್ರದ ಸಮಗ್ರತೆ ಹಾಗೂ ಏಕತೆಯನ್ನು ಎತ್ತಿ ಹಿಡಿದಿದೆ.
2. ಸಂವಿಧಾನದಲ್ಲಿ ಸಂಯುಕ್ತ ರಾಜ್ಯ ಪದ್ಧತಿಯ ಅಂಶಗಳನ್ನು ಅಳವಡಿಸಿ ಪ್ರಾದೇಶಿಕ ಬೆಳವಣಿಗೆಗೂ ಸಾಕಷ್ಟು ಅವಕಾಶಗಳನ್ನು ಕಲ್ಪಿಸಿಕೊಟ್ಟಿದೆ.
3. ಪ್ರಾದೇಶಿಕ ಅಸಮತೋಲನ ನಿವಾರಣೆಗಾಗಿ ಹಲವಾರು ಸಮಿತಿಗಳನ್ನು ರಚಿಸಲಾಗಿದೆ.

ಉದಾ : ಡಾ. ಡಿ.ಎಂ ನಂಜುಂಡಪ್ಪ ಸಮಿತಿ, ಮಲೆನಾಡು ಅಭಿವೃದ್ಧಿ ಸಮಿತಿ, ಹೈದ್ರಾಬಾದ ಕರ್ನಾಟಕ ಅಭಿವೃದ್ಧಿ ಸಮಿತಿ.

4. ಇತ್ತೀಚೆಗೆ ಸಂವಿಧಾನದ 371ಜೆ ವಿಧಿಯಂತೆ ಹೈದರಾಬಾದ್ ಕರ್ನಾಟಕಕ್ಕೆ ವಿಶೇಷ ಸ್ಥಾನಮಾನವನ್ನು ನೀಡಲಾಗಿದೆ.

**5. ಅನಕ್ಷರತೆಗೆ ಮುಖ್ಯ ಕಾರಣಗಳೇನು?**

ಉತ್ತರ : ನಮ್ಮಲ್ಲಿನ ಅನಕ್ಷರತೆಗೆ ಬಡತನ, ವಲಸೆ ಹೊಗುವಿಕೆ, ಮಕ್ಕಳ ದುಡಿಮೆ, ಬಾಲ್ಯವಿವಾಹ, ಚಿಕ್ಕ ಮಕ್ಕಳ ಲಾಲನೆಪಾಲನೆಗೆ ಹಿರಿಯ ಮಕ್ಕಳನ್ನು ಬಳಸಿಕೊಳ್ಳುವುದು, ಶಿಕ್ಷಣ ಕೊಡಿಸಬೇಕೆಂಬ ಆಸಕ್ತಿಯ ಕೊರತೆ ಮೊದಲಾದ ಕಾರಣಗಳನ್ನು ಗುರುತಿಸಬಹುದಾಗಿದೆ.

**6. ಬ್ರಷ್ಟಾಚಾರವನ್ನು ಹೇಗೆ ತಡೆಗಟ್ಟಬಹುದು?**

ಉತ್ತರ : 1. ಬ್ರಷ್ಟಾಚಾರ ನಿಗ್ರಹಕ್ಕೆ ಪ್ರಭಲ ರಾಜಕೀಯ ಇಚ್ಛಾಶಕ್ತಿ ಹಾಗೂ ಸಾರ್ವಜನಿಕ ಸಹಕಾರ ತೀರಾ ಅತ್ಯಗತ್ಯ.

2. ಒಳ್ಳೆಯ ರಾಜಕೀಯ ನಾಯಕತ್ವ, ಉತ್ತಮ ಅಧಿಕಾರಿ ವರ್ಗ ಹಾಗೂ ರಾಜಕೀಯ ಪರಿಜ್ಞಾನ ಹಾಗೂ ಪೌರತ್ವದ ಅರಿವು ಹೊಂದಿದ ಜನತೆ ಜಂಟಿಯಾಗಿ ಭ್ರಷ್ಟಾಚಾರದ ವಿರುದ್ಧ ಹೋರಾಟ ನಡೆಸಬಹುದಾಗಿದೆ.
3. ಲೋಕಪಾಲ & ಲೋಕಾಯುಕ್ತದಂತಹ ಸಂಸ್ಥೆಗಳು ಭ್ರಷ್ಟಾಚಾರದ ನಿಯಂತ್ರಣದಲ್ಲಿ ಪೂರಕ ಶಕ್ತಿ ಒದಗಿಸಬಲ್ಲವು.

**7. ಆರ್ಥಿಕ ಅಸಮಾನತೆಯನ್ನು ಹೋಗಲಾಡಿಸಲು ಕೈಗೊಳ್ಳುವ ಕ್ರಮಗಳಾವುವು?**

ಉತ್ತರ : 1. ಉತ್ತಮ ಆರ್ಥಿಕ ಸುಧಾರಣೆಗಳು

2. ಯೋಜನಾ ಬದ್ಧ ಹಣಕಾಸಿನ ನಿರ್ವಹಣೆ.
3. ಒಳ್ಳೆಯ ತೆರಿಗೆ ವಿಧಾನ
4. ಸಣ್ಣ ಮತ್ತು ಗೃಹ ಕೈಗಾರಿಕೆಗಳ ಅಭಿವೃದ್ಧಿ.

**8. ದೇಶದ ಜನಸಂಖ್ಯೆಯನ್ನು ಮಾನವ ಸಂಪನ್ಮೂಲವೆಂದು ಪರಿಗಣಿಸಬಹುದಾಗಿದೆ. ಇದನ್ನು ಸಮರ್ಥಿಸಿ.**

**ಉತ್ತರ** : 1. ಭಾರತ ಅಪಾರ ಜನಸಂಖ್ಯೆಯನ್ನು ರಾಷ್ಟ್ರೀಯ ಪ್ರಗತಿಗೆ ಅವಶ್ಯಕವಾದ ಮಾನವ ಸಂಪನ್ಮೂಲವನ್ನಾಗಿ ಪರಿವರ್ತಿಸುವ ಎಲ್ಲಾ ಸಾಧ್ಯತೆಗಳನ್ನೂ ಹೊಂದಿದೆ.

2. ವೃತ್ತಿ ಕೌಶಲ್ಯ, ಉತ್ತಮ ಶಿಕ್ಷಣ ಮಾರ್ಗದರ್ಶನ, ಪರಿಣಿತಿ ಮುಂತಾದವುಗಳಿಂದ ದೇಶದ ಜನಸಂಖ್ಯೆಯು ಮಾನವ ಸಂಪನ್ಮೂಲವಾಗಿ ಪರಿವರ್ತನೆಯಾಗುತ್ತದೆ.
3. ಹೀಗೆ ಉತ್ತಮ ಶಿಕ್ಷಣ, ಆರೋಗ್ಯ, ವೃತ್ತಿ ತರಬೇತಿ, ಕೌಶಲ್ಯ ಹೊಂದಿದ ಜನಸಂಖ್ಯೆ ಮಾನವ ಸಂಪನ್ಮೂಲವಾಗುತ್ತದೆ.

**9. ಕರ್ನಾಟಕ ರಾಜ್ಯದಲ್ಲಿ ಬಡತನ ನಿವಾರಣೆಗಾಗಿ ರೂಪಿಸಿರುವ ಯೋಜನೆಗಳನ್ನು ವಿವರಿಸಿ.**

**ಉತ್ತರ** : ಕರ್ನಾಟಕ ರಾಜ್ಯದಲ್ಲಿ ಬಡತನ ನಿವಾರಣೆಗಾಗಿ ರೂಪಿಸಿರುವ ಯೋಜನೆಗಳು.

1. ಬಡಕುಟುಂಬಗಳಿಗೆ ಬಿಪಿಎಲ್ ಕಾರ್ಡುಗಳನ್ನು ವಿತರಿಸಲಾಗಿದೆ.
2. ಅನ್ನಭಾಗ್ಯ ಯೋಜನೆಯ ಮೂಲಕ ಪ್ರತಿ ಕುಟುಂಬಕ್ಕೂ 30 ಕೆ.ಜಿ. ಅಕ್ಕಿ ನೀಡಲಾಗುತ್ತಿದೆ.
3. ಜವಾಹರ ರೋಜಗಾರ ಯೋಜನೆ, ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ, ಪ್ರಧಾನಮಂತ್ರಿ ಗ್ರಾಮೋದಯ ಯೋಜನೆ ಮುಂತಾದವುಗಳು ಬಡತನ ನಿರ್ಮೂಲನ ಮಾಡಲು ಜಾರಿಗೆ ತಂದ ಯೋಜನೆಗಳಾಗಿವೆ.
4. ಬಡವರಿಗಾಗಿ ಉಚಿತ ವಸತಿ ಯೋಜನೆ, ಉಚಿತ ವಿದ್ಯುತ್‌ದೀಪ ಯೋಜನೆಗಳ ಮೂಲಕ ಸೌಕರ್ಯಗಳನ್ನು ರೂಪಿಸುತ್ತಿದೆ.

**10. ಲಾಭಕೋರತನ ಎಂದರೇನು? ಉದಾಹರಣೆ ಕೊಡಿ.**

**ಉತ್ತರ** : ಲಾಭಕೋರತನವೆಂದರೆ ಅತಿ ಹೆಚ್ಚಿನ ಲಾಭ ಪಡೆಯಲು ಅನೈತಿಕ ಮಾರ್ಗ ಅನುಸರಿಸುವದಾಗಿದೆ.

ಉದಾ – 1. ತೂಕ ಮತ್ತು ಅಳತೆಗಳಲ್ಲಿ ಮೋಸ.

2. ಕಲಬೆರೆಕೆ ವಸ್ತುಗಳ ಮಾರಾಟ
3. ಪದಾರ್ಥಗಳಿಗೆ ಅಧಿಕ ಬೆಲೆ ವಿಧಿಸುವದು.

**11. ಲಾಭಕೋರತನವು ಉತ್ಪಾದಕ ಮತ್ತು ಗ್ರಾಹಕರೀರ್ವರಿಗೂ ನಷ್ಟ ಉಂಟು ಮಾಡುತ್ತದೆ. ವಿವರಿಸಿ.**

ಉತ್ತರ : 1. ಲಾಭಕೋರತನದಲ್ಲಿ ಅನುಸರಿಸುವ ಅನೈತಿಕ ಮಾರ್ಗಗಳಿಂದ ವಸ್ತುಗಳ ಗುಣಮಟ್ಟವು ಕಡಿಮೆಯಾಗುತ್ತದೆ.

2. ಇದರಿಂದ ಉತ್ಪಾದಿತ ವಸ್ತುಗಳನ್ನು ಕೊಳ್ಳುವವರ ಸಂಖ್ಯೆ ಕಡಿಮೆಯಾಗಿ ಉತ್ಪಾದಕನಿಗೆ ನಷ್ಟ ಉಂಟು ಮಾಡುತ್ತದೆ.
3. ಗ್ರಾಹಕನಿಗೂ ಸಹ ಮೌಲ್ಯಕ್ಕನುಗುಣವಾಗಿ ವಸ್ತುಗಳು ಸರಿಯಾಗಿ ಸಿಗದೇ ಮೋಸಕ್ಕೆ ಒಳಗಾಗಿ ನಷ್ಟವನ್ನು ಅನುಭವಿಸಬೇಕಾಗುತ್ತದೆ.

**12. ಲಾಭ ಬಡುಕತನಕ್ಕೆ ಕಾರಣಗಳಾವುವು?**

ಉತ್ತರ : **ಲಾಭ ಬಡುಕತನಕ್ಕೆ ಕಾರಣಗಳು**

1. ಏಕಸ್ವಾಮ್ಯ ವ್ಯವಸ್ಥೆ 2. ಬಹುರಾಷ್ಟ್ರೀಯ ಕಂಪನಿಗಳ ವ್ಯಾಪಕತೆ
3. ಅನಾರೋಗ್ಯಕರ ಮಾರುಕಟ್ಟೆ ನಿಯಮಗಳು 4. ಅಕ್ರಮ ದಾಸ್ತಾನು
5. ಕಳ್ಳ ವ್ಯಾಪಾರ 6. ಬೆಲೆ ನಿಯಂತ್ರಣ ಇಲ್ಲದಿರುವಿಕೆ

**13. ಲಾಭಕೋರತನದ ದುಷ್ಪರಿಣಾಮಗಳಾವುವು?**

ಉತ್ತರ : **ಲಾಭಕೋರತನದ ದುಷ್ಪರಿಣಾಮಗಳು**

1. ಆರ್ಥಿಕ ಅಸಮಾನತೆಗೆ ಕಾರಣವಾಗುತ್ತದೆ.
2. ಸಮಾಜದಲ್ಲಿ ಬಡತನ ಮತ್ತಷ್ಟು ಹೆಚ್ಚಾಗುತ್ತದೆ.
3. ಸಮಾಜದಲ್ಲಿ ಅಪರಾಧಗಳು ಹೆಚ್ಚಾಗುತ್ತವೆ.
4. ಅನೈತಿಕ ವ್ಯಾಪಾರ ವಹಿವಾಟಿಗೆ ಪ್ರಚೋದನೆಯನ್ನು ನೀಡುತ್ತದೆ
5. ಹಣದುಬ್ಬರಕ್ಕೆ ಎಡೆಮಾಡಿಕೊಡುತ್ತದೆ

**14. ಲಾಭಕೋರತನ ತಡೆಗಟ್ಟಲು ಕೈಗೊಂಡ ಕ್ರಮಗಳಾವವು?**

**ಉತ್ತರ : ಲಾಭಕೋರತನ ತಡೆಗಟ್ಟಲು ಕೈಗೊಂಡ ಕ್ರಮಗಳು**

1. ಕಟ್ಟುನಿಟ್ಟಿನ ಸರ್ಕಾರಿ ನಿಯಂತ್ರಣ
2. ಬೆಲೆ ಸೂಚ್ಯಾಂಕಗಳ ಪರಿಶೀಲನೆ
3. ಸಹಕಾರಿ ಮಾರುಕಟ್ಟೆಗಳ ವಿಸ್ತರಣೆ
4. ಸರಿಯಾದ ತೆರಿಗೆ ಧೋರಣೆ

**15. ಕಳ್ಳ ಸಾಗಾಣಿಕೆಯ ದುಷ್ಪರಿಣಾಮಗಳನ್ನು ಪಟ್ಟಿ ಮಾಡಿರಿ.**

ಉತ್ತರ : **ಕಳ್ಳ ಸಾಗಾಣಿಕೆಯ ದುಷ್ಪರಿಣಾಮಗಳು**

1. ಕಳ್ಳ ಸಾಗಾಣಿಕೆಯು ರಾಷ್ಟ್ರೀಯ ಹಿತಾಸಕ್ತಿಗೆ ಮಾರಕವಾಗಿದೆ.
2. ಅನಪೇಕ್ಷಿತ ಆರ್ಥಿಕ ಚಟುವಟಿಕೆಗಳಿಗೆ ಅವಕಾಶ ಮಾಡಿಕೊಡುತ್ತದೆ.
3. ಕಳ್ಳ ಸಾಗಾಣಿಕೆಯು ದೇಶದ ಆರ್ಥಿಕತೆಗೆ ಹಾನಿಯನ್ನುಂಟು ಮಾಡುತ್ತದೆ.
4. ದೇಶದ ಕೈಗಾರಿಕೆ ಮತ್ತು ಮಾರುಕಟ್ಟೆಗಳು ಹಾನಿಗೊಳಗಾಗುತ್ತವೆ.

**ಪ್ರಶ್ನೆ 5] ಈ ಕೆಳಗಿನ ಪ್ರಶ್ನೆಗಳಿಗೆ 5–6 ವಾಕ್ಯದಲ್ಲಿ ಉತ್ತರಿಸಿರಿ.**

**1. ಕೋಮುವಾದ ಸಮಾಜದ ಐಕ್ಯತೆಗೆ ಮಾರಕ. ಹೇಗೆ? (ಎಪ್ರಿಲ್ 2016)**

ಉತ್ತರ : **ಕೋಮುವಾದ ಸಮಾಜದ ಐಕ್ಯತೆಗೆ ಮಾರಕ ಹೇಗೆಂದರೆ –**

1. ಕೋಮುವಾದವೆಂದರೆ ಅನ್ಯ ಧರ್ಮೀಯರ ಬಗ್ಗೆ ಸೈರಣೆ ಇಲ್ಲದಿರುವದಾಗಿದೆ.
2. ಕೋಮುವಾದ ಸಮಾಜದಲ್ಲಿ ದ್ವೇಷ ಅಸಹಿಷ್ಣುತೆಯನ್ನು ಹುಟ್ಟುಹಾಕುತ್ತದೆ.
3. ಸಾಮಾಜಿಕವಾಗಿ ಭಿನ್ನತೆ, ಪರಸ್ಪರ ಅಪನಂಬಿಕೆ ಹಾಗೂ ಭಯದ ವಾತಾವರಣವನ್ನು ಸೃಷ್ಟಿಸುತ್ತದೆ.
4. ಸಮಾಜದ ನೆಮ್ಮದಿಯನ್ನು ಕೆಡಿಸುವದಲ್ಲದೆ ವ್ಯಕ್ತಿಗಳ ಜೀವ ಹಾಗೂ ಸೊತ್ತುಗಳ ನಾಶಕ್ಕೂ ಕಾರಣವಾಗುತ್ತದೆ.
5. ಕೋಮುವಾದ ದೇಶದ ಜನತೆಯನ್ನು ಮತೀಯ ಆಧಾರದ ಮೇಲೆ ವಿಭಜಿಸಿ ದೇಶವನ್ನು ದುರ್ಬಲಗೊಳಿಸುತ್ತದೆ.
6. ಕೋಮುವಾದ ನಮ್ಮ ಜಾತ್ಯಾತೀತ ತತ್ವಗಳಿಗೆ ವಿರುದ್ಧವಾಗಿದೆ.
7. ಭಾರತದ ರಾಷ್ಟ್ರೀಯ ಭಾವೈಕ್ಯತೆಗೆ ಧಕ್ಕೆ ತರುತ್ತದೆ.

**2. ಸಾಕ್ಷರತೆಯನ್ನು ವೃದ್ಧಿಸಲು ಕೈಗೊಂಡಿರುವ ಕ್ರಮಗಳಾವವು? ಅಥವಾ ಅನಕ್ಷರತೆಯನ್ನು ನಿವಾರಿಸಲು ಭಾರತ ಸರ್ಕಾರ ಕೈಗೊಂಡಿರುವ ಕ್ರಮಗಳಾವುವು?**

**ಉತ್ತರ : ಸಾಕ್ಷರತೆಯನ್ನು ವೃದ್ಧಿಸಲು ಕೈಗೊಂಡಿರುವ ಕ್ರಮಗಳು.**

1. 6 ರಿಂದ 14 ವರ್ಷದ ಮಕ್ಕಳಿಗೆ ಶಿಕ್ಷಣದ ವ್ಯವಸ್ಥೆಗಾಗಿ ಸರ್ವಶಿಕ್ಷಣ ಅಭಿಯಾನ ಕಾರ್ಯಕ್ರಮವನ್ನು ಜಾರಿಗೆ ತರಲಾಗಿದೆ.
2. ಅನಕ್ಷರತೆಯನ್ನು ಹೋಗಲಾಡಿಲು ಭಾರತ ಸರಕಾರವು 1988 ರಲ್ಲಿ 'ರಾಷ್ಟ್ರೀಯ ಸಾಕ್ಷರತಾ ಮಿಷನ್' ಸ್ಥಾಪಿಸಿದೆ.
3. 2009 ರಲ್ಲಿ ದೇಶಾದ್ಯಂತ ಶಿಕ್ಷಣ ಹಕ್ಕು ಕಾಯ್ದೆಯನ್ನು ಜಾರಿಗೊಳಿಸಿದೆ.
4. ಸಂವಿಧಾನದ 21ನೇ ವಿಧಿಯನ್ವಯ ಶಿಕ್ಷಣದ ಹಕ್ಕನ್ನು ಮೂಲಭೂತ ಹಕ್ಕಾಗಿ ಪರಿಗಣಿಸಿದೆ.
5. ಅಕ್ಷರ ದಾಸೋಹ ಯೋಜನೆ & ಕ್ಷೀರಭಾಗ್ಯ ಯೋಜನೆಗಳನ್ನು ಜಾರಿಗೆ ತಂದಿದೆ.
6. ಸರ್ಕಾರಿ ಶಾಲೆಯ ಎಲ್ಲಾ ಮಕ್ಕಳಿಗೂ ಉಚಿತ ಸಮವಸ್ತ್ರ & ಪಠ್ಯಪುಸ್ತಕಗಳನ್ನು ವಿತರಿಸಲಾಗುತ್ತಿದೆ.

**3. ಮಹಿಳೆಯರ ಸ್ಥಾನಮಾನ ಉತ್ತಮಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳಾವುವು?**

**ಉತ್ತರ : ಮಹಿಳೆಯರ ಸ್ಥಾನಮಾನ ಉತ್ತಮಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳು.**

1. ಮಹಿಳೆಯರ ಸಬಲೀಕರಣಕ್ಕಾಗಿ ಮಹಿಳಾ ಶಿಕ್ಷಣ, ಬಾಲ್ಯವಿವಾಹ ನಿಷೇದ ಕಾಯ್ದೆ, ವರದಕ್ಷಿಣೆ ನಿಷೇದ ಕಾಯ್ದೆ & ಬಹುಪತ್ನಿತ್ವ ನಿಷೇಧ ಕಾಯ್ದೆ ಮುಂತಾದ ಕಾರ್ಯಕ್ರಮಗಳನ್ನು ರೂಪಿಸಿದೆ.
2. ಕರ್ನಾಟಕ ಸರ್ಕಾರವು ಗ್ರಾಮಾಂತರ ಮಹಿಳೆಯರ ವಿಕಾಸಕ್ಕೆ 'ಸ್ತ್ರೀ ಶಕ್ತಿ' ಎಂಬ ಕಾರ್ಯಕ್ರಮವನ್ನು ರೂಪಿಸಿದೆ.
3. ಸರ್ಕಾರಿ ಉದ್ಯೋಗಗಳಲ್ಲಿ ಮಹಿಳೆಯರಿಗೆ ನಿಗದಿತ ಪ್ರಮಾಣದ ಮೀಸಲಾತಿಯನ್ನು ನೀಡಲಾಗುತ್ತಿದೆ.
4. ಆಸ್ತಿಯಲ್ಲಿ ಸ್ತ್ರೀಯರಿಗೆ ಭಾಗ ನೀಡಬೇಕೆಂಬ ಕಾನೂನನ್ನು ಜಾರಿಗೊಳಿಸಲಾಗಿದೆ.
5. ಮಹಿಳೆಯರ ಸ್ವ–ಉದ್ಯೋಗಕ್ಕಾಗಿ ಸಾಲ ಸೌಲಭ್ಯ ಮತ್ತು ಸಬ್ಸಿಡಿ ನೀಡುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.
6. ಕರ್ನಾಟಕದ ಸ್ಥಳೀಯ ಸಂಸ್ಥೆಯ ಚುನಾವಣೆಗಳಲ್ಲಿ ಶೇ. 33ರ ಪ್ರಮಾಣದಲ್ಲಿ ಮೀಸಲಾತಿ ಕಲ್ಪಿಸಲಾಗಿದೆ.

**4. ಕಳ್ಳ ಸಾಗಾಣಿಕೆ ಎಂದರೇನು? ಇದನ್ನು ತಡೆಗಟ್ಟಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ?**

**ಉತ್ತರ :** ಯಾವುದೇ ಆಮದು ಸುಂಕವನ್ನು ನೀಡದೆ ಗುಪ್ತವಾಗಿ ವಿದೇಶಗಳಿಂದ ವಸ್ತುಗಳನ್ನು ತರಿಸಿಕೊಳ್ಳುವುದನ್ನು ಕಳ್ಳಸಾಗಾಣಿಕೆ ಎಂದು ಕರೆಯುತ್ತಾರೆ.

**ಕಳ್ಳ ಸಾಗಾಣಿಕೆ ತಡೆಗಟ್ಟಲು ಕೈಗೊಂಡ ಕ್ರಮಗಳು.**

1. ವಿದೇಶಿ ವಸ್ತುಗಳಿಗೆ ಪರ್ಯಾಯವಾಗಿ ದೇಶಿಯ ವಸ್ತುಗಳನ್ನು ಉತ್ಪಾದಿಸುವುದು.
2. ದೇಶದ ಆಂತರಿಕ ಮಾರುಕಟ್ಟೆಯಲ್ಲಿ ಬೆಲೆಯನ್ನು ನಿಯಂತ್ರಿಸುವುದು.
3. ವಿಮಾನ ನಿಲ್ದಾಣ ಮತ್ತು ಬಂದರುಗಳಲ್ಲಿ ಅಧಿಕಾರಿಗಳಿಂದ ಸೂಕ್ತ ತಪಾಸಣೆ ಮತ್ತು ಕ್ರಮ.
4. ಅಂತರರಾಷ್ಟ್ರೀಯ ಮತ್ತು ಅಂತರ ರಾಜ್ಯಗಳು ಪರಸ್ಪರ ವ್ಯಾಪಾರ ಒಪ್ಪಂದವನ್ನು ಮಾಡಿಕೊಳ್ಳುವುದು.
5. ಕಳ್ಳ ಸಾಗಾಣಿಕೆಯನ್ನು ತಡೆಯಲು ಕಠಿಣ ಕಾನೂನನ್ನು ಜಾರಿಗೆ ತರುವುದು.
6. ಕಳ್ಳ ಸಾಗಾಣಿಕೆಯ ಬಗ್ಗೆ ಜನರಲ್ಲಿ ಅರಿವು ಮೂಡಿಸುವುದು.
7. ಕಳ್ಳ ಸಾಗಾಣಿಕೆ ವಸ್ತುಗಳನ್ನು ಸಾಮಾಜಿಕವಾಗಿ ಬಹಿಷ್ಕರಿಸುವುದು

## ಅಧ್ಯಾಯ 3] ಅನ್ಯರಾಷ್ಟ್ರಗಳೊಂದಿಗೆ ಭಾರತದ ಸಂಬಂಧ

**ಪ್ರಶ್ನೆ 1] ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1. ತಾಷ್ಕೆಂಟ್ ಒಪ್ಪಂದಕ್ಕೆ ಸಹಿ ಹಾಕಿದ ರಾಷ್ಟ್ರಗಳು – **ಭಾರತ ಮತ್ತು ಪಾಕಿಸ್ತಾನ**
2. ಕಾರ್ಗಿಲ್ ಯುದ್ಧ ನಡೆದ ವರ್ಷ – **ಕ್ರಿಶ 1999**
3. ಅಕ್ಟೋಬರ್ 1949 ರಂದು ____ ದೇಶವು ಕಮ್ಯುನಿಷ್ಟ ರಾಷ್ಟ್ರವೆಂದು ಘೋಷಿಸಿಕೊಂಡಿತು. – **ಚೀನಾ ದೇಶ**
4. ಚೀನಾ ದೇಶವು ಕಮ್ಯುನಿಸ್ಟ್ ದೇಶವಾಗಿ ಘೋಷಣೆಯಾದದ್ದು – **ಅಕ್ಟೋಬರ್ 1949,**
5. ಭಾರತದ ದೋರಣೆಯ ವಿರುದ್ಧ ಟಿಬೇಟನ್ನು ವಶಪಡಿಸಿಕೊಂಡ ದೇಶ. – **ಚೀನಾ ದೇಶ**
6. ಭಾರತ– ಚೀನಾ ಯುದ್ಧ ನಡೆದ ವರ್ಷ – **ಕ್ರಿಶ 1962**
7. ಚೀನಾ ದೇಶವು ______ ರಾಜ್ಯವನ್ನು ತನ್ನದೆಂದು ಪ್ರತಿಪಾದಿಸಿದ್ದು, ಭಾರತ & ಚೀನಾಗಳ ಪರಸ್ಪರ ಸಂಬಂಧದ ಮೇಲೆ ದುಷ್ಪರಿಣಾಮ ಬೀರಿದೆ. – **ಅರಣಾಚಲ ಪ್ರದೇಶ,**
8. ಭಾರತದಲ್ಲಿ ನಕ್ಸಲ್‌ವಾದ ಹರಡಲು ಪ್ರಯತ್ನಿಸುತ್ತಿರುವ ದೇಶ – **ಚೀನಾ**
9. ಬಾಂಗ್ಲಾ ದೇಶವು ನಮ್ಮ ______ ಭಾಗದಲ್ಲಿದೆ.– **ಪೂರ್ವ ಭಾಗ**
10. ಚರಿತ್ರೆಯ ಕಾಲಘಟ್ಟದಲ್ಲಿ ಬೌದ್ಧ ಧರ್ಮ ಭಾರತೀಯ ಭಿಕ್ಷುಗಳಿಂದ ______ ದೇಶದಲ್ಲಿ ಪಸರಿಸಲ್ಪಟ್ಟಿತು. – **ಶ್ರೀಲಂಕಾ**
11. ಶ್ರೀಲಂಕಾದ ಜಾಫ್ನ ಭಾಗದಲ್ಲಿನ ತಮಿಳು ಪ್ರತ್ಯೇಕವಾದಿ ಸಂಘಟನೆ – **ಎಲ್.ಟಿ.ಟಿ.ಇ. ಸಂಘಟನೆ**
12. ಭಾರತದ ಭಿಲೈ ಹಾಗೂ ಭೋಕಾರೋ ಉಕ್ಕಿನ ಕಾರ್ಖಾನೆಗಳಿಗೆ ಸಹಕರಿಸಿದ ದೇಶ. – **ರಷ್ಯಾ ದೇಶ**
13. 1949ರಲ್ಲಿ ಚೀನಾ ಕಮ್ಯುನಿಸ್ಟ್ ರಾಷ್ಟ್ರವೆಂದು ಉದಯಿಸಿದಾಗ ಅದಕ್ಕೆ ಮಾನ್ಯತೆ ನೀಡಿದ ಮೊದಲ ರಾಷ್ಟ್ರ – **ಭಾರತ**
14. ಭಾರತ ಪಾಕಿಸ್ತಾನದ ಜೊತೆ ಒಳ್ಳೆಯ ಸಂಬಂಧ ಹೊಂದಲು ಪ್ರಯತ್ನಿಸಿದರೂ ಪಾಕಿಸ್ತಾನ ಭಾರತದೊಂದಿಗೆ ಒಳ್ಳೆಯ ಬಾಂಧವ್ಯ ಇರಿಸಿಕೊಂಡಿಲ್ಲ. ಏಕೆಂದರೆ – **ಪಾಕಿಸ್ತಾನದ ಮಿಲಿಟರಿಶಾಹಿತ್ವ & ರಾಜಕೀಯ ಅಸ್ಥಿರತೆಯಿಂದ**
15. ಭಾರತ ಮತ್ತು ಪಾಕಿಸ್ತಾನದ ಸಂಬಂಧ ಸುಧಾರಣೆಗೆ ಅಡ್ಡಿಯಾಗಿರುವ ಅತ್ಯಂತ ಪ್ರಮುಖ ಅಂಶವೆಂದರೆ – **ಕಾಶ್ಮೀರ ಸಮಸ್ಯೆ & ಭಯೋತ್ಪಾದನೆ**
16. ಭಾರತ– ಚೀನಾ ಸಂಬಂಧವು ಈ ತತ್ವಗಳ ಮೇಲೆ ಅವಲಂಬಿತವಾಗಿದೆ. – **ಪಂಚಶೀಲ ತತ್ವ & ಭಾರತ–ಚೀನಿ ಭಾಯಿಭಾಯಿ**
17. ನೇಪಾಳವು ಮುಖ್ಯವಾಗಿ ಭಾರತವನ್ನೇ ಅವಲಂಭಿಸಿದೆ. ಏಕೆಂದರೆ – **ಅದು ಪರ್ವತಗಳಿಂದ ಆವೃತ್ತವಾಗಿದೆ,**
18. ಶ್ರೀಲಂಕಾಕ್ಕೆ ಯಾವ ಉಗ್ರರನ್ನು ನಿಗ್ರಹಿಸಲು ಭಾರತ ಮಿಲಿಟರಿ ಸಹಾಯ ಮಾಡಿತು. – **ಎಲ್‌ಟಿಟಿಇ**
19. 1966ರಲ್ಲಿ ಭಾರತ–ಪಾಕಿಸ್ತಾನಗಳ ಮಧ್ಯೆ ಈ ಕೆಳಗಿನ ಒಪ್ಪಂದಕ್ಕೆ ರಷ್ಯಾ ಸಹಕರಿಸಿತು. – **ತಾಷ್ಕೆಂಟ್**
20. ಭಾರತ ಮತ್ತು ಚೀನಾ ದೇಶಗಳೆರೆಡು ಅರುಣಾಚಲ ಪ್ರದೇಶ ತಮ್ಮದೆಂದು ಪ್ರತಿಪಾದಿಸಲು ಕಾರಣ – **ಭಾರತ ಮತ್ತು ಚೀನಾ ದೇಶಗಳ ಮಧ್ಯೆ ನಿಖರ ಗಡಿರೇಖೆ ಇಲ್ಲದಿರುವುದರಿಂದ**

ಇದು ಪಿ ಎಸ್ ಎಸ್ ಡಿ ಎಫ್ ಡಿಜಿಟಲ್ ಗ್ರೂಪ್‌ನ ಕೊಡುಗೆ

**ಪ್ರಶ್ನೆ 2] ಈ ಕೆಳಗಿನ ಪ್ರಶ್ನೆಗಳಿಗೆ 4 – 5 ಉತ್ತರಿಸಿರಿ.**

**1. ಅನ್ಯ ರಾಷ್ಟ್ರಗಳೊಂದಿಗೆ ಉತ್ತಮ ಬಾಂಧವ್ಯ ಅವಶ್ಯಕ ಏಕೆ?**

ಉತ್ತರ : **ಅನ್ಯ ರಾಷ್ಟ್ರಗಳೊಂದಿಗೆ ಉತ್ತಮ ಬಾಂಧವ್ಯ ಅವಶ್ಯಕ ಯಾಕೆಂದರೆ –**

1. ನಾವೊಂದು ಸ್ವತಂತ್ರ ರಾಷ್ಟ್ರವಾಗಿ ಎಲ್ಲಾ ವಿದೇಶಗಳೊಂದಿಗೆ ಉತ್ತಮ ಸಂಬಂಧ ಹೊಂದಬೇಕಾಗಿದೆ.
2. ಅದರಲ್ಲಿಯೂ ಮುಖ್ಯವಾಗಿ ಏಷ್ಯಾ ಖಂಡದ ನಮ್ಮ ನೆರೆಹೊರೆಯ ರಾಷ್ಟ್ರಗಳೊಂದಿಗೆ ಒಳ್ಳೆಯ ಬಾಂಧವ್ಯ ಇರಿಸಿಕೊಳ್ಳಬೇಕಾಗಿದೆ.
3. ಇದರೊಂದಿಗೆ ರಾಷ್ಟ್ರೀಯ ಹಿತಾಶಕ್ತಿಗಳಾದ ಗಡಿ ಭದ್ರತೆ, ವಿದೇಶ ವ್ಯಾಪಾರ, ಆರ್ಥಿಕ ಲಾಭ, ರಾಷ್ಟ್ರದ ಗೌರವ ಮುಂತಾದವುಗಳನ್ನು ಜೋಪಾನವಾಗಿ ಕಾಯ್ದುಕೊಳ್ಳಬೇಕಾಗಿದೆ.
4. ಈ ಎಲ್ಲಾ ಕಾರಣಗಳಿಗಾಗಿ ನಾವು ಅನ್ಯ ರಾಷ್ಟ್ರಗಳೊಂದಿಗೆ ಉತ್ತಮ ಬಾಂಧವ್ಯ ಹೊಂದುವುದು ಅವಶ್ಯಕ.

**2. ಭಾರತ & ಪಾಕಿಸ್ತಾನದ ಮಧ್ಯೆ ಉದ್ವಿಗ್ನತೆಗೆ ಕಾರಣವಾದ ವಿಷಯಗಳು ಯಾವುವು? ಅಥವಾ**

**ಭಾರತ ಮತ್ತು ಪಾಕಿಸ್ತಾನ ನಡುವಿನ ಸಂಬಂಧವನ್ನು ವಿವರಿಸಿ.**

ಉತ್ತರ : 1947ರಲ್ಲಿ ಸ್ವಾತಂತ್ರ್ಯ ದೊರೆಕಿದಾಗಿನಿಂದಲೂ ಭಾರತ ಮತ್ತು ಪಾಕಿಸ್ತಾನಗಳ ಮಧ್ಯೆ ಸಂಬಂಧ ಸೌಹಾರ್ದಯುತವಾಗಿಲ್ಲ. ಯಾಕೆಂದರೆ –

1. ದೇಶದ ವಿಭಜನೆಯಿಂದಾಗಿ ಉದ್ಭವಿಸಿದ ಸಮಸ್ಯೆಗಳು ಈ ಉಭಯ ರಾಷ್ಟ್ರಗಳ ಮೈತ್ರಿಯುತ ಬಾಂಧವ್ಯಕ್ಕೆ ಆಸ್ಪದವನ್ನೇ ನೀಡಿಲ್ಲ.
2. ಕಾಶ್ಮೀರ ಸಮಸ್ಯೆ
3. ಮಿಲಿಟರಿ ಕೂಟಗಳೊಂದಿಗೆ ಪಾಕಿಸ್ತಾನದ ಸಂಬಂಧ
4. ಚೀನಾ–ಪಾಕ್ ಮೈತ್ರಿ
5. ನೀರಿನ ವಿವಾದ
6. ಎರಡು ರಾಷ್ಟ್ರಗಳಲ್ಲಿನ ಅಲ್ಪಸಂಖ್ಯಾತರ ನಿರಂತರ ಸಮಸ್ಯೆ
7. ಭಯೋತ್ಪಾದನೆ
8. 1947, 1965, 1971 ಮತ್ತು 1999ರ ಯುದ್ಧಗಳು

ಈ ಮೇಲಿನ ಕಾರಣಗಳ ಜೊತೆಗೆ ಕಾಶ್ಮೀರದ ಬಗೆಗಿನ ಪಾಕಿಸ್ತಾನದ ಹಠಮಾರಿ ಧೋರಣೆಯಿಂದಾಗಿ ಭಾರತ ಮತ್ತು ಪಾಕಿಸ್ತಾನಗಳ ನಡುವಿನ ಸಂಬಂಧ ಸ್ವಾತಂತ್ರ್ಯ ಬಂದಾಗಿನಿಂದಲೂ ಸೌಹಾರ್ದಯುತವಾಗಿಲ್ಲ.

**3. ಇತ್ತೀಚಿನ ದಿನಗಳಲ್ಲಿ ಚೀನಾದೊಂದಿಗೆ ನಮ್ಮ ಬಾಂಧವ್ಯ ಹದಗೆಡಲು ಕಾರಣಗಳಾವವು? ಅಥವಾ**

**ಭಾರತ ಮತ್ತು ಚೀನಾ ದೇಶಗಳ ಸಂಬಂಧವನ್ನು ವಿವರಿಸಿ.**

ಉತ್ತರ : **ಇತ್ತೀಚಿನ ದಿನಗಳಲ್ಲಿ ಚೀನಾದೊಂದಿಗೆ ನಮ್ಮ ಬಾಂಧವ್ಯ ಹದಗೆಡಲು ಕಾರಣಗಳು.**

1. ಭಾರತದ ಧೋರಣೆಗೆ ವಿರುದ್ಧವಾಗಿ ಚೀನಾ ಟಿಬೇಟನ್ನು ವಶಪಡಿಸಿ ಕೊಂಡಿತು.
2. 1962ರಲ್ಲಿ ಚೀನಾ ಭಾರತವನ್ನು ಆಕ್ರಮಿಸಿತು ಮತ್ತು ಭಾರತ ಯುದ್ಧದಲ್ಲಿ ಸೋತಿತು.
3. ನಮ್ಮ ರಾಜ್ಯಗಳಲ್ಲಿ ಒಂದಾದ ಅರುಣಾಚಲ ಪ್ರದೇಶವನ್ನು ಚೀನಾ ತನ್ನದೆಂದು ಪ್ರತಿಪಾದಿಸುತ್ತಿದ್ದು ಈ ವಿಷಯ ಎರಡು ರಾಷ್ಟ್ರಗಳ ಸಂಬಂಧದ ಮೇಲೆ ದುಷ್ಪರಿಣಾಮವನ್ನು ಬೀರುತ್ತಿದೆ.
4. ಭಾರತ ಮತ್ತು ಚೀನಾ ದೇಶಗಳ ಮಧ್ಯೆ ನಿಖರವಾದ ಗಡಿ ರೇಖೆಯಿರದೇ ಕೇವಲ ವಾಸ್ತವಿಕ ನಿಯಂತ್ರಣ ರೇಖೆ ಮಾತ್ರ ಇದೆ.
5. ಮಾವೋವಾದಿಗಳು ಭಾರತದಲ್ಲಿ ನಕ್ಸಲ್‌ವಾದನ್ನು ಪಸರಿಸುವುದರಿಂದ ಈ ಎರಡು ರಾಷ್ಟ್ರಗಳ ಮಧ್ಯೆ ಮನಸ್ತಾಪವಿದೆ.
6. ಅಣ್ವಸ್ತ್ರ ತಯಾರಿ, ವಿದೇಶಿ ವ್ಯಾಪಾರದ ಸವಾಲುಗಳು, ಗಡಿಯಲ್ಲಿ ಮಿಲಿಟರಿ ಪಡೆಗಳ ಅತಿಕ್ರಮಣ ಇವೆಲ್ಲಾ ಚೀನಾದ ಬಗೆಗೆ ಭಾರತದ ನೀತಿಯ ಮೇಲೆ ಪರಿಣಾಮ ಬೀರುತ್ತವೆ.

**4. ನೇಪಾಳದೊಂದಿಗೆ ಭಾರತದ ಸಂಬಂಧವನ್ನು ವಿವರಿಸಿ.**

ಉತ್ತರ : **ಭಾರತ & ನೇಪಾಳ ಸಂಬಂಧ**

1. ನೇಪಾಳವು ಭಾರತದೊಂದಿಗೆ ಭೌಗೋಳಿಕ ಸಾಮೀಪ್ಯವನ್ನು ಹೊಂದಿರುವ ರಾಷ್ಟ್ರವಾಗಿದ್ದು ಈ ದೇಶಗಳ ನಡುವೆ ಪರಸ್ಪರ ಸಾಂಸ್ಕೃತಿಕ ಸಂಬಂಧಗಳಿವೆ ಮತ್ತು ಸಮಾನ ಸಾಮಾಜಿಕ ಅಂಶಗಳಿವೆ.
2. ಸಾರ್ಕ್‌ನ ಸದಸ್ಯ ರಾಷ್ಟ್ರವಾಗಿರುವ ನೇಪಾಳದ ಅಭಿವೃದ್ಧಿಗೆ ಭಾರತ ಎಲ್ಲಾ ರೀತಿಯ ಸಹಾಯ ಮತ್ತು ಸಹಕಾರವನ್ನು ನೀಡುತ್ತಿದೆ.
3. ನೇಪಾಳದಲ್ಲಿ ರಾಜಪ್ರಭುತ್ವ ಅಂತ್ಯಗೊಂಡ ಬಳಿಕ ಇದೀಗ ಚೀನಾದ ಕಮ್ಯುನಿಸ್ಟ್ ಪ್ರಭಾವವನ್ನು ಕಾಣಬಹುದಾಗಿದೆ.
4. ನೇಪಾಳದ ರಾಜಕೀಯ ಸ್ಥಿರತೆಗೆ ಪೂರಕವಾದ ರಾಜತಾಂತ್ರಿಕ ನೆರವು ಮತ್ತು ಆರ್ಥಿಕ ನೆರವನ್ನು ಭಾರತ ನೀಡುತ್ತಿದೆ.
5. ಭಾರತ ಹಲವಾರು ಬಗೆಯ ವ್ಯಾಪಾರದ ರಿಯಾಯತಿಗಳನ್ನು ನೇಪಾಳಕ್ಕೆ ನೀಡಿದೆ.
6. ಆದರೆ ನೇಪಾಳದ ಮೂಲಕ ಮಾದಕವಸ್ತುಗಳು ಹಾಗೂ ಶಸ್ತ್ರಾಸ್ತ್ರಗಳ ಕಳ್ಳ ಸಾಗಾಣಿಕೆಯನ್ನು ದೃಢವಾಗಿ ಭಾರತ ಹತ್ತಿಕ್ಕಬೇಕಾಗಿದೆ.

**5. ಭಾರತ & ಬಾಂಗ್ಲಾ ದೇಶಗಳ ಮಧ್ಯೆ ಸಂಬಂಧಗಳು ಅಷ್ಟೊಂದು ಅನ್ಯೋನ್ಯತೆಯಿಂದ ಕೂಡಿಲ್ಲ ಇದಕ್ಕೆ ಕಾರಣಗಳೇನು?**

**ಅಥವಾ ಭಾರತದೊಂದಿಗೆ ಬಾಂಗ್ಲಾದೇಶದ ಸಂಬಂಧವನ್ನು ವಿವರಿಸಿ.**

ಉತ್ತರ : **ಭಾರತದೊಂದಿಗೆ ಬಾಂಗ್ಲಾದೇಶದ ಸಂಬಂಧ**

1. 1971ರಲ್ಲಿ ಬಾಂಗ್ಲಾದೇಶದ ನಿರ್ಮಾಣದಲ್ಲಿ ಭಾರತ ಪ್ರಧಾನ ಪಾತ್ರವಹಿಸಿತು.
2. ಹಿಂದಿನ ಪೂರ್ವ ಪಾಕಿಸ್ತಾನ ಬಾಂಗ್ಲಾದೇಶ ಎಂಬ ಹೆಸರಿನಲ್ಲಿ ಸ್ವತಂತ್ರ ರಾಷ್ಟ್ರವಾಗಿ ಉದಯಿಸಲು 1971ರ ಭಾರತ– ಪಾಕಿಸ್ತಾನ ಯುದ್ಧದಲ್ಲಿ ಭಾರತ ಜಯ ಗಳಿಸಿದ್ದೇ ಮುಖ್ಯ ಕಾರಣ.
3. ಬಾಂಗ್ಲಾದೇಶ 1947ರವರೆಗೂ ಭಾರತದ ಭೂಭಾಗ ಎನಿಸಿದ್ದು, ಸಹಜವಾಗಿ ಭಾರತದೊಂದಿಗೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಬಂಧವನ್ನು ಹೊಂದಿದೆ.
4. ಅನೇಕ ರಾಜಕೀಯ ಏರುಪೇರುಗಳ ಹೊರತಾಗಿಯೂ ಭಾರತ ಬಾಂಗ್ಲಾದೇಶದೊಂದಿಗೆ ಉತ್ತಮ ಸಂಬಂಧವನ್ನು ಇರಿಸಿಕೊಂಡಿದೆ.
5. ಬಾಂಗ್ಲಾದೇಶಿಯರ ಅಕ್ರಮ ಪ್ರವೇಶ, ಶಸ್ತ್ರಾಸ್ತ್ರಗಳ ಹಾಗೂ ಮಾದಕ ಪದಾರ್ಥಗಳ ಅಕ್ರಮ ಸಾಗಾಣಿಕೆ, ಭಯೋತ್ಪಾದನೆ ಮುಂತಾದ ಸಮಸ್ಯೆಗಳನ್ನು ನಿವಾರಿಸಬೇಕಾಗಿದೆ.
6. ನದಿ ನೀರು, ಸಾರಿಗೆ, ಅಂತರರಾಷ್ಟ್ರೀಯ ವ್ಯಾಪಾರ, ಗಡಿವಿಷಯ ಮಂತಾದುವುಗಳಲ್ಲಿ ಭಾರತ ಬಾಂಗ್ಲಾದೇಶದ ಬಗ್ಗೆ ಹೆಚ್ಚಿನ ಸಹಾನುಭೂತಿ ಹೊಂದಿದೆ.

**6. ಭಾರತ – ಶ್ರೀಲಂಕಾ ಬಾಂಧವ್ಯವು ಐತಿಹಾಸಿಕವಾದುದು. ಈ ಹೇಳಿಕೆಯ ಹಿನ್ನೆಲೆಯಲ್ಲಿ ಈ ರಾಷ್ಟ್ರಗಳ ಬಾಂಧವ್ಯವನ್ನು ವಿಮರ್ಶಿಸಿ.**

ಉತ್ತರ : **ಭಾರತ – ಶ್ರೀಲಂಕಾ ಬಾಂಧವ್ಯವು ಐತಿಹಾಸಿಕವಾದುದು. ಹೇಗೆಂದರೆ –**

1. ರಾಮಾಯಣ ಕಾಲದಿಂದಲೂ ಭಾರತ & ಶ್ರೀಲಂಕಾಗಳ ಮಧ್ಯೆ ಉತ್ತಮ ಸಂಬಂಧ ಇದೆ.
2. ಚರಿತ್ರೆಯ ಕಾಲಘಟ್ಟದಲ್ಲಿ ಬೌದ್ಧ ಧರ್ಮ ಭಾರತೀಯ ಭಿಕ್ಷುಗಳಿಂದ ಶ್ರೀಲಂಕಾದಲ್ಲಿ ಪಸರಿಸಲ್ಪಟ್ಟಿತ್ತು.
3. ರಾಜಕೀಯ & ಆರ್ಥಿಕ ರಂಗದಲ್ಲಿ ಭಾರತ ಶ್ರೀಲಂಕಾದೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದಿದೆ.
4. ಸಮುದ್ರ ವ್ಯಾಪಾರದ ಬಗೆಗಿನ ಒಪ್ಪಂದ ಮಾಡಿಕೊಳ್ಳಲಾಗಿದೆ.
5. ಶ್ರೀಲಂಕಾದ ಮನವಿಯ ಮೇರೆಗೆ ಭಾರತದ ಶಾಂತಿಪಾಲನ ಪಡೆಯನ್ನು ಕಳುಹಿಸಲಾಯಿತು.

**7. ಭಾರತ & ಅಮೇರಿಕಾ ದೇಶಗಳು ಪ್ರಜಾತಂತ್ರ ದೇಶಗಳಾಗಿದ್ದು, ಇವುಗಳ ಪರಸ್ಪರ ಸೌಹಾರ್ದತೆಯು ಹೇಗಿದೆ ಎಂಬುದನ್ನು ವಿವರಿಸಿ.**

ಇದು ಪಿ ಎಸ್ ಎಸ್ ಟಿ ಎಫ್ ಡಿಜಿಟಲ್ ಲೈಬ್ರರಿ ಕೊಡುಗೆ

ಉತ್ತರ : ಭಾರತ & ಅಮೇರಿಕಾ ದೇಶಗಳು ಪ್ರಜಾತಂತ್ರ ದೇಶಗಳಾಗಿದ್ದು, ಪ್ರಚಲಿತ ಜಾಗತಿಕ ವಿದ್ಯಮಾನದಲ್ಲಿ ಈ ಎರಡು ರಾಷ್ಟ್ರಗಳ ಪರಸ್ಪರ ಮೈತ್ರಿ ತುಂಬಾ ಪ್ರಾಮುಖ್ಯವಾದುದು. ಏಕೆಂದರೆ –

1. ಭಾರತದ ಪಂಚವಾರ್ಷಿಕ ಯೋಜನೆಗೆ ಅಮೇರಿಕಾ ತುಂಬಾ ಸಹಾಯ ನೀಡಿತು.
2. 1962ರ ಚೀನಾ ಆಕ್ರಮಣ ಸಂದರ್ಭದಲ್ಲೂ ಅಮೇರಿಕಾದ ಸಹಾಯ ನಮಗೆ ತುಂಬಾ ಶಕ್ತಿ ನೀಡಿತು.
3. ಭಯೋತ್ಪಾದನೆ ಹತ್ತಿಕ್ಕುವಲ್ಲಿ ನಮ್ಮೆರಡು ರಾಷ್ಟ್ರಗಳ ಮಧ್ಯೆ ಸಮಾನ ಹಿತಾಸಕ್ತಿಯಿದೆ.
4. ಭಾರತವು ವಿದೇಶಿ ವ್ಯಾಪಾರ, ವಿಜ್ಞಾನ ಮತ್ತು ತಾಂತ್ರಿಕತೆ, ಬಾಹ್ಯಾಕಾಶ, ಶಿಕ್ಷಣ ಮುಂತಾದ ಕ್ಷೇತ್ರಗಳಲ್ಲಿ ಅಮೇರಿಕಾದೊಂದಿಗೆ ಉತ್ತಮ ಬಾಂಧವ್ಯ ಹೊಂದಿದೆ.
5. ವಿಶ್ವಸಂಸ್ಥೆಯನ್ನು ಬಲಪಡಿಸುವ ಹಾಗೂ ಜಾಗತಿಕ ಶಾಂತಿಯನ್ನು ಉಳಿಸುವ ನಿಟ್ಟಿನಲ್ಲಿ ಎರಡು ರಾಷ್ಟ್ರಗಳು ಸಮಾನ ಧೋರಣೆ ಹೊಂದಿವೆ.

**8. ರಷ್ಯಾದೊಂದಿಗೆ ಭಾರತದ ಸಂಬಂಧವನ್ನು ವಿವರಿಸಿ.**

**(ಎಪ್ರಿಲ್ 2015) (ಜೂನ್ 2015) (ಎಪ್ರಿಲ್ 2016)**

ಉತ್ತರ : **ಭಾರತ ಮತ್ತು ರಷ್ಯಾ ಸಂಬಂಧ**

1. ಭಾರತ ಮತ್ತು ರಷ್ಯಾ ದೇಶಗಳ ನಡುವಿನ ಸಂಬಂಧವು ಅತ್ಯಂತ ಸುಮಧುರವಾಗಿದ್ದು, ರಷ್ಯಾ ನಮ್ಮ ದೇಶದ ಶಾಶ್ವತ ಮಿತ್ರ ಎಂದೇ ಕರೆಯಬಹುದು.
2. ಭಾರತ ಅಲಿಪ್ತ ನೀತಿ ಹೊಂದಿದ್ದರೂ ಭಾರತ–ಸೋವಿಯತ್ ರಷ್ಯಾ ಒಪ್ಪಂದವು ರಾಜಕೀಯ, ಆರ್ಥಿಕ ಹಾಗೂ ಇತರೆ ಕ್ಷೇತ್ರಗಳಲ್ಲಿ ಉತ್ತಮ ಪ್ರಗತಿಯನ್ನು ಕಂಡಿತು.
3. 1966ರ ತಾಷ್ಕೆಂಟ್‌ನಲ್ಲಿ ಭಾರತ–ಪಾಕಿಸ್ತಾನಗಳ ಮಧ್ಯೆ ಒಪ್ಪಂದಕ್ಕೆ ರಷ್ಯಾ ಸಹಕರಿಸಿತು.
4. 1971ರಲ್ಲಿ ಭಾರತ ಮತ್ತು ರಷ್ಯಾ 20 ವರ್ಷಗಳ ಶಾಂತಿ, ಮೈತ್ರಿ ಹಾಗೂ ಸಹಕಾರ ಒಪ್ಪಂದಕ್ಕೆ ಸಹಿ ಹಾಕಿದವು.
5. ಭಾರತದ ಮೇಲೆ ಚೀನಾ ಆಕ್ರಮಣವನ್ನು ಖಂಡಿಸಿತು.
6. ಗೋವಾ ವಿಮೋಚನೆಯ ವೇಳೆ ಭಾರತವನ್ನು ರಷ್ಯಾ ಬೆಂಬಲಿಸಿತು.
7. ಭಾರತದಲ್ಲಿ ಭಿಲಾಯ್ ಮತ್ತು ಭೋಕಾರೋ ಕಬ್ಬಿಣ & ಉಕ್ಕಿನ ಕಾರ್ಖಾನೆಗಳ ಸ್ಥಾಪನೆಗೆ ರಷ್ಯಾ ನೆರವು ನೀಡಿತು.

8. ನಮ್ಮ ದೇಶದ ಕೈಗಾರಿಕೆ ಮತ್ತು ವಾಣಿಜ್ಯ ಬೆಳವಣಿಗೆಗೆ ರಷ್ಯಾ ಸಾಕಷ್ಟು ನೆರವು ನೀಡಿದೆ.
9. ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಭಾರತಕ್ಕೆ ಖಾಯಂ ಸದಸ್ಯತ್ವ ದೊರೆಯಬೇಕೆಂದು ರಷ್ಯಾ ಪ್ರತಿಪಾದಿಸುತ್ತಿದೆ.

## ಸಮಾಜಶಾಸ್ತ್ರ – ಅಧ್ಯಾಯ 1. ಸಾಮಾಜಿಕ ಸ್ತರವಿನ್ಯಾಸ

**ಪ್ರಶ್ನೆ 1] ಬಿಟ್ಟ ಸ್ಥಳಗಳನ್ನು ಸೂಕ್ತಸ್ಥಳಗಳಿಂದ ತುಂಬಿರಿ.**

1. ಮಾನವ ಕುಲ ತಾನೊಂದೇ ವಲಂ ಎಂದು ಹೇಳಿದವರು – **ಆದಿಕವಿ ಪಂಪ**
2. ಅಸ್ಪೃಶ್ಯತೆ ಹಿಂದೂ ಸಮಾಜಕ್ಕೆ ಹತ್ತಿದ ಕಳಂಕ ಎಂದವರು – **ಮಹಾತ್ಮ ಗಾಂಧೀಜಿ**
3. ಅಸ್ಪೃಶ್ಯತಾ ಆಚರಣೆ ಶಿಕ್ಷಾರ್ಹ ಅಪರಾಧ ಎಂದು ಘೋಷಿಸಿದ ಸಂವಿಧಾನದ ವಿಧಿ – **17ನೇ ವಿಧಿ (ಜೂನ್ 2015)**
4. ಅಸ್ಪೃಶ್ಯತಾ ಅಪರಾಧಗಳ ಕಾಯ್ದೆಯನ್ನು ಕ್ರಿಶ ________ ರಲ್ಲಿ ಜಾರಿಗೊಳಿಸಲಾಯಿತು. – **1955**
5. ಅಸ್ಪೃಶ್ಯತಾ ಅಪರಾಧಗಳ ಕಾಯ್ದೆಯನ್ನು ಕ್ರಿಶ ________ ರಲ್ಲಿ ನಾಗರಿಕ ಹಕ್ಕುಗಳ ಸಂರಕ್ಷಣಾ ಕಾಯ್ದೆ ಎಂದು ಮಾರ್ಪಾಡುಗೊಳಿಸಲಾಯಿತು. – **1976**
6. ಒಬ್ಬ ವ್ಯಕ್ತಿ ಅಥವಾ ಒಂದು ಸಮೂಹದವರ ಬಗ್ಗೆ ಹೊಂದಿರಬಹುದಾದ ಪೂರ್ವ ನಿರ್ಧಾರಿತ ಮನೋಭಾವನೆಯೇ – **ಪೂರ್ವಾಗ್ರಹ**
7. 1976ರಲ್ಲಿ ಅಸ್ಪೃಶ್ಯತಾ ಕಾಯ್ದೆಯನ್ನು ಹೀಗೆ ತಿದ್ದುಪಡಿ ಮಾಡಲಾಗಿದೆ.– **ನಾಗರೀಕ ಹಕ್ಕು ಸಂರಕ್ಷಣಾ ಕಾಯ್ದೆ**

**ಪ್ರಶ್ನೆ 2] ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

**1. ಸಾಮಾಜಿಕ ಸ್ತರವಿನ್ಯಾಸ ಎಂದರೇನು?**
ಉತ್ತರ : ಸಾಮಾಜಿಕ ಸ್ತರವಿನ್ಯಾಸವೆಂದರೆ ಜನರನ್ನು ಆದಾಯ, ಶಿಕ್ಷಣ, ಜಾತಿ, ಬಣ್ಣ, ಲಿಂಗ, ಉದ್ಯೋಗ ಹಾಗೂ ಬುದ್ಧಿಶಕ್ತಿ ಮೊದಲಾದವುಗಳ ಆಧಾರದ ಮೇಲೆ ಮೇಲು – ಕೀಳು ಎಂದು ವಿಂಗಡಿಸುವುದಾಗಿದೆ.

**2. ಪೂರ್ವಾಗ್ರಹ ಎಂದರೇನು?**
ಉತ್ತರ : ಒಬ್ಬ ವ್ಯಕ್ತಿ ಅಥವಾ ಒಂದು ಸಮೂಹದವರ ಬಗ್ಗೆ ಹೊಂದಿರಬಹುದಾದ ಪೂರ್ವ ನಿರ್ಧಾರಿತ ಮನೋಭಾವನೆಯೇ ಪೂರ್ವಾಗ್ರಹ ಎನಿಸಿಕೊಳ್ಳುವುದು.

ಆಲ್ ಎಸ್ ಎಸ್ ಟಿ ಎಫ್ ಡಿಜಿಟಲ್ ಗ್ರೂಪ್ ನ ಕೊಡುಗೆ

**3. ಅಸ್ಪೃಶ್ಯತೆ ಎಂದರೇನು?**
ಉತ್ತರ : ಸಮಾಜದಲ್ಲಿ ಕೆಲವು ಜಾತಿಗಳನ್ನು ಅನೇಕ ಬಗೆಯ ಅನರ್ಹತೆಗಳಿಗೆ ಒಳಪಡಿಸುವುದನ್ನೇ ಅಸ್ಪೃಶ್ಯತೆ ಎನ್ನುತ್ತಾರೆ.

## ಅಧ್ಯಾಯ 2. ದುಡಿಮೆ ಮತ್ತು ಆರ್ಥಿಕ ಜೀವನ

**ಪ್ರಶ್ನೆ 1] ಬಿಟ್ಟ ಸ್ಥಳಗಳನ್ನು ಸೂಕ್ತಸ್ಥಳಗಳಿಂದ ತುಂಬಿರಿ.**

1. ಶ್ರಮ ವಿಭಜನೆಯು ________ ಕಾರಣವಾಗುವದು. – **ವಿಶೇಷ ಪರಿಣಿತಿ**
2. ವಿಶೇಷ ತರಬೇತಿ ಹೊಂದಿರದ ಕಾರ್ಮಿಕರನ್ನು ________ ಎಂದು ಕರೆಯುತ್ತೇವೆ. – **ಅಸಂಘಟಿತ ಕಾರ್ಮಿಕರು**
3. ಕೇಂದ್ರ ಸರಕಾರ ಸಮಾನ ವೇತನ ಕಾಯ್ದೆಯನ್ನು ________ ರಲ್ಲಿ ಜಾರಿಗೆ ತಂದಿತು. – **1976**
4. ಚಿತ್ರ ಕಲಾವಿದನೊಬ್ಬ ಆತ್ಮ ಸಂತೋಷಕ್ಕಾಗಿ ಚಿತ್ರ ಬಿಡಿಸುವ ಕಾರ್ಯದಲ್ಲಿ ತೊಡಗಿರುವನು ಇದು ಎಂತಹ ದುಡಿಮೆ. – **ಕೂಲಿ ರಹಿತ ದುಡಿಮೆ,**
5. ವಿಶೇಷ ತರಬೇತಿ ಹೊಂದಿದ ಕಾರ್ಮಿಕನೇ – **ಸಂಘಟಿತ ಕೆಲಸಗಾರ**
6. ಕೇಂದ್ರ ಸರಕಾರವು ಸಮಾನ ವೇತನ ಕಾಯಿದೆಯನ್ನು ಜಾರಿಗೆ ತಂದಿರುವ ಪ್ರಮುಖ ಉದ್ದೇಶ – **ಸ್ತ್ರೀ ಪುರುಷರ ವೇತನ ತಾರತಮ್ಯ ನಿವಾರಿಸುವುದು,**

**ಪ್ರಶ್ನೆ 2] ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

**1. ವಿಶೇಷ ಪರಿಣಿತಿ ಎಂದರೇನು?**
ಉತ್ತರ : ವಿಶೇಷ ಪರಿಣಿತಿ ಎಂದರೆ ಯಾವುದಾದರೂ ನಿರ್ದಿಷ್ಟ ಕ್ಷೇತ್ರವೊಂದರಲ್ಲಿ ಸಾಕಷ್ಟು ಆಳವಾದ ಪರಿಣಿತಿ, ತರಬೇತಿ ಅಥವಾ ಕೌಶಲ್ಯ ಪಡೆಯುವದು ಎಂದರ್ಥ.

**2. ಶ್ರಮ ವಿಭಜನೆಯು ವಿಶೇಷ ಪರಿಣಿತಿಗೆ ಕಾರಣವಾಗುತ್ತದೆ ಹೇಗೆ?**
ಉತ್ತರ : ಶ್ರಮ ವಿಭಜನೆಯಿಂದ ವ್ಯಕ್ತಿ ತನ್ನ ಕೆಲಸದಲ್ಲಿ ಉತ್ತಮ ಕೌಶಲ್ಯ ಪಡೆಯುವುದರ ಮೂಲಕ ವಿಶೇಷ ಪರಿಣಿತಿಯನ್ನು ಪಡೆಯುತ್ತಾನೆ.

**3. ದುಡಿಮೆಯ ತಾರತಮ್ಯ ಎಂದರೇನು?**
ಉತ್ತರ : ದುಡಿಮೆ ಮತ್ತು ವೇತನ ಹಂಚಿಕೆಯಲ್ಲಿನ ತಾರತಮ್ಯವನ್ನೇ ದುಡಿಮೆಯ ತಾರತಮ್ಯ ಎನ್ನುತ್ತಾರೆ.

**4. ನಿರುದ್ಯೋಗ ಎಂದರೇನು?**
ಉತ್ತರ : ನಿರುದ್ಯೋಗ ಎಂದರೆ ದುಡಿಯುವ ವಯಸ್ಸು, ಸಾಮರ್ಥ್ಯ, ಆಸಕ್ತಿ, ಅರ್ಹತೆ ಇದ್ದರೂ ಉದ್ಯೋಗ ಸಿಗದ ಪರಿಸ್ಥಿತಿ ಎಂದರ್ಥ.

**5. ಸಂಘಟಿತ ಕೆಲಸಗಾರ ಎಂದರೆ ಯಾರು?**
ಉತ್ತರ : ಕಾನೂನು, ಕಾಯ್ದೆಗಳಿಗೆ ಬದ್ಧವಾದಂತಹ ನಿಗದಿತ ಕಾರ್ಯಕ್ಷೇತ್ರದಲ್ಲಿ ಕೆಲಸ ಮಾಡುವವರನ್ನು ಸಂಘಟಿತ ಕೆಲಸಗಾರರು ಎಂದು ಕರೆಯುತ್ತಾರೆ.

**6. ಅಸಂಘಟಿತ ಕೆಲಸಗಾರ ಎಂದರೆ ಯಾರು?**
ಉತ್ತರ : ಯಾವುದೇ ನಿರ್ದಿಷ್ಟ ಕಾನೂನು ಅಥವಾ ಸಂಘಟನೆಯ ನಿಯಂತ್ರಣಕ್ಕೆ ಒಳಪಡದೆ ಜೀವನ ನಿರ್ವಹಣೆಗಾಗಿ ತಮ್ಮಪಾಡಿಗೆ ವಿವಿಧ ಕಸುಬುಗಳಲ್ಲಿ ತೊಡಗಿಕೊಂಡು ದಿನಗೂಲಿ ಅಥವಾ ಇನ್ನಿತರ ರೂಪದ ಆರ್ಥಿಕ ಪ್ರತಿಫಲ ಪಡೆಯುವ ಶ್ರಮಿಕರನ್ನು ಅಸಂಘಟಿತ ಕೆಲಸಗಾರರು ಎಂದು ಕರೆಯಬಹುದು.

**ಪ್ರಶ್ನೆ 3] ಈ ಕೆಳಗಿನ ಪ್ರಶ್ನೆಗಳಿಗೆ 2 – 3 ವಾಕ್ಯದಲ್ಲಿ ಉತ್ತರಿಸಿರಿ.**

**1. ಶ್ರಮ ವಿಭಜನೆ ಎಂದರೇನು? ಶ್ರಮ ವಿಭಜನೆಯ ಮಹತ್ವವನ್ನು ವಿವರಿಸಿ.**
ಉತ್ತರ : ಒಂದು ಕೆಲಸವನ್ನು ಜನರು ತಮ್ಮ ಆಸಕ್ತಿ, ಅಭಿರುಚಿ, ಸಾಮರ್ಥ್ಯ, ವಯಸ್ಸು, ವಿಶೇಷ ಪರಿಣಿತಿ, ಕೌಶಲ್ಯ ಹಾಗೂ ಲಿಂಗ ಭೇದಗಳ ಆಧಾರದ ಮೇಲೆ ಹಂಚಿಕೊಂಡು ಮಾಡುವುದನ್ನು ಶ್ರಮ ವಿಭಜನೆ ಎನ್ನುತ್ತಾರೆ.

**ಶ್ರಮ ವಿಭಜನೆಯ ಮಹತ್ವ**

1. ಶ್ರಮ ವಿಭಜನೆಯು ವಿಶೇಷ ಪರಿಣಿತಿಗೆ ಕಾರಣವಾಗುತ್ತದೆ.
2. ಶ್ರಮ ವಿಭಜನೆಯು ಜನರು ಆರ್ಥಿಕ ಲಾಭ ಪಡೆಯಲು ಸಹಕಾರಿಯಾಗಿದೆ.
3. ಶ್ರಮ ವಿಭಜನೆಯು ಆಧುನಿಕ ಕಾಲದಲ್ಲಿ ವರ್ಗವ್ಯವಸ್ಥೆಗೆ ಕಾರಣವಾಗಿದೆ.
4. ಶ್ರಮ ವಿಭಜನೆಯ ಫಲವಾಗಿ ಕೈಗಾರಿಕೆಗಳು ಮತ್ತು ವಾಣಿಜ್ಯೋದ್ಯಮಗಳು ವಿಸ್ತಾರಗೊಂಡಿವೆ.

**2. ದುಡಿಮೆ ಎಂದರೇನು? ದುಡಿಮೆಯ ಪ್ರಕಾರಗಳನ್ನು ಉದಾಹರಣೆಯೊಂದಿಗೆ ವಿವರಿಸಿ.**
ಉತ್ತರ : ವ್ಯಕ್ತಿಯೋರ್ವನ ಶಕ್ತಿಯ ವ್ಯಯದಿಂದ ಅಥವಾ ಪರಿಶ್ರಮದಿಂದ ಆತನಿಗೆ ಆರ್ಥಿಕ ಅಥವಾ ವಸ್ತು ರೂಪದ ಪ್ರತಿಫಲ ಸಿಗುವುದಿದ್ದರೆ ಅದನ್ನು ದುಡಿಮೆ ಎನ್ನಬಹುದು. ದುಡಿಮೆಯಲ್ಲಿ ಎರಡು ಪ್ರಕಾರಗಳು ಅವುಗಳೆಂದರೆ –

1. **ಕೂಲಿ ಸಹಿತ ದುಡಿಮೆ** :– ಕೂಲಿ, ಸಂಬಳ ಅಥವಾ ಇನ್ನಾವುದೇ ಭೌತಿಕ ರೂಪದ ಪ್ರತಿಫಲಕ್ಕಾಗಿ ಮಾಡುವ ದುಡಿಮೆಯೇ ಕೂಲಿ ಸಹಿತ ದುಡಿಮೆ ಎನ್ನುತ್ತಾರೆ.
2. **ಕೂಲಿ ರಹಿತ ದುಡಿಮೆ** :– ಮನಃಸಂತೋಷದ ದೃಷ್ಟಿಯಿಂದ ಮಾನವನು ತೊಡಗುವ ಕ್ರಿಯೆಗಳನ್ನೇ ಕೂಲಿ ರಹಿತ ದುಡಿಮೆ ಎನ್ನುತ್ತಾರೆ.

**3. ನಿರುದ್ಯೋಗದ ಪ್ರಕಾರಗಳಾವವು? ತಿಳಿಸಿ.**
ಉತ್ತರ : ನಿರುದ್ಯೋಗದಲ್ಲಿ ಹಲವಾರು ಪ್ರಕಾರಗಳನ್ನು ಕಾಣಬಹುದು. ಅವುಗಳೆಂದರೆ ಅರೆನಿರುದ್ಯೋಗ, ಮರೆಮಾಚಿದ ನಿರುದ್ಯೋಗ, ತಾಂತ್ರಿಕ ನಿರುದ್ಯೋಗ, ಚಕ್ರೀಯ ನಿರುದ್ಯೋಗ, ಸ್ವಇಚ್ಛೆಯ ನಿರುದ್ಯೋಗ.

**4. ನಿರುದ್ಯೋಗಕ್ಕೆ ಕಾರಣಗಳಾವವು?**
ಉತ್ತರ : ನಿರುದ್ಯೋಗಕ್ಕೆ ಹಲವಾರು ಕಾರಣಗಳಿವೆ. ಅವುಗಳಲ್ಲಿ ಅತಿಯಾದ ಜನಸಂಖ್ಯೆ, ಯಾಂತ್ರಿಕರಣ. ಅತಿಯಾದ ಶ್ರಮವಿಭಜನೆ, ಸಾಮಾಜಿಕ ಅಸಮಾನತೆ, ಬಂಡವಾಳದ ಕೊರತೆ, ಅನಕ್ಷರತೆ ಮುಂತಾದವು.

**5. ನಿರುದ್ಯೋಗದ ಪರಿಣಾಮಗಳಾವವು?**
ಉತ್ತರ : ನಿರುದ್ಯೋಗವು ಸಮಾಜದ ಮೇಲೆ ಕೆಟ್ಟ ಪರಿಣಾಮವನ್ನು ಬೀರುತ್ತದೆ. ನಿರುದ್ಯೋಗ ಸಮಸ್ಯೆಯು ಬಡತನ, ಅನಾರೋಗ್ಯ, ಭ್ರಷ್ಟಾಚಾರ, ಕೌಟಂಬಿಕ ವಿಘಟನೆ, ಮೋಸ, ವಂಚನೆ, ಕಳ್ಳತನ, ವ್ಯಭಿಚಾರ ಮುಂತಾದ ಪರಿಣಾಮಗಳಿಗೆ ಕಾರಣವಾಗುವದು.

**6. ಅಸಂಘಟಿತ ಕೆಲಸಗಾರರ ಸಮಸ್ಯೆಗಳಾವುವು?**
ಉತ್ತರ : **ಅಸಂಘಟಿತ ಕೆಲಸಗಾರರ ಸಮಸ್ಯೆಗಳು**

1. ಅಸಂಘಟಿತ ಕೆಲಸಗಾರರು ಮಾಡುವ ದುಡಿಮೆಗೆ ಯಾವುದೇ ನಿಗದಿತ ನಿಯಮ, ಕಾಯ್ದೆಗಳಿರುವುದಿಲ್ಲ.
2. ಇವರ ದುಡಿಮೆಗೆ ಕಡಿಮೆ ಕೂಲಿ ನೀಡಲಾಗುತ್ತದೆಯಲ್ಲದೆ ಇವರಿಗೆ ಯಾವುದೇ ಉಚಿತ ವೈದ್ಯಕೀಯ ಸೌಲಭ್ಯಗಳಿರುವುದಿಲ್ಲ.
3. ಇವರ ಕೆಲಸಕ್ಕೆ ಭದ್ರತೆ & ನಿಗದಿತ ವೇತನ, ವಿರಾಮ ವೇತನ, ನಿವೃತ್ತಿ ವೇತನ ಹಾಗೂ ಭತ್ಯೆಗಳ ಸೌಲಭ್ಯವಿರುವದಿಲ್ಲ.

**ಪ್ರಶ್ನೆ 4] ಈ ಕೆಳಗಿನ ಪ್ರಶ್ನೆಗಳಿಗೆ 5 – 6 ವಾಕ್ಯದಲ್ಲಿ ಉತ್ತರಿಸಿರಿ.**

**1. ದುಡಿಮೆಯಲ್ಲಿನ ತಾರತಮ್ಯತೆಯ ಸ್ವರೂಪಗಳನ್ನು ವಿವರಿಸಿ.**
ಉತ್ತರ : **ದುಡಿಮೆಯಲ್ಲಿನ ತಾರತಮ್ಯತೆಯ ಸ್ವರೂಪ –**

1. ದುಡಿಮೆ ಮತ್ತು ಕೂಲಿ ಹಂಚಿಕೆಯಲ್ಲಿ ಕಾಣಬರುವ ಈ ಅಸಮಾನತೆಯನ್ನು ದುಡಿಮೆಯ ತಾರತಮ್ಯ ಅಥವಾ ದುಡಿಮೆಯಲ್ಲಿನ ಬೇಧ – ಭಾವ ಎನ್ನಬಹುದು.
2. ಭಾರತವನ್ನೊಳಗೊಂಡಂತೆ ಜಗತ್ತಿನ ದೇಶಗಳಲ್ಲಿ ಪುರುಷರಿಗೆ ಉತ್ತಮ ಸ್ವರೂಪದ ಉದ್ಯೋಗಗಳನ್ನು ನೀಡಲಾಗುತ್ತಿದೆ. ಹಾಗೆಯೇ ಹೆಚ್ಚಿನ ಹೊಣೆಗಾರಿಕೆ & ಸಂಬಳ ನೀಡಲಾಗುತ್ತಿದೆ.

3. ಸ್ತ್ರೀಯರಿಗೆ ಕಡಿಮೆ ಮಟ್ಟದ ಉದ್ಯೋಗ, ಹೊಣೆಗಾರಿಕೆ & ಸಂಬಳವನ್ನು ನೀಡಲಾಗುತ್ತಿದೆ. ಪುರುಷರಿಗೆ ಸರಿಸಮಾನವಾಗಿ ಮಹಿಳೆಯರು ದುಡಿದರೂ ಸಂಬಳ ಮಾತ್ರ ಕಡಿಮೆ ನೀಡಲಾಗುತ್ತಿದೆ.

**2. ನಿರುದ್ಯೋಗ ಸಮಸ್ಯೆಗೆ ಪರಿಹಾರ ಕ್ರಮಗಳಾವವು? ವಿವರಿಸಿ. (ಎಪ್ರಿಲ್ 2016)**

ಉತ್ತರ : **ನಿರುದ್ಯೋಗ ಸಮಸ್ಯೆಗೆ ಪರಿಹಾರ ಕ್ರಮಗಳು.**

1. ಜನಸಂಖ್ಯಾ ನಿಯಂತ್ರಣ ಕ್ರಮಗಳು,
2. ಗುಡಿ ಕೈಗಾರಿಕೆಗಳಿಗೆ ಪ್ರೋತ್ಸಾಹ,
3. ಕೃಷಿ & ಕೈಗಾರಿಕಾ ಕ್ಷೇತ್ರದ ಅಭಿವೃದ್ಧಿ,
4. ಶೈಕ್ಷಣಿಕ ಸುಧಾರಣಾ ಯೋಜನೆಗಳು,
5. ವೃತ್ತಿಪರ ಶಿಕ್ಷಣಕ್ಕೆ ಪ್ರೋತ್ಸಾಹ,
6. ಗ್ರಾಮೀಣಾಭಿವೃದ್ಧಿ ಯೋಜನೆಗಳು, & ಉದ್ಯೋಗ ಖಾತರಿ ಯೋಜನೆಗಳು ಇತ್ಯಾದಿ.

**3. ಸಂಘಟಿತ ಮತ್ತು ಅಸಂಘಟಿತ ಕೆಲಸಗಾರರ ನಡುವಿನ ವ್ಯತ್ಯಾಸಗಳಾವವು? (ಎಪ್ರಿಲ್ 2015) (ಜೂನ್ 2015)**

**ಅಥವಾ ಸಂಘಟಿತ ಮತ್ತು ಅಸಂಘಟಿತ ಕೆಲಸಗಾರರ ಲಕ್ಷಣಗಳನ್ನು ತಿಳಿಸಿ**

ಉತ್ತರ :

| ಸಂಘಟಿತ ಕೆಲಸಗಾರರು | ಅಸಂಘಟಿತ ಕೆಲಸಗಾರರು |
|---|---|
| • ಕಾನೂನು, ಕಾಯ್ದೆಗಳಿಗೆ ಬದ್ಧವಾದಂತಹ ನಿಗದಿತ ಕಾರ್ಯಕ್ಷೇತ್ರದಲ್ಲಿ ಕೆಲಸ ಮಾಡುವವರನ್ನು **ಸಂಘಟಿತ ಕೆಲಸಗಾರರು** ಎಂದು ಕರೆಯುತ್ತಾರೆ. | • ಯಾವುದೇ ನಿರ್ದಿಷ್ಟ ಕಾಯ್ದೆ ಕಾನೂನು ನಿಯಂತ್ರಣಕ್ಕೆ ಒಳಪಡದೆ ಜೀವನ ನಿರ್ವಹಣೆಗಾಗಿ ಕೆಲಸ ಮಾಡುವ ದಿನಗೂಲಿ ಕೆಲಸಗಾರರನ್ನು **ಅಸಂಘಟಿತ ಕೆಲಸಗಾರರು** ಎಂದು ಕರೆಯಲಾಗುತ್ತದೆ. |
| • ಸಂಘಟಿತ ವಲಯದಲ್ಲಿ ಪ್ರತಿಯೊಬ್ಬ ಕೆಲಸಗಾರನ ಕಾರ್ಯದ ಬಗ್ಗೆ ನಿಶ್ಚಿತ ನಿಯಮಗಳಿರುತ್ತವೆ. | • ಅಸಂಘಟಿತ ವಲಯದಲ್ಲಿ ಕೆಲಸಗಾರರ ಕಾರ್ಯದ ಬಗ್ಗೆ ನಿಶ್ಚಿತ ನಿಯಮಗಳಿರುವದಿಲ್ಲ. |
| • ಸಂಘಟಿತ ಕೆಲಸಗಾರರಿಗೆ ವಿಶೇಷ ಪರಿಣಿತಿ, ತರಬೇತಿ, ಅನುಭವ & ಶೈಕ್ಷಣಿಕ ಅರ್ಹತೆಗಳಿಗೆ ಅವಕಾಶಗಳಿರುತ್ತವೆ. | • ಅಸಂಘಟಿತ ಕೆಲಸಗಾರರಿಗೆ ವಿಶೇಷ ಪರಿಣಿತಿ, ತರಬೇತಿ, ಅನುಭವ ಇರುವುದಿಲ್ಲ. |
| • ಇವರಿಗೆ ನಿಗದಿತ ವೇತನ, ಭತ್ಯೆ, ವಿರಾಮ ವೇತನ, ನಿವೃತ್ತಿ ವೇತನ ಸೌಲಭ್ಯಗಳನ್ನು ನೀಡಲಾಗುತ್ತದೆ. | • ಇವರ ಕೆಲಸಕ್ಕೆ ಭದ್ರತೆ & ನಿಗದಿತ ವೇತನ, ವಿರಾಮ ವೇತನ, ನಿವೃತ್ತಿ ವೇತನ ಹಾಗೂ ಭತ್ಯೆಗಳ ಸೌಲಭ್ಯವಿರುವದಿಲ್ಲ. |
| • ಇವರಿಗೆ ಕೆಲಸದ ಖಾತರಿ ಇರುತ್ತದೆ. | • ಕೆಲಸದ ಖಾತರಿಯೂ ಸಹ ಇರುವದಿಲ್ಲ. |
| • ಇವರು ದಿನವೊಂದರಲ್ಲಿ ನಿಗದಿತ ಸಮಯದಲ್ಲಿ ಮಾತ್ರ ಕಾರ್ಯ ನಿರ್ವಹಿಸುವವರಾಗಿತ್ತಾರೆ. | • ಇವರಿಗೆ ಯಾವುದೇ ರೀತಿಯ ಸಮಯ ನಿಗದಿಯಾಗಿರುವದಿಲ್ಲ. |

ಐದು ಎಸ್ ಎಸ್ ಟಿ ಎಫ್ ಡಿಜಿಟಲ್ ಗ್ರೂಪ್ ನ ಕೊಡುಗೆ

## ಸಮಾಜಶಾಸ್ತ್ರ ಅಧ್ಯಾಯ 3 ಸಾಮೂಹಿಕ ವರ್ತನೆ ಮತ್ತು ಪ್ರತಿಭಟನೆಗಳು

**ಪ್ರಶ್ನೆ 1] ಬಿಟ್ಟ ಸ್ಥಳಗಳನ್ನು ಸೂಕ್ತಸ್ಥಳಗಳಿಂದ ತುಂಬಿರಿ.**

1. ಚಿಪ್ಕೋ ಚಳುವಳಿ ಮೊದಲು ಪ್ರಾರಂಭವಾದ ರಾಜ್ಯ. – **ಉತ್ತರ ಪ್ರದೇಶ**
2. ಚಿಪ್ಕೋ ಚಳುವಳಿಯ ನೇತಾರ – **ಸುಂದರಲಾಲ ಬಹುಗುಣ,**
3. ಚಿಪ್ಕೋ ಚಳುವಳಿಯು 1973 ರಲ್ಲಿ ______ ಹಾಗೂ ______ ರವರ ನೇತೃತ್ವದಲ್ಲಿ ನಡೆಯಿತು. – **ಶ್ರೀ ಸುಂದರಲಾಲ ಬಹುಗುಣ ಹಾಗೂ ಶ್ರೀ ಚಂಡಿ ಪ್ರಸಾದ ಭಟ್ಟ,**
4. ಚಿಪ್ಕೋ ಚಳುವಳಿಯು ಮೊದಲು ಪ್ರಾರಂಭವಾದದ್ದು ಉತ್ತರ ಪ್ರದೇಶದ ______ ಜಿಲ್ಲೆಯಲ್ಲಿ. – **ತೆಹ್ರಿ–ಘರ್ವಾಲ್**
5. ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ ಸಲ್ಯಾನಿ ಗ್ರಾಮದ ರೈತರು ___ ರಲ್ಲಿ ಅಪ್ಪಿಕೋ ಚಳುವಳಿಯನ್ನು ನಡೆಸಿದರು.–**ಕ್ರಿಶ 1983**
6. ಕರ್ನಾಟಕದಲ್ಲಿ ಮೊದಲು ಅಪ್ಪಿಕೋ ಚಳುವಳಿ ಆರಂಭವಾದ ಸ್ಥಳ – **ಉತ್ತರಕನ್ನಡ ಜಿಲ್ಲೆಯ ಸಲ್ಯಾನಿ ಗ್ರಾಮ**
7. 'ನರ್ಮದಾ ಅಂದೋಲನ'ದ ನೇತೃತ್ವ ವಹಿಸಿದವರು ಪರಿಸರ ಪ್ರೇಮಿಗಳು – **ಮೇದಾ ಪಟ್ಕರ್ & ಬಾಬಾ ಆಮ್ಟೆ,**
8. ಸರದಾರ ಸರೋವರ ಆಣೆಕಟ್ಟನ್ನು ______ ನದಿಗೆ ನಿರ್ಮಿಸಲಾಗಿದೆ. – **ನರ್ಮದಾ ನದಿ**
9. ಕೈಗಾ ಅಣು ವಿದ್ಯುತ್ ಸ್ಥಾವರಕ್ಕೆ ವಿರೋಧ ವ್ಯಕ್ತಪಡಿಸಿದ ಪರಿಸರ ಪ್ರೇಮಿ – **ಡಾ : ಶಿವರಾಮ ಕಾರಂತರು**
10. ಸ್ತ್ರೀಯರನ್ನು ಸಮಾಜದಲ್ಲಿ ಸಬಲರನ್ನಾಗಿ ಬಲಪಡಿಸುವಲ್ಲಿ _____ ಪ್ರಮುಖ ಪಾತ್ರ ವಹಿಸುತ್ತವೆ. – **ಸ್ತ್ರೀಶಕ್ತಿ ಸಂಘಗಳು**

1. ರಸ್ತೆ ಅಪಘಾತ ವೀಕ್ಷಿಸಲು ಸೇರಿರುವ ಜನ ಸಮೂಹವೇ – **ಜನಮಂದೆ**
2. ತೀರಾ ಹಿಂಸಾತ್ಮಕ ಮತ್ತು ವಿನಾಶಾತ್ಮಕ ಸ್ವರೂಪದ ಜನಮಂದೆಯ ವರ್ತನೆಯೇ – **ದೊಂಬಿ**
3. ಸಮೂಹ ವರ್ತನೆಯು ಯೋಜನಾಬದ್ಧವಾಗಿ ಒಂದು ಗುರಿಯನ್ನು ಹೊಂದಿದ್ದು ಸಾಮಾಜಿಕ ಬದಲಾವಣೆಗೆ ಪ್ರಯತ್ನಿಸಿದರೆ ಅದೇ – **ಚಳುವಳಿ**

**ಪ್ರಶ್ನೆ 2] ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

**1. ಸಮೂಹ ವರ್ತನೆ ಎಂದರೇನು?**

ಉತ್ತರ :ಸಂಘಜೀವಿಯಾದ ಮಾನವನು ಸಮೂಹದ ಮಧ್ಯದಲ್ಲಿರುವಾಗ ತಾನು ಒಬ್ಬಂಟಿಗನಾಗಿದ್ದಾಗ ವರ್ತಿಸುವ ರೀತಿಗಿಂತಲೂ ಭಿನ್ನ ರೀತಿಯಲ್ಲಿ ವರ್ತಿಸುತ್ತಾನೆ. ಸಮೂಹದಲ್ಲಿ ಇರುವಾಗ ಮಾಡುವ ಆತನ ವರ್ತನೆಯನ್ನು ಸಮೂಹ ವರ್ತನೆ ಎಂದು ಕರೆಯಲಾಗುತ್ತದೆ.

**2. ಸಮೂಹ ವರ್ತನೆಯ ಮಾದರಿಗಳಾವವು?**

ಉತ್ತರ : ಸಮೂಹ ವರ್ತನೆಯಲ್ಲಿ ಜನಮಂದೆ, ದೊಂಬಿ, ಪೊಳ್ಳುಸುದ್ದಿಗಳ ಪ್ರಚಾರ, ಸಾರ್ವಜನಿಕ ಅಭಿಪ್ರಾಯ, ಕ್ರಾಂತಿ ಹಾಗೂ ಸಾಮಾಜಿಕ ಅಂದೋಲಗಳನ್ನು ಗುರುತಿಸಬಹುದಾಗಿದೆ.

**3. ಜನಮಂದೆ ಎಂದರೇನು? ಉದಾಹರಣೆ ಕೊಡಿ.**

ಉತ್ತರ : ಯಾವುದೇ ಪೂರ್ವ ಯೋಜನೆ ಇಲ್ಲದೆ ಅನಿಶ್ಚಿತವಾಗಿ ಒಂದು ಆಸಕ್ತಿಯ ಸುತ್ತ ನೆರೆದಿರುವ ಜನರಾಶಿಯೇ ಜನಮಂದೆಯಾಗಿದೆ. ಉದಾ : ರಸ್ತೆ ಅಪಘಾತ ವೀಕ್ಷಿಸಲು ಸೇರಿರುವ ಜನಸಮೂಹ.

**4. ಜನಮಂದೆಯ ಸ್ವರೂಪವನ್ನು ತಿಳಿಸಿ.**

ಉತ್ತರ : ಜನಮಂದೆಯು ತಾತ್ಕಾಲಿಕ ಸ್ವರೂಪದ್ದಾಗಿರುತ್ತದೆ. ಇದರಲ್ಲಿ ಜನರು ಯಾವುದೋ ಒಂದು ನಿರ್ದಿಷ್ಟ ಸ್ಥಳದಲ್ಲಿ ಭೌತಿಕವಾಗಿ ಒಟ್ಟಾಗಿ ಸೇರಿರುತ್ತಾರೆ. ಜನಮಂದೆಯ ಸದಸ್ಯರು ಪರಸ್ಪರ ಅಭಿಪ್ರಾಯ, ಭಾವನೆಗಳು ಮತ್ತು ಕ್ರಿಯೆಗಳ ಪ್ರಭಾವಕ್ಕೆ ಬಹುಬೇಗ ಒಳಗಾಗುತ್ತಾರೆ.

**5. ದೊಂಬಿಯನ್ನು ಹೇಗೆ ನಿಯಂತ್ರಿಸಬಹುದು?**

ಉತ್ತರ : ಅಧಿಕಾರಿಗಳ ಸಮಯ ಪ್ರಜ್ಞೆ, ಪೋಲೀಸ್, ರಕ್ಷಣಾ ಪಡೆ ಮತ್ತು ಕಾನೂನು ಮುಂತಾದ ಸಾಧನಗಳ ಮೂಲಕ ದೊಂಬಿಗಳನ್ನು ನಿಯಂತ್ರಿಸಬಹುದು.

**6. ಚಳುವಳಿಯ ಅರ್ಥ ತಿಳಿಸಿ.**

ಉತ್ತರ : ಸಮೂಹ ವರ್ತನೆಯ ಯೋಜನಾಬದ್ಧವಾಗಿ ಒಂದು ಗುರಿಯನ್ನು ಹೊಂದಿದ್ದು ಸಾಮಾಜಿಕ ಬದಲಾವಣೆಗೆ ಪ್ರಯತ್ನಿಸಿದರೆ ಅದನ್ನು ಚಳುವಳಿ ಎಂದು ಕರೆಯುತ್ತೇವೆ.

**7. ಪರಿಸರ ಮಾಲಿನ್ಯದ ಅರ್ಥ ತಿಳಿಸಿ.**

ಉತ್ತರ : ಭೂಮಿ, ಗಾಳಿ, ನೀರು ಮತ್ತು ಜೀವಮಂಡಲವನ್ನೊಳಗೊಂಡ ನಮ್ಮ ಸುತ್ತ ಮುತ್ತಲಿನ ಪರಿಸರವು ವಿಷಕಾರಕ ಹಾಗೂ ರಾಸಾಯನಿಕ ಅಂಶಗಳಿಂದ ಕಲುಷಿತವಾಗುವದನ್ನು 'ಪರಿಸರ ಮಾಲಿನ್ಯ' ಎನ್ನಬಹುದು.

**8. ಅಪ್ಪಿಕೋ ಚಳುವಳಿಯ ಉದ್ದೇಶ ಏನಾಗಿತ್ತು? (ಜೂನ್ 2015)**

ಉತ್ತರ : ಮರಗಳ ಕಳ್ಳಸಾಗಾಣಿಗೆ ತಡೆಗಟ್ಟುವದು, ಗಿಡಮರಗಳನ್ನು ಬೆಳೆಸುವದು ಹಾಗೂ ಪರಿಸರ ಮಹತ್ವದ ಬಗ್ಗೆ ಸಾಮಾನ್ಯ ಜನರಿಗೆ ಅರಿವು ಮೂಡಿಸುವುದು ಅಪ್ಪಿಕೋ ಚಳುವಳಿ ಉದ್ದೇಶವಾಗಿತ್ತು.

**8. ಮೌನ ಕಣಿವೆ ಆಂದೋಲನ ಎಂದರೇನು?**

ಉತ್ತರ : ಕೇರಳದ ಪಾಲ್‌ಘಾಟ್ ತಾಲೂಕಿನ ಮೌನ ಕಣಿವೆಯಲ್ಲಿ ಸ್ಥಾಪಿಸಲು ಉದ್ದೇಶಿಸಲಾದ ಆಣೆಕಟ್ಟಿನ ನಿರ್ಮಾಣದಿಂದ ಪರಿಸರ ನಾಶದ ಜೊತೆಗೆ ಅನೇಕ ಜೀವ ಪ್ರಭೇದಗಳು ಜೀವಿಸಲು ತೊಂದರೆಯಾಗುತ್ತದೆ ಎಂಬ ಉದ್ದೇಶದಿಂದ ಅದನ್ನು ತಡೆಗಟ್ಟಲು ನಡೆದ ಚಳುವಳಿಯಾಗಿದೆ.

**9. ಸ್ವ–ಸಹಾಯ ಸಮೂಹ (ಗುಂಪುಗಳು) ಎಂದರೇನು? (ಎಪ್ರಿಲ್ 2016)**

ಉತ್ತರ : ಮಹಿಳೆಯರ ಸ್ವ–ಸಹಾಯ ಸಮೂಹ ಎಂಬುದು ಸ್ವಪ್ರಜ್ಞೆ, ಸ್ವಪ್ರೇರಣೆ ಹಾಗೂ ಪರಸ್ಪರ ನಂಬಿಕೆಯೊಂದಿಗೆ ತಮ್ಮ ಆರ್ಥಿಕ, ಸಾಮಾಜಿಕ ಅಗತ್ಯತೆಗಳನ್ನು ತಾವೇ ತಮ್ಮ ಸ್ವಂತ ಪ್ರಯತ್ನ ಮತ್ತು ಸಹಕಾರದಿಂದ ಪೂರೈಸಿಕೊಳ್ಳುವ ಉದ್ದೇಶದಿಂದ ರೂಪಿತವಾದ 10 ರಿಂದ 20 ಜನ ಸ್ತ್ರೀಯರನ್ನೊಳಗೊಂಡ ಒಂದು ಸ್ಥಳೀಯ ಸಮೂಹವಾಗಿರುತ್ತದೆ.

**ಪ್ರಶ್ನೆ 3] ಈ ಕೆಳಗಿನ ಪ್ರಶ್ನೆಗಳಿಗೆ 2 – 3 ವಾಕ್ಯದಲ್ಲಿ ಉತ್ತರಿಸಿರಿ.**

**1. ದೊಂಬಿ ಎಂದರೇನು? ದೊಂಬಿಯ ಸ್ವರೂಪವನ್ನು ತಿಳಿಸಿ.**

ಉತ್ತರ : ತೀರಾ ಹಿಂಸಾತ್ಮಕ ಹಾಗೂ ವಿನಾಶಾತ್ಮಕ ಸ್ವರೂಪದ ಜನಮಂದೆಯ ವರ್ತನೆಯನ್ನು ದೊಂಬಿ ಎನ್ನುತ್ತಾರೆ.

**ದೊಂಬಿಯ ಸ್ವರೂಪ**

1. ದೊಂಬಿಯಲ್ಲಿ ಭಾಗವಹಿಸಿರುವವರು ಎದುರಿಗೆ ಸಿಕ್ಕದ್ದೆಲ್ಲವನ್ನು ಹಾಳುಮಾಡುತ್ತಾ ಸಾಗುವರು.
2. ಗೊಂದಲವನ್ನು ಸೃಷ್ಟಿ ಮಾಡುವುದೇ ದೊಂಬಿಯ ಉದ್ದೇಶವಾಗಿರುತ್ತದೆ.

3. ದೊಂಬಿಗಳು ಅಪಾರ ಹಾನಿಯನ್ನು ಉಂಟು ಮಾಡುತ್ತವೆ.

**2. ಪರಿಸರ ಸಂರಕ್ಷಣೆಗಾಗಿ ನಡೆಸಿರುವ ಚಳುವಳಿಗಳನ್ನು ಪಟ್ಟಿ ಮಾಡಿ.**

ಉತ್ತರ : **ಪರಿಸರ ಸಂರಕ್ಷಣೆಗಾಗಿ ನಡೆಸಿರುವ ಕೆಲವು ಸಾಮೂಹಿಕ ಪ್ರತಿಭಟನೆಗಳು**

1. ಚಿಪ್ಕೋ ಚಳುವಳಿ, 2. ಅಪ್ಪಿಕೋ ಚಳುವಳಿ, 3. ನರ್ಮದಾ ಅಂದೋಲನ
4. ಮೌನ ಕಣಿವೆ ಅಂದೋಲನ, 5. ಕೈಗಾ ವಿರೋಧಿ ಚಳುವಳಿ.

**3. ನರ್ಮದಾ ಆಂದೋಲನಕ್ಕೆ ಕಾರಣಗಳೇನು?**

ಉತ್ತರ : ಗುಜರಾತ ರಾಜ್ಯದ ಸರ್ದಾರ್ ಸರೋವರ ಯೋಜನೆಯಡಿಯಲ್ಲಿ ನರ್ಮದಾ ನದಿಗೆ ಕಟ್ಟಲಾದ ಆಣೆಕಟ್ಟು ನಿರ್ಮಾಣದಿಂದ ಅರಣ್ಯ ನಾಶ, ಜೀವ ಸಂಕುಲಗಳಿಗೆ ತೊಂದರೆಯಾಗುತ್ತದೆ. ಎಂಬ ಉದ್ದೇಶದಿಂದ ಪರಿಸರ ಪ್ರೇಮಿ ಮೇಧಾ ಪಾಟ್ಕರ್ ಮತ್ತು ಬಾಬಾ ಆಮ್ಟೆಯವರ ನೇತೃತ್ವದಲ್ಲಿ ನರ್ಮದಾ ಬಚಾವೋ ಆಂದೋಲನ ನಡೆಯಿತು.

**4. ಕೈಗಾ ಅಣು ವಿದ್ಯುತ್ ಸ್ಥಾವರ ಸ್ಥಾಪನೆಗೆ ವಿರೋಧ ವ್ಯಕ್ತವಾಗಲು ಕಾರಣಗಳೇನು?**

ಉತ್ತರ : ಕೈಗಾ ಅಣುಶಕ್ತಿ ಸ್ಥಾವರ ಸ್ಥಾಪನೆಯಿಂದ ಅರಣ್ಯ ನಾಶ, ಅಣುವಿಕಿರಣದಿಂದ ಪರಿಸರ ಮಾಲಿನ್ಯ ಮುಂತಾದ ದುಷ್ಪರಿಣಾಮಗಳಿಂದ ಜೀವ ಪ್ರಭೇದಗಳ ಮೇಲೆ ಹಾನಿಕಾರಕ ಪರಿಣಾಮಗಳುಂಟಾಗುತ್ತವೆ ಎಂಬ ಉದ್ದೇಶಗಳಿಂದ ಕೈಗಾ ಆಣುಶಕ್ತಿ ಸ್ಥಾವರ ಸ್ಥಾಪನೆಗೆ ವಿರೋಧ ವ್ಯಕ್ತವಾಯಿತು.

**ಪ್ರಶ್ನೆ 4] ಈ ಕೆಳಗಿನ ಪ್ರಶ್ನೆಗಳಿಗೆ 5 – 6 ವಾಕ್ಯದಲ್ಲಿ ಉತ್ತರಿಸಿರಿ.**

**1. ಚಿಪ್ಕೋ ಚಳುವಳಿಯು ಪರಿಸರ ಸಂರಕ್ಷಣೆಯಲ್ಲಿ ಹೇಗೆ ಪ್ರಮುಖ ಪಾತ್ರ ವಹಿಸಿತು?**

ಉತ್ತರ : 1. ಚಿಪ್ಕೋ ಚಳುವಳಿಯು 1973ರಲ್ಲಿ ಶ್ರೀ ಸುಂದರಲಾಲ ಬಹುಗುಣ ಹಾಗೂ ಶ್ರೀ ಚಂಡಿ ಪ್ರಸಾದ ಭಟ್ಟರ ನೇತೃತ್ವದಲ್ಲಿ ನಡೆಯಿತು.
2. ಉತ್ತರ ಪ್ರದೇಶದ ತೆಹ್ರಿ–ಘರ್ವಾಲ್ ಜಿಲ್ಲೆಯಲ್ಲಿ ಸರ್ಕಾರವು ಮರಗಳನ್ನು ಕಡಿಯಲು ಅನುಮತಿ ನೀಡಿತ್ತು.
3. ಅರಣ್ಯ ನಾಶವಾದರೆ ಪರಿಸರ ನಾಶವಾಗುತ್ತದೆ ಎಂದು ತಿಳಿದ ಜನರು ಮರಗಳನ್ನು ಅಪ್ಪಿ ಹಿಡಿದು ಕಡಿಯದಂತೆ ತಡೆದರು.
4. ಪರಿಣಾಮವಾಗಿ ಮರಗಳನ್ನು ಕಡಿಯಲು ಸರ್ಕಾರ ನೀಡಿದ ಅನುಮತಿ ರದ್ದಾಯಿತು.

**2. ಅಪ್ಪಿಕೋ ಚಳುವಳಿಯ ಉದ್ದೇಶವೇನು? (ಜೂನ್ 2015)**

ಉತ್ತರ : **ಅಪ್ಪಿಕೋ ಚಳುವಳಿಯ ಉದ್ದೇಶ**

1. ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ ಸಲ್ಕಾನಿ ಗ್ರಾಮದ ರೈತರು 1983 ರಲ್ಲಿ ಅಪ್ಪಿಕೋ ಚಳುವಳಿಯನ್ನು ನಡೆಸಿದರು.
2. ಅಲ್ಲಿನ ಕಲಸೆ ಅರಣ್ಯದಲ್ಲಿ ಗುತ್ತಿಗೆದಾರರು ಮರ ಕಡಿಯಲು ಬಂದಾಗ ಅದನ್ನು ತಡೆಯಲು ರೈತರು ಮರಗಳನ್ನು ಅಪ್ಪಿಕೊಳ್ಳುವುದರ ಮೂಲಕ ಪ್ರತಿಭಟಿಸಿದರು.
3. ಮರಗಳ ಕಳ್ಳಸಾಗಾಣಿಕೆ ತಪ್ಪಿಸುವುದು, ಗಿಡಮರಗಳನ್ನು ಬೆಳೆಸುವುದು ಹಾಗೂ ಪರಿಸರ ಮಹತ್ವದ ಬಗ್ಗೆ ಸಾಮಾನ್ಯ ಜನರಿಗೆ ಅರಿವು ಮೂಡಿಸುವುದು ರೈತರ ಉದ್ದೇಶವಾಗಿತ್ತು.

**3. ಪರಿಸರ ಮಾಲಿನ್ಯವು ಗಂಭಿರ ಸಮಸ್ಯೆಯಾಗಿದೆ ಏಕೆ?**

ಉತ್ತರ : **ಪರಿಸರ ಮಾಲಿನ್ಯವು ಗಂಭಿರ ಸಮಸ್ಯೆಯಾಗಿದೆ. ಹೇಗೆಂದರೆ –**

1. ಜನರು ತಮ್ಮ ಸುಖಭೋಗದ ಜೀವನಕ್ಕಾಗಿ ಪರಿಸರವನ್ನು ದುರ್ಬಳಕೆ ಮಾಡುತ್ತಿದ್ದಾರೆ.
2. ಜಗತ್ತಿನ ಹಲವಾರು ದೇಶಗಳು ಹೆಚ್ಚುತ್ತಿರುವ ಜನಸಂಖ್ಯೆಯಿಂದುಂಟಾಗುವ ಸಮಸ್ಯೆಗಳನ್ನು ಎದುರಿಸಲು ಪರಿಸರದ ಮೇಲೆ ಒತ್ತಡ ತರುತ್ತೀವೆ.
3. ಅನಿಯಂತ್ರಿತವಾಗಿ ಸಾಗುತ್ತಿರುವ ನಗರಗಳ ಬೆಳವಣಿಗೆ, ಕೈಗಾರಿಕಾ ಅಭಿವೃದ್ಧಿ, ತಾಂತ್ರಿಕ ಪ್ರಗತಿ, ಸಾರಿಗೆ ವ್ಯವಸ್ಥೆಯ ಬೆಳವಣಿಗೆ ಮುಂತಾದವುಗಳಿಂದ ಅರಣ್ಯಗಳ ನಾಶ ಮತ್ತು ಪರಿಸರ ಮಾಲಿನ್ಯ ಉಂಟಾಗುತ್ತದೆ.
4. ಇದರಿಂದಾಗಿ ಪರಿಸರ ಮಾಲಿನ್ಯವು ಒಂದು ಗಂಭೀರ ಸಮಸ್ಯೆಯಾಗಿ ಪರಿಣಮಿಸಿದೆ.

**4. ಪರಿಸರ ಮಾಲಿನ್ಯದಿಂದುಂಟಾಗುವ ದುಷ್ಪರಿಣಾಮಗಳೇನು? ಅಥವಾ ಪರಿಸರ ಮಾಲಿನ್ಯದ ಸ್ವರೂಪವನ್ನು ವಿವರಿಸಿ.**

ಉತ್ತರ : **ಪರಿಸರ ಮಾಲಿನ್ಯದಿಂದುಂಟಾಗುವ ದುಷ್ಪರಿಣಾಮಗಳು**

1. ಅಣುವಿಕಿರಣದಿಂದ ಪರಿಸರ ಮಾಲಿನ್ಯವಾಗುತ್ತದೆ.
2. ಜೀವ ಪ್ರಭೇದಗಳ ಮೇಲೆ ಹಾನಿಕಾರಕ ಪರಿಣಾಮ ಬೀರುತ್ತದೆ.
3. ವಿಷಕಾರಕ ಹಾಗೂ ರಾಸಾಯನಿಕ ಅಂಶಗಳಿಂದ ಪರಿಸರ ಕಲುಷಿತಗೊಳ್ಳುತ್ತದೆ.
4. ಜನಸಂಖ್ಯಾ ಹೆಚ್ಚಳದಿಂದ ಪರಿಸರದ ಮೇಲೆ ಒತ್ತಡ ಹಾಗೂ ಆಕ್ರಮಣ ಹೆಚ್ಚುತ್ತಿದೆ.
5. ಅಭಿವೃದ್ಧಿಯ ನೆಪದಲ್ಲಿ ಸಂಪನ್ಮೂಲಗಳ ಅತಿಯಾದ ಬಳಕೆಯಿಂದ ಪರಿಸರದ ದುರ್ಬಳಕೆಯಾಗುತ್ತಿದೆ.
6. ಕೈಗಾರಿಕೆಗಳ ಉದಯದಿಂದಾಗಿ ಪರಿಸರವು ಹೆಚ್ಚು ಮಾಲಿನ್ಯವಾಗುತ್ತಿದೆ.
7. ನಗರಗಳ ಬೆಳವಣಿಗೆಯಿಂದಾಗಿ ವಾಹನಗಳ ದಟ್ಟಣೆಯಿಂದ ಪರಿಸರದ ಮಾಲಿನ್ಯ ಹೆಚ್ಚಾಗುತ್ತಿದೆ.
8. ಮಾನವನ ಅವಶ್ಯಕತೆಗಳನ್ನು ಪೂರೈಸುವ ಉದ್ದೇಶದಿಂದ ನಿರಂತರವಾಗಿ ಅರಣ್ಯ ನಾಶ ಮಾಡಲಾಗುತ್ತಿದ್ದು ಇದರ ಪರಿಣಾಮವಾಗಿ ಪರಿಸರದ ಮಾಲಿನ್ಯದ ಸಮಸ್ಯೆಯು ಗಂಭೀರ ಸ್ವರೂಪವನ್ನು ಪಡೆದುಕೊಂಡಿದೆ.

**5. ಪರಿಸರ ಮಾಲಿನ್ಯದ ದುಷ್ಪರಿಣಾಮಗಳ ಬಗ್ಗೆ ಸಾರ್ವಜನಿಕರಲ್ಲಿ ಹೇಗೆ ಜಾಗೃತಿಯನ್ನು ಮೂಡಿಸಬಹುದು? (ಎಪ್ರಿಲ್ 2015)**

ಉತ್ತರ : ಉತ್ತರ : 1. ವಿಷಕಾರಕ & ರಾಸಾಯನಿಕ ಅಂಶಗಳಿಂದ ಜನರ ಆರೋಗ್ಯದ ಮೇಲೆ ಉಂಟಾಗುವ ದುಷ್ಪರಿಣಾಮಗಳನ್ನು ಮನವರಿಕೆ ಮಾಡುವುದು.
2. ಉಷ್ಣಾಂಶದ ಹೆಚ್ಚಳದಿಂದ ಆಗುವ ಅನಾಹುತಗಳ ಬಗ್ಗೆ ಜನರಿಗೆ ತಿಳುವಳಿಕೆ ಮೂಡಿಸುವುದು.
3. ಅರಣ್ಯ ನಾಶದಿಂದ ಉಂಟಾಗುವ ಪರಿಣಾಮಗಳನ್ನು ತಿಳಿಸುವುದು.
4. ಸಮೂಹ ಮಾಧ್ಯಮಗಳು ಮತ್ತು ಜಾಹೀರಾತುಗಳ ಮೂಲಕ ಜನತೆಯ ಮನಮುಟ್ಟುವಂತೆಪ್ರಚಾರ ಮಾಡುವುದು.
5. ನೃತ್ಯ, ರೂಪಕ, ಬೀದಿ ನಾಟಕ ಮುಂತಾದವುಗಳ ಮೂಲಕ ಜನರಲ್ಲಿ ಜಾಗೃತಿ ಮೂಡಿಸುವುದು.
6. ಸ್ವಚ್ಛ ಭಾರತ ಅಭಿಯಾನದಂತಹ ಅಂದೋಲನಗಳನ್ನು ರೂಪಿಸುವುದು. ಇತ್ಯಾದಿ
7. ಈ ಕ್ರಮಗಳ ಮೂಲಕ ಸಾರ್ವಜನಿಕರಲ್ಲಿ ಪರಿಸರ ಕಾಳಜಿ ಉಂಟು ಮಾಡಿ ಪರಿಸರ ಸಮತೋಲನ ಕಾಪಾಡಬೇಕು.

**6. ಮಹಿಳಾ ಸ್ವ – ಸಹಾಯ ಸಮೂಹಗಳ ಪ್ರಾಮುಖ್ಯತೆಯನ್ನು ವಿವರಿಸಿ.**

ಉತ್ತರ : **ಮಹಿಳಾ ಸ್ವ – ಸಹಾಯ ಸಮೂಹಗಳ ಪ್ರಾಮುಖ್ಯತೆ**

1. ಮಹಿಳಾ ಸ್ವ – ಸಹಾಯ ಗುಂಪುಗಳು ಮಹಿಳೆಯರನ್ನು ಸ್ವಾವಲಂಬಿಗಳನ್ನಾಗಿ ಮಾಡುವಲ್ಲಿ ಸಫಲವಾಗಿವೆ.
2. ಸ್ತ್ರೀಯರು ತಮ್ಮ ದುಡಿಮೆಯ ಸ್ವಲ್ಪ ಹಣವನ್ನು ಉಳಿಸುತ್ತಾರೆ. ಇದರಿಂದ ಹಣ ಸಂಗ್ರಹವಾಗಿ ಮಹಿಳೆಯರ ಕೌಟಂಬಿಕ ಜೀವನಕ್ಕೆ ನೆರವಾಗುತ್ತದೆ.
3. ಸ್ತ್ರೀಯರ ಸಾಮಾಜಿಕ ಶಕ್ತಿಯನ್ನು ಬಲಪಡಿಸುವಲ್ಲಿ ಸ್ವಸಹಾಯ ಸಮೂಹಗಳು ಪ್ರಮುಖವಾದ ಪಾತ್ರವನ್ನು ವಹಿಸುತ್ತವೆ.
4. ಇವು ಸ್ತ್ರೀಯರನ್ನು ಆರ್ಥಿಕವಾಗಿ, ಸಾಮಾಜಿಕವಾಗಿ ಸಬಲರನ್ನಾಗಿಸುತ್ತವೆ.
5. ಸ್ತ್ರೀಯರ ಆರ್ಥಿಕ & ಸಾಮಾಜಿಕ ಅಭಿವೃದ್ಧಿಗೆ ಸಹಕಾರಿಯಾಗಿದೆ.
6. ಸ್ತ್ರೀಯರು ಸ್ವ–ಸಹಾಯ ಗುಂಪುಗಳ ಮೂಲಕ ಸರಕಾರದ ಹಲವಾರು ಯೋಜನೆಗಳನ್ನು ಸದುಪಯೋಗಪಡಿಸಿಕೊಳ್ಳಲು ಸಹಕಾರಿಯಾಗಿದೆ.

ಇದು ಎಸ್ ಟಿ ಎಫ್ ಡಿಜಿಟಲ್ ಗ್ರೂಪ್ ನ ಕೊಡುಗೆ

## ಅಧ್ಯಾಯ 4. ಸಾಮಾಜಿಕ ಸಮಸ್ಯೆಗಳು

**ಪ್ರಶ್ನೆ 1] ಬಿಟ್ಟ ಸ್ಥಳಗಳನ್ನು ಸೂಕ್ತಸ್ಥಳಗಳಿಂದ ತುಂಬಿರಿ.**

1. ಸಂವಿಧಾನದ ____ ನೇ ವಿಧಿ ಮಕ್ಕಳನ್ನು ದುಡಿಮೆಗೆ ತೊಡಗಿಸುವುದು ಕಾನೂನುಬಾಹಿರ ಎಂದು ಘೋಷಿಸಿದೆ.– **24ನೇ ವಿಧಿ**
2. ನಮ್ಮ ಸಂವಿಧಾನದ 24ನೇ ವಿಧಿಯು ಮಹತ್ವದ್ದಾಗಿದೆ. ಏಕೆಂದರೆ ಇದನ್ನು ಅದು ನಿಷೇದಿಸಿದೆ. – **ಮಕ್ಕಳ ದುಡಿಮೆ**
3. ಬಾಲ ಕಾರ್ಮಿಕನಿಷೇಧಕಾಯ್ದೆ ಜಾರಿಗೆ ಬಂದ ವರ್ಷ – **ಕ್ರಿಶ 1986**
4. ಬಾಲ ಕಾರ್ಮಿಕರ ಕಲ್ಯಾಣಕ್ಕಾಗಿ ______ ರಲ್ಲಿ ರಾಷ್ಟ್ರೀಯ ನೀತಿಯನ್ನು ಜಾರಿಗೊಳಿಸಿತು. – **ಕ್ರಿಶ 1987**
5. ಬಾಲಶ್ರಮ ನಿರ್ಮೂಲನ ಮತ್ತು ಪುನರ್ವಸತೀಕರಣ ಕಾಯ್ದೆ ಜಾರಿಗೆ ಬಂದ ವರ್ಷ – **2006**
6. ಕರ್ನಾಟಕ ರಾಜ್ಯದಲ್ಲಿ ಕೂಲಿಯಿಂದ ಶಾಲೆಗೆ ಕಾರ್ಯಕ್ರಮ ಜಾರಿಗೆ ತಂದ ಉದ್ದೇಶ – **ಬಾಲ ಕಾರ್ಮಿಕ ಮಕ್ಕಳನ್ನು ಶಾಲೆಗೆ ಕರೆತರಲು.**
7. ಬಾಲಕಾರ್ಮಿಕ ಪದ್ಧತಿಯನ್ನು ಹೋಗಲಾಡಿಸಲು 1988 ರಲ್ಲಿ ____ ಜಾರಿಗೆ ತಂದಿದೆ. – **ರಾಷ್ಟ್ರೀಯ ಬಾಲಕಾರ್ಮಿಕ ಯೋಜನೆ**
8. ಕರ್ನಾಟಕ ರಾಜ್ಯದಲ್ಲಿ ಬಾಲಕಾರ್ಮಿಕ ಮಕ್ಕಳನ್ನು ಶಾಲೆಗೆ ಕರೆತರಲು ರೂಪಿಸಿದ ಕಾರ್ಯಕ್ರಮ – **ಕೂಲಿಯಿಂದ ಶಾಲೆಗೆ**
9. ವರದಕ್ಷಿಣೆ ನಿಷೇದ ಕಾಯ್ದೆ ಮೊದಲು ____ ರಲ್ಲಿ ಜಾರಿಗೆ ಬಂದಿತು. – **1961**
10. ಗರ್ಭದಲ್ಲಿರುವ ಲಿಂಗ ಪತ್ತೆ ಹಚ್ಚುವದನ್ನು ನಿಯಂತ್ರಿಸಲು **1994** ರಲ್ಲಿ _____ ಕಾಯ್ದೆಯನ್ನು ಜಾರಿಗೆ ತರಲಾಯಿತು. – **ಪ್ರಸವ ಲಿಂಗ ಪರೀಕ್ಷೆ ಪ್ರತಿಬಂಧಕ ಕಾಯ್ದೆ,**
11. ವರದಕ್ಷಿಣೆ ಒಂದು ಸಾಮಾಜಿಕ ಪಿಡುಗು. ಏಕೆಂದರೆ– **ಇದು ಸ್ತ್ರೀಯರ ಮೇಲಿನ ಶೋಷಣೆಗೆ ಕಾರಣವಾಗುತ್ತದೆ.**
12. 1961ರ ವರದಕ್ಷಿಣೆ ನಿಷೇಧ ಕಾಯ್ದೆಯನ್ನು ______ ರಲ್ಲಿ ತಿದ್ದುಪಡಿ ಮಾಡಲಾಯಿತು. – **ಕ್ರಿಶ 1986**

**ಪ್ರಶ್ನೆ 2] ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

**1. ಬಾಲಕಾರ್ಮಿಕರು ಎಂದರೆ ಯಾರು? (ಎಪ್ರಿಲ್ 2015)**

ಉತ್ತರ : ಭಾರತದ ಸಂವಿಧಾನದ ಪ್ರಕಾರ 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಆರ್ಥಿಕ ಸಂಪಾದನೆಯ ಉದ್ದೇಶದಿಂದ ದುಡಿಮೆ ಮಾಡುತ್ತಿದ್ದರೆ ಅಂತಹವರನ್ನು ಬಾಲ ಕಾರ್ಮಿಕರು ಎಂದು ಕರೆಯಲಾಗಿದೆ.

**2. ಬಾಲ ಕಾರ್ಮಿಕರ ಸಮಸ್ಯೆಗೆ ಕಾರಣಗಳಾವವು? ತಿಳಿಸಿ.**
ಉತ್ತರ : ಕಡು ಬಡತನ, ಉದ್ಯಮಪತಿಗಳ ಲಾಭಕೋರತನ, ಅನಕ್ಷರತೆ, ಜೀತ, ಪೋಷಕರ ಅತಿಯಾದ ನಿಯಂತ್ರಣ, ಕೌಟಂಬಿಕ ಹಿಂಸೆ, ವಿಚ್ಛೇದನ, ಕೌಟಂಬಿಕ ಕಲಹ ಇವು ಬಾಲ ಕಾರ್ಮಿಕ ಸಮಸ್ಯೆಗೆ ಪ್ರಮುಖ ಕಾರಣಗಳಾಗಿವೆ.
**3. ಬಾಲಕಾರ್ಮಿಕ ವಿರೋಧಿ ಕಾಯ್ದೆ ಉಲ್ಲಂಘಿಸಿದ ಉದ್ಯೋಗಪತಿಗಳು ಕಡ್ಡಾಯವಾಗಿ ಭರಿಸಬೇಕಾದ್ದು ಏನು? (ಜೂನ್ 2015)**
ಉತ್ತರ : ಬಾಲಕಾರ್ಮಿಕ ವಿರೋಧಿ ಕಾಯ್ದೆ ಉಲ್ಲಂಘಿಸಿದ ಉದ್ಯೋಗಪತಿಗಳು ಪ್ರತಿಯೊಬ್ಬ ಬಾಲ ಕಾರ್ಮಿಕನ ಪರವಾಗಿ 20,000/- ರೂ.ಗಳ ದಂಡವನ್ನು ಕಲ್ಯಾಣ ನಿಧಿಗೆ ಕಡ್ಡಾಯವಾಗಿ ಭರಿಸಬೇಕಾಗುತ್ತದೆ.
**4. ಬಾಲ ಕಾರ್ಮಿಕ ಪುನರ್ವಸತಿ ಕಲ್ಯಾಣ ನಿಧಿ ಏಕೆ ಸ್ಥಾಪಿಸಲಾಯಿತು? (ಎಪ್ರಿಲ್ 2016)**
ಉತ್ತರ : ಬಾಲಕಾರ್ಮಿಕರ ಶೋಷಣೆ ತಪ್ಪಿಸಿ ಅವರಿಗೆ ಶೈಕ್ಷಣಿಕ, ವೈದ್ಯಕೀಯ, ಮೂಲಭೂತ ಅಗತ್ಯತೆಗಳನ್ನು ಪೂರೈಸಲು ಭಾರತ ಸರ್ಕಾರವು ಬಾಲಕಾರ್ಮಿಕರ ಪುನರ್ವಸತಿ ಕಲ್ಯಾಣ ನಿಧಿಯನ್ನು ಸ್ಥಾಪಿಸಿದೆ.
**5. ವರದಕ್ಷಿಣೆ ಎಂದರೇನು?**
ಉತ್ತರ : ಮದುವೆಯ ಸಂದರ್ಭದಲ್ಲಿ ವಧುವಿನ ಕಡೆಯವರು ಉಡುಗೊರೆ ರೂಪದಲ್ಲಿ ವರನಿಗೆ ನಗನಾಣ್ಯ, ಆಸ್ತಿ, ನಿವೇಶನ ಮುಂತಾದವುಗಳನ್ನು ನೀಡುವುದನ್ನೇ ವರದಕ್ಷಿಣೆ ಎನ್ನವರು.
**6. ಹೆಣ್ಣು ಭ್ರೂಣ ಹತ್ಯೆ ಎಂದರೇನು?**
ಉತ್ತರ : ಗರ್ಭದಲ್ಲಿರುವ ಭ್ರೂಣವು ಹೆಣ್ಣು ಭ್ರೂಣವಾಗಿದ್ದು, ಅದು ತಂದೆ-ತಾಯಿಯರಿಗೆ ಬೇಡವಾದರೆ ಅದನ್ನು ಗರ್ಭದಲ್ಲಿಯೇ ಕೊಂದು ಹಾಕುವುದನ್ನೇ ಹೆಣ್ಣು ಭ್ರೂಣ ಹತ್ಯೆ ಎಂದು ಕರೆಯುತ್ತಾರೆ.
**7. ಹೆಣ್ಣು ಭ್ರೂಣ ಹತ್ಯೆಗೆ ಕಾರಣಗಳೇನು?**
ಉತ್ತರ : ಬಡತನ, ವರದಕ್ಷಿಣೆ ಭೀತಿ, ಅನಕ್ಷರತೆ, ಅಜ್ಞಾನ, ಸ್ತ್ರೀ ವಿರೋಧಿ ನಿಲುವುಗಳು, ಗಂಡು ಮಗುವಿನ ಬಯಕೆ ಮುಂತಾದ ಕಾರಣಗಳಿಂದಾಗಿ ಹೆಣ್ಣು ಭ್ರೂಣ ಹತ್ಯೆ ಪ್ರಕರಣಗಳು ನಡೆಯುತ್ತವೆ.
**8. ಹೆಣ್ಣು ಭ್ರೂಣ ಹತ್ಯೆಯಂತಹ ಪ್ರಕರಣಗಳಿಂದ ಆಗುವ ದುಷ್ಪರಿಣಾಮಗಳಾವುವು?**
ಉತ್ತರ : ಹೆಣ್ಣು ಭ್ರೂಣ ಹತ್ಯೆಗಳಂತಹ ಪ್ರಕರಣಗಳಿಂದ ಸ್ತ್ರೀಪುರುಷರ ಲಿಂಗಾನುಪಾತದಲ್ಲಿ ಏರುಪೇರು, ಲಿಂಗ ತಾರತಮ್ಯತೆ, ಹೆಣ್ಣಿನ ಅಪಮೌಲ್ಯೀಕರಣ ಮುಂತಾದ ದುಷ್ಪರಿಣಾಮಗಳು ಉಂಟಾಗುತ್ತಿವೆ.
**9. ಗರ್ಭದಲ್ಲಿರುವ ಮಗುವಿನ ಲಿಂಗ ಕಂಡುಕೊಳ್ಳುವಿಕೆ ಕಾನೂನು ಬಾಹಿರ ಏಕೆ? (ಜೂನ್ 2015)**
ಉತ್ತರ : ತಾಯಿಯ ಗರ್ಭದಲ್ಲಿರುವ ಮಗುವಿನ ಲಿಂಗವನ್ನು ಪತ್ತೆ ಹಚ್ಚಿ ಅದು ಹೆಣ್ಣು ಶಿಶುವಾಗಿದ್ದರೆ ಅದನ್ನು ಗರ್ಭದಲ್ಲಿಯೇ ಕೊಂದು ಹಾಕುವುದರ ಮೂಲಕ ಗರ್ಭಪಾತದ ಪ್ರಕರಣಗಳು ಹೆಚ್ಚುತ್ತಿವೆ. ಆದ್ದರಿಂದ ಗರ್ಭದಲ್ಲಿರುವ ಮಗುವಿನ ಲಿಂಗ ಕಂಡುಕೊಳ್ಳುವಿಕೆ ಕಾನೂನು ಬಾಹಿರವಾಗಿದೆ.
**10. ಹೆಣ್ಣು ಶಿಶು ಹತ್ಯೆ ಎಂದರೇನು?**
ಉತ್ತರ : ಜನನದ ನಂತರದಲ್ಲಿ ಹೆಣ್ಣು ಮಗುವನ್ನು ಹತ್ಯೆ ಮಾಡುವ ಕ್ರೂರ ಪದ್ಧತಿಯೇ ಹೆಣ್ಣು ಶಿಶು ಹತ್ಯೆಯಾಗಿದೆ.

**ಪ್ರಶ್ನೆ 3] ಈ ಕೆಳಗಿನ ಪ್ರಶ್ನೆಗಳಿಗೆ 2 – 3 ವಾಕ್ಯದಲ್ಲಿ ಉತ್ತರಿಸಿರಿ.**
**1. ಭಾರತದ ಪ್ರಮುಖ ಸಾಮಾಜಿಕ ಸಮಸ್ಯೆಗಳನ್ನು ಪಟ್ಟಿ ಮಾಡಿರಿ.**
ಉತ್ತರ : ಭಾರತದಂತಹ ಅಭಿವೃದ್ಧಿ ಪಥದಲ್ಲಿರುವ ಸಮಾಜಗಳಲ್ಲಿ ಹಲವಾರು ಬಗೆಯ ಸಾಮಾಜಿಕ ಸಮಸ್ಯೆಗಳು ತಾಂಡವವಾಡುತ್ತಿವೆ. ಉದಾಹರಣೆಗೆ : ಮಿತಿಮೀರಿದ ಜನಸಂಖ್ಯೆ, ಬಡತನ, ನಿರುದ್ಯೋಗ, ಬಿಕ್ಷಾಟನೆ, ಬಾಲಾಪರಾಧ, ಬಾಲಕಾರ್ಮಿಕರ ಸಮಸ್ಯೆ, ಭ್ರಷ್ಟಾಚಾರ, ಮಹಿಳೆಯರ ಶೋಷಣೆ, ವರದಕ್ಷಿಣೆ ಕಿರುಕುಳ, ಯುವಜನರ ಅಶಾಂತಿ ಇತ್ಯಾದಿ.
**2. ಬಾಲ ಕಾರ್ಮಿಕ ಸಮಸ್ಯೆಗಳಿಂದಾಗುವ ಪರಿಣಾಮಗಳೇನು?**
ಉತ್ತರ : 1. ಬಾಲ ಕಾರ್ಮಿಕ ಸಮಸ್ಯೆಗಳಿಂದಾಗಿ ಮಕ್ಕಳು ಆಟವಾಡುವ, ಕನಸುಕಾಣುವ & ಓದುವ ವಯಸ್ಸಿನಲ್ಲಿ ಅವರನ್ನು ದುಡಿಮೆಗೆ ದೂಡಿ ಅವರ ಬಾಲ್ಯವನ್ನು ಕಸಿದುಕೊಳ್ಳಲಾಗಿದೆ.
2. ಮಕ್ಕಳನ್ನು ದಿನವಿಡಿ ದುಡಿಮೆಗೆ ಬಳಸಿಕೊಳ್ಳುವುದಲ್ಲದೆ ಅವರ ಮಾನಸಿಕ, ಭಾವನಾತ್ಮಕ, ಶೈಕ್ಷಣಿಕ, ವೈದ್ಯಕೀಯ ಮತ್ತಿತರ ಅಗತ್ಯತೆಗಳ ಬಗ್ಗೆ ಯಾವುದೇ ಕಾಳಜಿ ಇರುವುದಿಲ್ಲ.
3. ಅಲ್ಲದೆ ಬಾಲ ಕಾರ್ಮಿಕ ಮಕ್ಕಳು ಪೌಷ್ಠಿಕ ಆಹಾರದ ಕೊರತೆ, ಅನಾರೋಗ್ಯ, ಉದ್ಯಮಿಗಳ ಶೋಷಣೆಯಿಂದ ಬಳಲುತ್ತಿದ್ದಾರೆ.
4. ಬಾಲ ಕಾರ್ಮಿಕ ಪದ್ಧತಿಯಿಂದ ಮಕ್ಕಳು ಯಾವುದೇ ಮಕ್ಕಳ ಹಕ್ಕುಗಳನ್ನು ಅನುಭವಿಸದ ಸ್ಥಿತಿ ನಿರ್ಮಾಣವಾಗಿದೆ.
**3. ಬಾಲ ಕಾರ್ಮಿಕ ಸಮಸ್ಯೆಯ ನಿರ್ಮೂಲನಾ ಕ್ರಮಗಳಾವವು? ವಿವರಿಸಿ.**
ಉತ್ತರ : **ಬಾಲ ಕಾರ್ಮಿಕ ಸಮಸ್ಯೆಯ ನಿರ್ಮೂಲನಾ ಕ್ರಮಗಳು**
1. ಭಾರತ ಸರಕಾರವು **'ಬಾಲಕಾರ್ಮಿಕರ ಪುನರ್ವಸತಿ ಕಲ್ಯಾಣ ನಿಧಿ'** ಸ್ಥಾಪನೆಯ ಮೂಲಕ ಬಾಲಕಾರ್ಮಿಕರ ಮೂಲಭೂತ ಅಗತ್ಯತೆಗಳನ್ನು ಪೂರೈಸುವ ಯೋಜನೆಯನ್ನು ಹಮ್ಮಿಕೊಂಡಿದೆ.
2. 1986 ರಲ್ಲಿ ಬಾಲಕಾರ್ಮಿಕ ನಿಷೇಧ ಮತ್ತು ನಿಯಂತ್ರಣ ಕಾಯ್ದೆಯನ್ನು ಜಾರಿಗೊಳಿಸಲಾಗಿದೆ.
3. ನಮ್ಮ ಸಂವಿಧಾನದ 24 ನೇ ವಿಧಿಯು 14 ವರ್ಷಕ್ಕೂ ಕಿರಿಯ ವಯಸ್ಸಿನ ಮಕ್ಕಳನ್ನು ದುಡಿಮೆಗೆ ನೇಮಿಸುವುದು ಶಿಕ್ಷಾರ್ಹ ಅಪರಾಧ ಎಂದು ಘೋಷಿಸಿದೆ.
4. 1988 ರಲ್ಲಿ ರಾಷ್ಟ್ರೀಯ ಬಾಲಕಾರ್ಮಿಕ ಯೋಜನೆಯನ್ನು ಜಾರಿಗೆ ತಂದಿದೆ.
5. ಶಿಕ್ಷಣ ಹಕ್ಕು ಕಾಯ್ದೆ 2009 ರಲ್ಲಿ 6 ರಿಂದ 14 ವರ್ಷ ಮಕ್ಕಳಿಗೆ ಕಡ್ಡಾಯವಾಗಿ ಉಚಿತ ಶಿಕ್ಷಣದ ಹಕ್ಕನ್ನು ಕಲ್ಪಿಸಿದೆ.
6. ಕರ್ನಾಟಕದಲ್ಲಿ ಬಾಲ ಕಾರ್ಮಿಕ ಮಕ್ಕಳನ್ನು ಶಾಲೆಗೆ ಕರೆತರಲು ಕೂಲಿಯಿಂದ ಶಾಲೆ ಎಂಬ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.
**4. ಸಮಾಜದಲ್ಲಿ ಮಹಿಳೆಯರು ಎದುರಿಸುತ್ತಿರುವ ಗಂಭೀರ ಸಮಸ್ಯೆಗಳಾವವು?**
ಉತ್ತರ : ಸಮಾಜದಲ್ಲಿ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳೆಂದರೆ – ದೌರ್ಜನ್ಯ, ಅತ್ಯಾಚಾರ, ವರದಕ್ಷಿಣೆ ಕಿರುಕುಳ, ದೈಹಿಕ & ಮಾನಸಿಕ ಕಿರುಕುಳ, ಗರ್ಭಪಾತಕ್ಕೆ ಪ್ರೇರೇಪಿಸುವುದು, ಅವಾಚ್ಯ ಪದಗಳ ಬಳಕೆ ಮುಂತಾದ ರೂಪದಲ್ಲಿ ಹಿಂಸಾಚಾರಗಳು ಕುಟುಂಬದ ಹೊರಗೂ & ಒಳಗೂ ಸ್ತ್ರೀಯರ ಮೇಲೆ ನಡೆಯುತ್ತಲೇ ಇವೆ.
**5. ವರದಕ್ಷಿಣೆ ಎಂಬುದು ಸ್ತ್ರೀಯರನ್ನು ಕಾಡುತ್ತಿರುವ ಒಂದು ಸಾಮಾಜಿಕ ಪಿಡುಗು. ಏಕೆ?**
ಉತ್ತರ : ವರದಕ್ಷಿಣೆಯು ಸ್ತ್ರೀಯರ ಮೇಲಿನ ದೌರ್ಜನ್ಯ, ಹೆಣ್ಣು ಭ್ರೂಣ ಹತ್ಯೆ ಮತ್ತು ಹೆಣ್ಣು ಶಿಶು ಹತ್ಯೆಗೆ ಕಾರಣವಾಗುವುದರಿಂದ ವರದಕ್ಷಿಣೆ ಎಂಬುದು ಸ್ತ್ರೀಯರನ್ನು ಕಾಡುತ್ತಿರುವ ಒಂದು ಸಾಮಾಜಿಕ ಪಿಡುಗು ಎಂದು ಹೇಳಬಹುದು.
**6. ವರದಕ್ಷಿಣೆ ಪಿಡುಗಿನಿಂದಾಗುವ ದುಷ್ಪರಿಣಾಮಗಳಾವವು?**
ಉತ್ತರ : ವರದಕ್ಷಿಣೆಯ ದುಷ್ಪರಿಣಾಮಗಳು
1. ವರದಕ್ಷಿಣೆ ಸ್ತ್ರೀಯರ ಸ್ವಾಭಿಮಾನ, ಗೌರವ, ಸ್ಥಾನಮಾನವನ್ನು ಕುಗ್ಗಿಸುತ್ತದೆ.
2. ಕೌಟಂಬಿಕ ಕಲಹವನ್ನು ಉಂಟು ಮಾಡುತ್ತದೆ.
3. ಸ್ತ್ರೀ ಪುರುಷರ ನಡುವೆ ಒಡಕುಂಟಾಗಲು ಕಾರಣವಾಗಿದೆ.
4. ವರದಕ್ಷಿಣೆಯಿಂದಾಗಿ ಕೌಟಂಬಿಕ ಸಂಬಂಧಗಳು ಹಾಳಾಗುವವು.
5. ಹೆಣ್ಣು ಭ್ರೂಣ ಹತ್ಯೆ & ಹೆಣ್ಣು ಶಿಶು ಹತ್ಯೆ ಪ್ರಕರಣಗಳು ಹೆಚ್ಚಾಗುತ್ತವೆ.
6. ವಿವಾಹ ವಿಚ್ಛೇಧನ ಪ್ರಕರಣಗಳು ಹೆಚ್ಚಾಗುತ್ತಿವೆ.
**7. ವರದಕ್ಷಿಣೆ ಸಮಸ್ಯೆಗೆ ಪರಿಹಾರ ಕ್ರಮಗಳಾವವು?**
ಉತ್ತರ : **ವರದಕ್ಷಿಣೆ ಸಮಸ್ಯೆಗೆ ಪರಿಹಾರ ಕ್ರಮಗಳು**
1. 1961 ರಲ್ಲಿ ಭಾರತ ಸರ್ಕಾರ ವರದಕ್ಷಿಣೆ ನಿಷೇಧ ಕಾಯ್ದೆಯನ್ನು ಜಾರಿಗೊಳಿಸಿತು.
2. ಈ ಕಾಯ್ದೆ ಉಲ್ಲಂಘಿಸಿದವರಿಗೆ 5000 ರೂ.ಗಳ ದಂಡ ಇಲ್ಲವೇ 6 ತಿಂಗಳ ಕಾರಾಗೃಹವಾಸ ವಿಧಿಸಬಹುದಾಗಿದೆ.
3. ವರದಕ್ಷಿಣೆ ನಿಷೇಧ ಕಾಯ್ದೆಯನ್ನು 1986 ರಲ್ಲಿ ತಿದ್ದುಪಡಿ ಮಾಡಿ ಮತ್ತಷ್ಟು ಕಠಿಣಗೊಳಿಸಲಾಯಿತು.
4. ಜನಜಾಗೃತಿ, ಅಂತರ್ಜಾತಿಯ ವಿವಾಹ, ಸ್ವಯಂ ಸೇವಾ ಸಂಘಟನೆಗಳು & ಮಹಿಳಾ ಸಂಘಟನೆಗಳ ಮೂಲಕ ವರದಕ್ಷಿಣೆ ಪಿಡುಗನ್ನು ತೊಲಗಿಸಲು ಪ್ರಯತ್ನಿಸಲಾಗುತ್ತಿದೆ.

## ಭೂಗೋಳ – ಅಧ್ಯಾಯ 2] ಭಾರತದ ಪ್ರಾಕೃತಿಕ ಲಕ್ಷಣಗಳು

**ಪ್ರಶ್ನೆ 1] ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.**
1. ಭಾರತದ ಭೂಸ್ವರೂಪವನ್ನು ________ ಪ್ರಧಾನ ವಿಭಾಗಗಳಾಗಿ ವಿಂಗಡಿಸಲಾಗಿದೆ. – **4 ಭಾಗಗಳು**
2. ಹಿಮಾಲಯ ಪರ್ವತ ಪ್ರದೇಶವು ಸುಮಾರು ______ ಕಿ.ಮೀ.ಉದ್ದವಾಗಿ ಹಬ್ಬಿದೆ. – **2500 ಕಿ.ಮೀ.**
3. ಹಿಮಾಲಯ ಪಾದ ಬೆಟ್ಟಗಳಿಗಿರುವ ಮತ್ತೊಂದು ಹೆಸರು – **ಶಿವಾಲಿಕ್ ಬೆಟ್ಟಗಳು**
4. ಮಹಾಹಿಮಾಲಯವನ್ನು ___ ಎಂದು ಕರೆಯುವರು. – **ಹಿಮಾದ್ರಿ**
5. ಹಿಮಾಲಯ ಪರ್ವತಗಳಲ್ಲಿ ಅತಿ ಎತ್ತರವಾದ ಹಾಗೂ ಮೊದಲು ನಿರ್ಮಿತಗೊಂಡಿರುವ ಸರಣಿ – **ಹಿಮಾದ್ರಿ ( ಮಹಾ ಹಿಮಾಲಯ)**
6. ಗಂಗಾನದಿಯ ಉಗಮ ಸ್ಥಾನ – **ಗಂಗೋತ್ರಿ ಹಿಮನದಿ**
7. ಭಾರತದ ಅತ್ಯುನ್ನತವಾದ ಶಿಖರ – **ಕೆ2 ಅಥವಾ ಮೌಂಟ ಗಾಡ್ವಿನ್ ಅಸ್ಟಿನ್**
8. ಪ್ರಪಂಚದಲ್ಲಿಯೇ ಅತ್ಯುನ್ನತವಾದ ಶಿಖರ –**ಮೌಂಟ ಎವರೆಸ್ಟ (8848 ಮೀ)**
9. ಉತ್ತರ ಭಾರತದ ಮೈದಾನವು ______ ಮಣ್ಣಿನಿಂದ ನಿರ್ಮಾಣವಾಗಿದೆ. – **ಮೆಕ್ಕಲು ಮಣ್ಣು**
10. ಭಾರತದ ಭೂಸ್ವರೂಪ ವಿಭಾಗಗಳಲ್ಲಿ ಅತಿ ದೊಡ್ಡದಾದ ಭೂಸ್ವರೂಪ – **ಪರ್ಯಾಯ ಪ್ರಸ್ಥಭೂಮಿ**
11. ಭಾರತದ ಅತಿ ಪುರಾತನ ಭೂಭಾಗ – **ಪರ್ಯಾಯ ಪ್ರಸ್ಥಭೂಮಿ**
12. ಗೊಂಡ್ವಾನ ರಾಶಿಯ ಭೂಭಾಗ ಎಂದು ಕರೆಯಲ್ಪಡುವ ಭಾರತದ ಭೂಸ್ವರೂಪ – **ಪರ್ಯಾಯ ಪ್ರಸ್ಥಭೂಮಿ**
13. ಪರ್ಯಾಯ ಪ್ರಸ್ಥಭೂಮಿಯ ಒಟ್ಟು ವಿಸ್ತೀರ್ಣ – **16 ಲಕ್ಷ ಚ.ಕಿ.ಮೀ**

14. ಪಶ್ಚಿಮ ಘಟ್ಟಗಳನ್ನು ಮಹಾರಾಷ್ಟ್ರ ಹಾಗೂ ಕರ್ನಾಟಕದಲ್ಲಿ ______ ಎಂದು ಕರೆಯುವರು. – **ಸಹ್ಯಾದ್ರಿ**

15. ದಕ್ಷಿಣ ಭಾರತದಲ್ಲಿಯೇ ಅತ್ಯುನ್ನತ ಶಿಖರ – **ಅಣ್ಣಾಮಲೈ ಸರಣಿಯ ಅನೈಮುಡಿ (2665 ಮೀ) ಶಿಖರ,**

16. ಪೂರ್ವ ಘಟ್ಟಗಳು ಹಾಗೂ ಪಶ್ಚಿಮ ಘಟ್ಟಗಳು ಈ ಬೆಟ್ಟಗಳಲ್ಲಿ ಸಂಧಿಸುತ್ತವೆ. – **ನೀಲಗಿರಿ ಬೆಟ್ಟಗಳು**

17. ಪಶ್ಚಿಮ ಕರಾವಳಿಯನ್ನು ಕರ್ನಾಟಕದಲ್ಲಿ ______ ತೀರ ಎಂದು ಕರೆಯುವರು. – **ಕೊಂಕಣ ತೀರ**

18. ______ ದ್ವೀಪಗಳು ಗಟ್ಟಿಯಾದ ಜ್ವಾಲಾಮುಖಿ ನಿರ್ಮಿತ ಶಿಲೆಗಳಿಂದ ಕೂಡಿವೆ. – **ಅಂಡಮಾನ್ & ನಿಕೋಬಾರ್**

19. ಲಕ್ಷದ್ವೀಪಗಳು ______ ಗಳಿಂದ ನಿರ್ಮಿತವಾಗಿವೆ. – **ಹವಳಗಳು**

20. ಭಾರತದ ಪಶ್ಚಿಮ ಕರಾವಳಿಯ ಉದ್ದ – **1500 ಕಿ.ಮೀ.**

21. ಹಿಮಾಲಯ ಪರ್ವತ ಶ್ರೇಣಿಯು ____ಯಿಂದ ಪ್ರಾರಂಭವಾಗಿ ಪೂರ್ವದಲ್ಲಿ ____ ದವರೆಗೆ ಹಬ್ಬಿದೆ. – **ಪಾಮೀರ್ ಗ್ರಂಥಿಯಿಂದ ಅರುಣಾಚಲ ಪ್ರದೇಶ**

22. ಪ್ರಪಂಚದಲ್ಲಿಯೇ ಅತ್ಯುನ್ನತ ಶಿಖರವಾದ ಮೌಂಟ್ ಎವರೆಸ್ಟ ಇವುಗಳ ಮಧ್ಯದಲ್ಲಿದೆ. – **ನೇಪಾಳ & ಟಿಬೇಟ್**

23. ಭಾರತದ ಪ್ರಮುಖ ಉಪ್ಪುನೀರಿನ ಸರೋವರಗಳು – ಒರಿಸ್ಸಾದ **ಚಿಲ್ಕಾ** ಹಾಗೂ ತಮಿಳುನಾಡಿನ **ಪುಲಿಕಾಟ್** ಸರೋವರಗಳು

24. ಮಹಾ ಹಿಮಾಲಯವನ್ನು ಹಿಮಾದ್ರಿ ಎಂದು ಕರೆಯಲು ಕಾರಣ – **ಸಂಪೂರ್ಣವಾಗಿ ಹಿಮದಿಂದ ಆವೃತ್ತವಾಗಿದೆ.**

**ಪ್ರಶ್ನೆ 2] ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

**1. ಹಿಮಾಲಯದ ಪಾದ ಬೆಟ್ಟಗಳು ಎಂದರೇನು?**

**ಉತ್ತರ :** ಶಿವಾಲಿಕ್ ಶ್ರೇಣಿಯು ಅತಿ ಕಡಿಮೆ ಎತ್ತರವನ್ನು ಹೊಂದಿದೆ. ಆದ್ದರಿಂದ ಇದನ್ನು ಹಿಮಾಲಯದ ಪಾದಬೆಟ್ಟಗಳೆಂದು ಕರೆಯುವರು.

**2. ಡೂನ್‌ಗಳೆಂದರೇನು? ಉದಾಹರಣೆ ಕೊಡಿ.**

ಉತ್ತರ : ಹಿಮಾಲಯದ ಶಿವಾಲಿಕ್ ಶ್ರೇಣಿಯಲ್ಲಿ ಅಲ್ಲಲ್ಲಿ ಕಿರಿದಾದ ಮೈದಾನ ಪ್ರದೇಶಗಳಿವೆ. ಇವುಗಳಿಗೆ ಡೂನ್‌ಗಳೆಂದು ಕರೆಯುತ್ತಾರೆ. ಉದಾ : ಡೆಹರಾಡೂನ್

**3. ಹಿಮಾಲಯ ಪರ್ವತಗಳ ಮೂರು ಶ್ರೇಣಿಗಳನ್ನು ತಿಳಿಸಿ.**

ಉತ್ತರ : ಎತ್ತರಕ್ಕನುಗುಣವಾಗಿ ಹಿಮಾಲಯ ಪರ್ವತಗಳನ್ನು ಮೂರು ಶ್ರೇಣಿಗಳನ್ನಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ

1. ಶಿವಾಲಿಕ್ ಶ್ರೇಣಿ 2. ಹಿಮಾಚಲ (ಮಧ್ಯ ಹಿಮಾಲಯ)
3. ಮಹಾ ಹಿಮಾಲಯ (ಹಿಮಾದ್ರಿ).

**4. ಭಾರತದ ಭೂಸ್ವರೂಪ ವಿಭಾಗಗಳಲ್ಲಿ ಯಾವುದು ಇತ್ತೀಚಿನ ಅವಧಿಯಲ್ಲಿ ನಿರ್ಮಿತವಾಗಿದೆ?**

ಉತ್ತರ : ಉತ್ತರದ ಮಹಾಮೈದಾನ ಭಾರತದ ಭೂಸ್ವರೂಪ ವಿಭಾಗಗಳಲ್ಲಿ ಇತ್ತೀಚಿನ ಅವಧಿಯಲ್ಲಿ ನಿರ್ಮಿತವಾಗಿದೆ.

**5. ಜಲವಿದ್ಯುಚ್ಛಕ್ತಿಯ ಉತ್ಪಾದನೆಗೆ ಪರ್ಯಾಯ ಪ್ರಸ್ಥಭೂಮಿ ಹೇಗೆ ಅನುಕೂಲವಾಗಿದೆ?**

ಉತ್ತರ : ಪರ್ಯಾಯ ಪ್ರಸ್ಥಭೂಮಿಯ ನದಿಗಳು ಜಲಪಾತಗಳಿಂದ ಕೂಡಿರುವುದರಿಂದ ಜಲವಿದ್ಯುಚ್ಛಕ್ತಿಯ ಉತ್ಪಾದನೆಗೆ ಅನುಕೂಲವಾಗಿವೆ.

**6. ಪೂರ್ವ ಕರಾವಳಿಯು ಯಾವ ಯಾವ ಪ್ರಮುಖ ನದಿಮುಖಜ ಭೂಮಿಗಳನ್ನೊಳಗೊಂಡಿದೆ?**

ಉತ್ತರ : ಪೂರ್ವ ಕರಾವಳಿಯು ಮಹಾನದಿ, ಗೋದಾವರಿ, ಕೃಷ್ಣಾ & ಕಾವೇರಿ ನದಿಗಳ ಮುಖಜ ಭೂಮಿಗಳನ್ನು ಒಳಗೊಂಡಿದೆ.

**7. ಲಗೂನ್ ಎಂದರೇನು? ಉದಾಹರಣೆ ಕೊಡಿ.**

ಉತ್ತರ : ಸಮುದ್ರದ ಉಪ್ಪು ನೀರಿನಿಂದ ನಿರ್ಮಿತವಾದ ಸರೋವರಗಳಿಗೆ ಲಗೂನ್‌ಗಳೆಂದು ಕರೆಯುತ್ತಾರೆ.

ಉದಾ:– ಒರಿಸ್ಸಾದ ಚಿಲ್ಕಾ ಸರೋವರ, ತಮಿಳುನಾಡಿನ ಪುಲಿಕಾಟ್ ಸರೋವರ.

**8. ಇಂದಿರಾ ಪಾಯಿಂಟ್ ಎಂದರೇನು?**

ಉತ್ತರ : ಭಾರತದ ದಕ್ಷಿಣದ ತುದಿಯು ನಿಕೋಬಾರ್ ದ್ವೀಪದ ದಕ್ಷಿಣ ತುದಿಯಲ್ಲಿದೆ. ಇದನ್ನು ಇಂದಿರಾ ಪಾಯಿಂಟ್ ಎಂದು ಕರೆಯುತ್ತಾರೆ.

**ಪ್ರಶ್ನೆ 3] ಈ ಕೆಳಗಿನ ಪ್ರಶ್ನೆಗಳಿಗೆ 2 – 3 ವಾಕ್ಯದಲ್ಲಿ ಉತ್ತರಿಸಿರಿ.**

**1. ಭಾರತದ ಪ್ರಾಕೃತಿಕ ಲಕ್ಷಣಗಳನ್ನು ಹೆಸರಿಸಿ, (ಏಪ್ರಿಲ್ 2015)**

**ಉತ್ತರ : ಭಾರತದ ಪ್ರಾಕೃತಿಕ ಲಕ್ಷಣಗಳು**

1) ಉತ್ತರದ ಪರ್ವತಗಳು 2) ಉತ್ತರದ ಮಹಾ ಮೈದಾನ
3) ಪರ್ಯಾಯ ಪ್ರಸ್ಥಭೂಮಿ 4) ಕರಾವಳಿ ಮೈದಾನಗಳು

**2. ಸಿವಾಲಿಕ್ ಶ್ರೇಣಿಯನ್ನು ಕುರಿತು ಬರೆಯಿರಿ.**

ಉತ್ತರ : 1. ಶಿವಾಲಿಕ್ ಶ್ರೇಣಿಯು ಅತಿ ಕಡಿಮೆ ಎತ್ತರವನ್ನು ಹೊಂದಿದೆ. ಆದ್ದರಿಂದ ಇದನ್ನು ಹಿಮಾಲಯದ ಪಾದಬೆಟ್ಟಗಳೆಂದು ಕರೆಯುವರು.

2. ಇಲ್ಲಿ ಕಿರಿದಾದ ಮೈದಾನಗಳಿವೆ. ಇವುಗಳಿಗೆ ಡೂನ್‌ಗಳೆಂದು ಕರೆಯುವರು. ಉದಾ : ಡೆಹರಾಡೂನ್.
3. ಶಿವಾಲಿಕ್ ಶ್ರೇಣಿಯು ಸಮುದ್ರ ಮಟ್ಟದಿಂದ 600 ರಿಂದ 1500 ಮೀ. ಗಳಷ್ಟು ಎತ್ತರವಾಗಿವೆ.

**3. ಭಾರತದ ವಾಯುಗುಣದ ಮೇಲೆ ಹಿಮಾಲಯ ಪರ್ವತಗಳು ಹೇಗೆ ಪ್ರಭಾವ ಬೀರುತ್ತದೆ?**

ಉತ್ತರ : 1. ಹಿಮಾಲಯ ಪರ್ವತಗಳು ಮಧ್ಯ ಏಶಿಯಾದಿಂದ ಬೀಸುವ ಶೀತ ಮಾರುತಗಳನ್ನು ತಡೆಗಟ್ಟುತ್ತವೆ.
2. ನೈರುತ್ಯ ಮಾರುತಗಳನ್ನು ತಡೆಗಟ್ಟಿ ಸಾಕಷ್ಟು ಮಳೆ ಸುರಿಯುವಂತೆ ಮಾಡುತ್ತದೆ.
3. ಹೀಗೆ ಭಾರತದ ವಾಯುಗುಣದ ಮೇಲೆ ಹಿಮಾಲಯ ಪರ್ವತಗಳು ಪ್ರಭಾವ ಬೀರುತ್ತದೆ.

**4. ಉತ್ತರದ ಮೈದಾನವನ್ನು ಸಂಚಯನ ಮೈದಾನವೆಂದು ಕರೆಯುತ್ತಾರೆ. ಏಕೆ?**
**ಅಥವಾ ಉತ್ತರದ ಮೈದಾನ ಪ್ರದೇಶಗಳು ಹೇಗೆ ರಚಿತವಾಗಿವೆ?**

ಉತ್ತರ : ಉತ್ತರ ಭಾರತದ ಮೈದಾನಗಳು ಹಿಮಾಲಯದಿಂದ ತುಂಬಿ ಹರಿಯುವ ನದಿಗಳು ಹೊತ್ತು ತಂದು ಹಾಕಿದ ಮೆಕ್ಕಲು ಮಣ್ಣಿನಿಂದ ನಿರ್ಮಿತವಾಗಿರುವದರಿಂದ ಇದನ್ನು ಸಂಚಯನ ಮೈದಾನವೆಂದು ಕರೆಯುತ್ತಾರೆ.

**5. ಪರ್ಯಾಯ ಪ್ರಸ್ಥಭೂಮಿಯು ಆರ್ಥಿಕವಾಗಿ ಹೆಚ್ಚು ಪ್ರಾಮುಖ್ಯತೆ ಪಡೆದಿದೆ ಏಕೆ? (ಜೂನ್ 2015) (ಏಪ್ರಿಲ್ 2016)**

ಉತ್ತರ : ಪರ್ಯಾಯ ಪ್ರಸ್ಥಭೂಮಿಯು ಆರ್ಥಿಕವಾಗಿ ಹೆಚ್ಚು ಪ್ರಾಮುಖ್ಯತೆ ಪಡೆದಿದೆ ಏಕೆಂದರೆ –

1) ಇಲ್ಲಿ ಅಪಾರವಾದ ಖನಿಜ ಸಂಪನ್ಮೂಲಗಳಿವೆ.
2) ಇಲ್ಲಿನ ನದಿಗಳು ಜಲಪಾತಗಳಿಂದ ಕೂಡಿರುವುದರಿಂದ ಜಲವಿದ್ಯುಚ್ಛಕ್ತಿಯ ಉತ್ಪಾದನೆಗೆ ಅನುಕೂಲವಾಗಿವೆ.

**6. ಭಾರತಕ್ಕೆ ಸೇರಿರುವ ದ್ವೀಪಸ್ತೋಮಗಳಾವುವು? ಅವು ಎಷ್ಟಿವೆ?**

ಉತ್ತರ : ಭಾರತಕ್ಕೆ ಸೇರಿರುವ 247 ದ್ವೀಪಗಳಿವೆ. ಅವುಗಳಲ್ಲಿ 204 ದ್ವೀಪಗಳು ಬಂಗಾಳಕೊಲ್ಲಿಯಲ್ಲಿ & 43 ದ್ವೀಪಗಳು ಅರಬ್ಬಿಸಮುದ್ರದಲ್ಲಿವೆ. ಇವುಗಳಲ್ಲಿ ಲಕ್ಷದ್ವೀಪಗಳು ಹಾಗೂ ಅಂಡಮಾನ & ನಿಕೋಬಾರ ದ್ವೀಪಗಳು ಪ್ರಮುಖ ದ್ವೀಪಸ್ತೋಮಗಳಾಗಿವೆ.

**ಪ್ರಶ್ನೆ 4] ಈ ಕೆಳಗಿನ ಪ್ರಶ್ನೆಗಳಿಗೆ 4 – 5 ವಾಕ್ಯದಲ್ಲಿ ಉತ್ತರಿಸಿರಿ.**

**1. ಪೂರ್ವ & ಪಶ್ಚಿಮ ಘಟ್ಟಗಳ ವ್ಯತ್ಯಾಸವನ್ನು ತಿಳಿಸಿ.**

ಉತ್ತರ : **ಪೂರ್ವ & ಪಶ್ಚಿಮ ಘಟ್ಟಗಳ ವ್ಯತ್ಯಾಸಗಳು**

| ಪೂರ್ವ ಘಟ್ಟಗಳು | ಪಶ್ಚಿಮ ಘಟ್ಟಗಳು |
|---|---|
| • ಪೂರ್ವ ಘಟ್ಟಗಳು ಹೆಚ್ಚು ಎತ್ತರವಾಗಿಲ್ಲ. ಮತ್ತು ನಿರಂತರವಾಗಿಲ್ಲ. | • ಪಶ್ಚಿಮ ಘಟ್ಟಗಳು ಅತ್ಯಂತ ಹೆಚ್ಚು ಎತ್ತರವಾಗಿವೆ. ಮತ್ತು ನಿರಂತರವಾಗಿವೆ. |
| • ಈ ಘಟ್ಟಗಳು ನದಿ ಕಣಿವೆಗಳಿಂದ ಅಲ್ಲಲ್ಲಿ ಪ್ರತ್ಯೇಕಿಸಲ್ಪಟ್ಟಿವೆ. ಸಮುದ್ರದಿಂದ ದೂರದಲ್ಲಿ ಹರಡಿವೆ. | • ಇವು ಕರಾವಳಿಗೆ ಹೊಂದಿಕೊಂಡು ತುಂಬಾ ಕಡಿದಾಗಿವೆ. |
| • ಜಲ ವಿದ್ಯುಚ್ಛಕ್ತಿ ಉತ್ಪಾದನೆಗೆ ಅನೂಕೂಲಗಳಿಲ್ಲ. | • ಅನೇಕ ಜಲವಿದ್ಯುತ್ ಉತ್ಪಾದನಾ ಕೇಂದ್ರಗಳನ್ನು ಸೃಷ್ಟಿಸಿವೆ. |

**2. ಪಶ್ಚಿಮ ಕರಾವಳಿ ಮತ್ತು ಪೂರ್ವ ಕರಾವಳಿಗೂ ಇರುವ ವ್ಯತ್ಯಾಸವೇನು?**

ಉತ್ತರ : **ಪಶ್ಚಿಮ ಕರಾವಳಿ ಮತ್ತು ಪೂರ್ವ ಕರಾವಳಿಗೂ ಇರುವ ವ್ಯತ್ಯಾಸಗಳು**

| ಪಶ್ಚಿಮ ಕರಾವಳಿ | ಪೂರ್ವ ಕರಾವಳಿ |
|---|---|
| •ಪಶ್ಚಿಮ ಕರಾವಳಿಯು ಅರಬ್ಬೀ ಸಮುದ್ರಕ್ಕೆ ಹೊಂದಿಕೊಂಡು ಗುಜರಾತಿನ ಕಛ್‌ನಿಂದ ಕನ್ಯಾಕುಮಾರಿಯವರೆಗೆ ಹಬ್ಬಿದೆ. | • ಪೂರ್ವ ಕರಾವಳಿಯು ಬಂಗಾಳಕೊಲ್ಲಿಗೆ ಹೊಂದಿಕೊಂಡು ಕನ್ಯಾಕುಮಾರಿಯಿಂದ ಉತ್ತರದಲ್ಲಿ ಗಂಗಾನದಿ ಮುಖಜ ಭೂಮಿಯವರೆಗೆ ಹಬ್ಬಿದೆ. |
| •ಇದು ಇಕ್ಕಟ್ಟಾಗಿದ್ದು ಸಮುದ್ರಕ್ಕೆ ಹೊಂದಿಕೊಂಡಿದೆ. | • ಇದು ಹೆಚ್ಚು ಅಗಲ & ಒಂದೇ ರೀತಿ ಸಮತಟ್ಟಾಗಿದೆ. |
| •ಇದು ವಿಶಾಲವಾದ ನದಿ ಮುಖಜ ಭೂಮಿಯನ್ನು ಒಳಗೊಂಡಿಲ್ಲ. | • ಇದು ಮಹಾನದಿ, ಗೋದಾವರಿ, ಕೃಷ್ಣಾ, ಕಾವೇರಿ ನದಿಗಳ ಮುಖಜ ಭೂಮಿಗಳನ್ನು ಒಳಗೊಂಡಿದೆ. |
| •ಪಶ್ಚಿಮ ಕರಾವಳಿಯನ್ನು ಕೊಂಕಣ ತೀರ & ಮಲಬಾರ ತೀರವೆಂದು ಕರೆಯುವರು. | • ಪೂರ್ವ ಕರಾವಳಿಯನ್ನು ಉತ್ಕಲ ತೀರ ಮತ್ತು ಕೋರಮಂಡಲ ತೀರ ಎಚಿದು ಕರೆಯುವರು. |

**3. ಹಿಮಾಲಯ ಪರ್ವತದಿಂದಾಗುವ ಪ್ರಯೋಜನ (ಮಹತ್ವ) ಗಳೇನು?**

ಉತ್ತರ : **ಹಿಮಾಲಯ ಪರ್ವತದಿಂದಾಗುವ ಪ್ರಯೋಜನಗಳು.**

1. ಭಾರತಕ್ಕೆ ರಕ್ಷಣೆಯನ್ನು ಒದಗಿಸುತ್ತವೆ.
2. ಮಧ್ಯಏಷ್ಯಾದಿಂದ ಬೀಸುವ ಶೀತಗಾಳಿಯನ್ನು ತಡೆಹಿಡಿಯುತ್ತವೆ.
3. ನದಿಗಳ ಉಗಮ ಪ್ರದೇಶವಾಗಿವೆ.
4. ಜಲವಿದ್ಯುಚ್ಛಕ್ತಿ ಉತ್ಪಾದನೆಗೆ ಅನುಕೂಲವಾಗಿವೆ.
5. ವೈವಿಧ್ಯಮಯ ಸಸ್ಯ & ಪ್ರಾಣಿ ಸಂಕುಲಗಳಿಗೆ ಆಶ್ರಯ ತಾಣವಾಗಿವೆ.
6. ಅಪಾರ ಪ್ರಮಾಣದ ಖನಿಜ ಸಂಪನ್ಮೂಲಗಳನ್ನು ಒಳಗೊಂಡಿವೆ.

## ಅಧ್ಯಾಯ 4. ಭಾರತದ ಮಣ್ಣುಗಳು

**ಪ್ರಶ್ನೆ 1] ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬಿರಿ.**

1. ನದಿಗಳು ಪರ್ವತ ಪ್ರದೇಶದಿಂದ ತಂದು ಸಂಚಯಿಸಿರುವ ಮಣ್ಣು – **ಮೆಕ್ಕಲು ಮಣ್ಣು**
2. ಕಪ್ಪು ಮಣ್ಣು ______ ಶಿಲೆಗಳ ಶಿಥಿಲೀಕರಣದಿಂದ ಉಂಟಾಗಿದೆ. – **ಅಗ್ನಿ ಶಿಲೆ**
3. ಕಪ್ಪು ಮಣ್ಣಿನ ಪ್ರದೇಶವನ್ನು ______ ಎಂದು ಸಹ ಕರೆಯುವರು. – **ಡೆಕ್ಕನ್ ಟ್ರಾಪ್**
4. ರೇಗೂರು ಮಣ್ಣು ಎಂದು ಕರೆಯಲ್ಪಡುವ ಮಣ್ಣು – **ಕಪ್ಪು ಮಣ್ಣು**
5. ಹತ್ತಿ ಬೆಳೆಗೆ ಅತ್ಯಂತ ಸೂಕ್ತವಾದ ಮಣ್ಣು – **ಕಪ್ಪು ಮಣ್ಣು**
6. ಪರ್ಯಾಯ ಪ್ರಸ್ಥಭೂಮಿಯಲ್ಲಿ ಹೆಚ್ಚು ವಿಸ್ತಾರವಾಗಿ ಹರಡಿರುವ ಮಣ್ಣು – **ಕೆಂಪು ಮಣ್ಣು**
7. ರಾಜಸ್ತಾನದಲ್ಲಿ ______ ಮಣ್ಣು ಹೆಚ್ಚಾಗಿ ಕಂಡುಬರುವದು. – **ಮರಭೂಮಿ ಮಣ್ಣು**
8. ಹಿಮಾಲಯ ಪರ್ವತಗಳಲ್ಲಿ ____ ಬಗೆಯ ಮಣ್ಣು ಕಂಡು ಬರುವುದು. – **ಕೊಳೆತ ಜೈವಿಕಾಂಶಗಳನ್ನೊಳಗೊಂಡ ಮಣ್ಣು.**
9. ಕಪ್ಪು ಮಣ್ಣು ಒಣಬೇಸಾಯಕ್ಕೆ ಸೂಕ್ತವಾಗಿದೆ. ಏಕೆಂದರೆ – **ಇದು ತೇವಾಂಶವನ್ನು ಹಿಡಿದಿಟ್ಟುಕೊಳ್ಳುವ ಸಾಮರ್ಥ್ಯವನ್ನು ಹೊಂದಿದೆ**
10. ಕಾಫಿ, ಟೀ ಮುಂತಾದ ತೋಟಗಾರಿಕಾ ಬೆಳೆಗಳಿಗೆ ಈ ಮಣ್ಣು ಸೂಕ್ತವಾಗಿದೆ.– **ಜಂಬಿಟ್ಟಿಗೆ ಮಣ್ಣು & ಪರ್ವತ ಮಣ್ಣು**
11. ಅತಿ ಕಡಿಮೆ ಮಳೆ ಮತ್ತು ಅಧಿಕ ಉಷ್ಣಾಂಶದ ಪ್ರದೇಶದಲ್ಲಿ ನಿರ್ಮಾಣವಾಗುವ ಮಣ್ಣು – **ಮರುಭೂಮಿ ಮಣ್ಣು**
12. ಈ ಮಣ್ಣಿನಲ್ಲಿ ಕೊಳೆತ ಜೈವಿಕಾಂಶ ಅಧಿಕವಾಗಿರುತ್ತದೆ – **ಪರ್ವತ ಮಣ್ಣು**

**ಪ್ರಶ್ನೆ 3] ಈ ಕೆಳಗಿನ ಪ್ರಶ್ನೆಗಳಿಗೆ 2 – 3 ವಾಕ್ಯದಲ್ಲಿ ಉತ್ತರಿಸಿರಿ.**

**1. ಭಾರತದಲ್ಲಿ ಕಂಡು ಬರುವ ಮಣ್ಣಿನ ಮುಖ್ಯ ಪ್ರಕಾರಗಳಾವವು?**

ಉತ್ತರ : ಭಾರತದಲ್ಲಿ ಕಂಡು ಬರುವ ಮಣ್ಣನ್ನು ಆರು ಪ್ರಮುಖ ವಿಧಗಳಾಗಿ ವಿಂಗಡಿಸಲಾಗಿದೆ.

ಅವುಗಳೆಂದರೆ – 1. ಮೆಕ್ಕಲುಮಣ್ಣು, 2. ಕಪ್ಪುಮಣ್ಣು, 3. ಕೆಂಪುಮಣ್ಣು, 4. ಜಂಬಿಟ್ಟಿಗೆ ಮಣ್ಣು, 5. ಮರುಭೂಮಿ ಮಣ್ಣು, 6. ಪರ್ವತ ಮಣ್ಣು.

**2. ಕಪ್ಪು ಮಣ್ಣು ಒಣ ಬೇಸಾಯಕ್ಕೆ ಏಕೆ ಉತ್ತಮ?**

ಉತ್ತರ : ಈ ಮಣ್ಣು ಜೇಡಿಮಣ್ಣಿನ ಕಣಗಳನ್ನೊಳಗೊಂಡಿದ್ದು, ಫಲವತ್ತಾಗಿದ್ದು, ತೇವಾಂಶವನ್ನು ಹಿಡಿದಿಟ್ಟುಕೊಳ್ಳಲು ಸಮರ್ಥವಾಗಿದೆ. ಆದ್ದರಿಂದ ಕಪ್ಪು ಮಣ್ಣು ಒಣಬೇಸಾಯಕ್ಕೆ ಸೂಕ್ತವಾಗಿದೆ.

**3. ಮರುಭೂಮಿ ಮಣ್ಣಿನ ಗುಣಲಕ್ಷಣ & ಹಂಚಿಕೆಯನ್ನು ತಿಳಿಸಿ.**

ಉತ್ತರ : **ಮರುಭೂಮಿ ಮಣ್ಣಿನ ಗುಣಲಕ್ಷಣಗಳು**

1) ಅತಿ ಕಡಿಮೆ ಮಳೆ & ಅಧಿಕ ಉಷ್ಣಾಂಶದ ಪ್ರದೇಶಗಳಲ್ಲಿ ಮರುಳು ಮಣ್ಣು ಕಂಡುಬರುತ್ತದೆ.
2) ಕಣಗಳ ನಡುವೆ ಅಧಿಕ ರಂದ್ರತೆ ಇರುವುದರಿಂದ ನೀರು ನಿಲ್ಲದೆ ಬಸಿದು ಹೋಗುತ್ತದೆ.
3) ಇದು ಸುಮಾರು 1.4 ಲಕ್ಷ ಚ.ಕಿ.ಮೀ. ಪ್ರದೇಶಗಳಲ್ಲಿ ಕಂಡು ಬರುತ್ತದೆ.
4) ಈ ಮಣ್ಣಿನಲ್ಲಿ ಸಜ್ಜೆ & ಖರ್ಜೂರ ಇತ್ಯಾದಿಗಳನ್ನು ಬೆಳೆಯಬಹುದು.
5) ಈ ಮಣ್ಣು ಭಾರತದ ವಾಯುವ್ಯ ಭಾಗದ ರಾಜಸ್ಥಾನ, ಪಂಜಾಬ & ಹರಿಯಾಣ ರಾಜ್ಯಗಳು ಹಾಗೂ ಪಶ್ಚಿಮದ ಗುಜರಾತಿನ ಕಛ್ ಪ್ರದೇಶಗಳಲ್ಲಿ ಕಂಡು ಬರುತ್ತದೆ.

**4. ಪರ್ವತ ಮಣ್ಣಿನ ಗುಣಲಕ್ಷಣ ಮತ್ತು ಹಂಚಿಕೆಯನ್ನು ತಿಳಿಸಿ.**

ಉತ್ತರ : **ಪರ್ವತ ಮಣ್ಣಿನ ಗುಣಲಕ್ಷಣಗಳು**

1) ಕೊಳೆತ ಜೈವಿಕಾಂಶಗಳನ್ನು ಅಧಿಕ ಪ್ರಮಾಣದಲ್ಲಿ ಪರ್ವತ ಮಣ್ಣು ಹೊಂದಿದೆ.
2) ಪರ್ವತ ಮಣ್ಣು ಸಾರಜನಕ & ಸಾವಯವ ಅವಶೇಷಗಳನ್ನು ಹೆಚ್ಚಾಗಿ ಒಳಗೊಂಡಿರುತ್ತದೆ.
3) ಕಾಫಿ, ಚಹಾ, ಸಾಂಬಾರ ಪದಾರ್ಥಗಳು & ಹಣ್ಣುಗಳ ಬೆಳೆಗಳಿಗೆ ಸೂಕ್ತವಾಗಿದೆ.
4) ಹಿಮಾಲಯದ ಪಾದ ಬೆಟ್ಟಗಳು, ಜಮ್ಮು & ಕಾಶ್ಮೀರ, ಹಿಮಾಚಲ ಪ್ರದೇಶ, ಉತ್ತರಾಖಂಡ, ಬಿಹಾರ, ಪಶ್ಚಿಮ ಬಂಗಾಳ & ಪಶ್ಚಿಮ ಘಟ್ಟಗಳಲ್ಲಿ ಪರ್ವತ ಮಣ್ಣು ಹಂಚಲ್ಪಟ್ಟಿದೆ.

**7. ಮಣ್ಣಿನ ಸವೆತಕ್ಕೆ ಕಾರಣಗಳೇನು? (ಜೂನ್ 2015)**

ಉತ್ತರ : **ಮಣ್ಣಿನ ಸವೆತಕ್ಕೆ ಕಾರಣಗಳು**

1. ಅರಣ್ಯಗಳ ನಾಶ,
2. ಸಾಕು ಪ್ರಾಣಿಗಳನ್ನು ಮೇಯಿಸುವದು,
3. ಅವೈಜ್ಞಾನಿಕ ಬೇಸಾಯ,
4. ಅಧಿಕ ನೀರಾವರಿ ಬಳಕೆ.

**ಪ್ರಶ್ನೆ 4] ಈ ಕೆಳಗಿನ ಪ್ರಶ್ನೆಗಳಿಗೆ 4 – 5 ವಾಕ್ಯದಲ್ಲಿ ಉತ್ತರಿಸಿರಿ.**

**1. ಮೆಕ್ಕಲು ಮಣ್ಣಿನ ಗುಣಲಕ್ಷಣ ಮತ್ತು ಹಂಚಿಕೆಯನ್ನು ತಿಳಿಸಿ.**

ಉತ್ತರ : **ಮೆಕ್ಕಲು ಮಣ್ಣಿನ ಗುಣಲಕ್ಷಣಗಳು**

1. ನದಿಗಳು ಪರ್ವತ ಪ್ರದೇಶಗಳಿಂದ ಹೊತ್ತುತಂದು ಸಂಚಯಿಸಿರುವ ಮಣ್ಣಿನಿಂದ ರಚಿತವಾಗಿದೆ.
2. ಸಮಾರು 7.7 ದಶಲಕ್ಷ ಚ.ಕಿ.ಮೀ. ಪ್ರದೇಶಗಳಲ್ಲಿ ಹರಡಿದೆ.
3. ಈ ಮಣ್ಣಿನಲ್ಲಿ ಪೊಟ್ಯಾಷ್ ಮತ್ತು ಸುಣ್ಣ ಹೆಚ್ಚಾಗಿರುತ್ತದೆ.
4. ಜೈವಿಕಾಂಶ & ಸಾರಜನಕ ಕಡಿಮೆ ಪ್ರಮಾಣದಲ್ಲಿರುತ್ತವೆ.
5 ಇಲ್ಲಿ ಬೆಳೆಯುವ ಪ್ರಮುಖ ಬೆಳೆಗಳೆಂದರೆ ಗೋದಿ, ಭತ್ತ, ಕಬ್ಬು, ಸಣಬು.
6. ಇದು ಉತ್ತರ ಪ್ರದೇಶ, ಬಿಹಾರ, ಪಶ್ಚಿಮ ಬಂಗಾಳ, ಒಡಿಸಾ, ಪಂಜಾಬ್, ಹರಿಯಾಣ, ಅಸ್ಸಾಂ ರಾಜ್ಯಗಳಲ್ಲಿ ಕಂಡುಬರುತ್ತದೆ.

**2. ಕಪ್ಪು ಮಣ್ಣಿನ ಗುಣಲಕ್ಷಣಗಳನ್ನು ತಿಳಿಸಿರಿ.**

ಉತ್ತರ : **ಕಪ್ಪು ಮಣ್ಣಿನ ಗುಣಲಕ್ಷಣಗಳು.**

1. ಈ ಮಣ್ಣು ಹತ್ತಿ ಬೆಳೆಗೆ ಹೆಚ್ಚು ಉಪಯುಕ್ತವಾದುದು.
2. ಈ ಮಣ್ಣು ಅಗ್ನಿಶಿಲೆಗಳ ಶಿಥಿಲೀಕರಣದಿಂದ ಉತ್ಪತ್ತಿಯಾಗಿದೆ.
3. ಇದರಲ್ಲಿ ಜೇಡಿಮಣ್ಣಿನ ಕಣಗಳು ಹೆಚ್ಚಾಗಿ ಕಂಡುಬರುತ್ತವೆ.
4. ಮಣ್ಣು ಫಲವತ್ತಾಗಿದ್ದು ತೇವಾಂಶವನ್ನು ಹಿಡಿದಿಟ್ಟುಕೊಳ್ಳಲು ಸಮರ್ಥವಾಗಿದೆ.
5. ಈ ಮಣ್ಣು ಕಬ್ಬಿಣ, ಸುಣ್ಣ ಹಾಗೂ ಮೆಗ್ನೀಷಿಯಂ ಕಾರ್ಬೋನೇಟ್‌ಗಳನ್ನು ಅಧಿಕ ಪ್ರಮಾಣದಲ್ಲಿ ಒಳಗೊಂಡಿದೆ.
6. ಕಪ್ಪು ಮಣ್ಣಿನ ಪ್ರದೇಶವನ್ನು ಡೆಕ್ಕನ್ ಟ್ರಾಪ್ ಎಂದು ಸಹ ಕರೆಯುತ್ತಾರೆ.
7. ಕಪ್ಪು ಮಣ್ಣಿನಲ್ಲಿ ಬೆಳೆಯುವ ಪ್ರಮುಖ ಬೆಳೆಗಳೆಂದರೆ ಹತ್ತಿ, ಜೋಳ, ಗೋಧಿ, ಈರುಳ್ಳಿ, ಮೆಣಸಿನಕಾಯಿ, ಹೊಗೆಸೊಪ್ಪು, ಎಣ್ಣೆಕಾಳು, ನಿಂಬೆ
8. ಇದು ಮಹಾರಾಷ್ಟ್ರ, ಗುಜರಾತ್, ಮಧ್ಯಪ್ರದೇಶ, ಆಂಧ್ರಪ್ರದೇಶದ ಪಶ್ಚಿಮ ಭಾಗ ಮತ್ತು ಉತ್ತರ ಕರ್ನಾಟಕದಲ್ಲಿ ಕಂಡುಬರುತ್ತದೆ.

**3. ಜಂಬಿಟ್ಟಿಗೆ ಮಣ್ಣಿನ ಗುಣಲಕ್ಷಣ & ಹಂಚಿಕೆಯನ್ನು ತಿಳಿಸಿ.**

ಉತ್ತರ : **ಜಂಬಿಟ್ಟಿಗೆ ಮಣ್ಣಿನ ಗುಣಲಕ್ಷಣಗಳು.**

1) ಸಾಮಾನ್ಯವಾಗಿ 200 ಸೆಂ.ಮೀ.ಗಳಿಗಿಂತ ಹೆಚ್ಚು ಮಳೆ ಬೀಳುವ ಪ್ರದೇಶಗಳಲ್ಲಿ ಕಂಡುಬರುತ್ತದೆ.
2) ಕಬ್ಬಿಣದ ಆಕ್ಸೈಡ್‌ನಿಂದಾಗಿ ಜಂಬಿಟ್ಟಿಗೆ ಮಣ್ಣು ಕೆಂಪು ಬಣ್ಣವನ್ನು ಹೊಂದಿದೆ.
3) ಜಂಬಿಟ್ಟಿಗೆ ಮಣ್ಣಿನ ಫಲವತ್ತತೆ ಕಡಿಮೆ.
4) ಜಂಬಿಟ್ಟಿಗೆ ಮಣ್ಣಿನಲ್ಲಿ ಸಾರಜನಕ & ಲವಣಗಳ ಕೊರತೆ ಕಂಡು ಬರುತ್ತದೆ.
5) ಜಂಬಿಟ್ಟಿಗೆ ಮಣ್ಣು ಭಾರತದಲ್ಲಿ ಸುಮಾರು 2.48 ಲಕ್ಷ ಚ.ಕಿ.ಮೀ. ಪ್ರದೇಶದಲ್ಲಿ ಕಂಡು ಬರುವುದು.
6) ಜಂಬಿಟ್ಟಿಗೆ ಮಣ್ಣು ಕಾಫಿ, ಟೀ ಮುಂತಾದ ತೋಟಗಾರಿಕೆ ಬೆಳೆಗಳಿಗೆ ಬಹು ಉಪಯುಕ್ತವಾಗಿದೆ.
7) ಇದು ಪಶ್ಚಿಮ ಘಟ್ಟಗಳು, ವಿಂಧ್ಯ, ಸಾತ್ಪುರ ಮತ್ತು ರಾಜಮಹಲ್ ಬೆಟ್ಟಗಳು ಹಾಗೂ ಪೂರ್ವಾಚಲ ಪ್ರದೇಶಗಳಲ್ಲಿ ವ್ಯಾಪಾಕವಾಗಿ ಹರಡಿದೆ.

**4. ಮಣ್ಣಿನ ಸವೆತ ಎಂದರೇನು? ಅದರಿಂದ ಉಂಟಾಗುವ ಸಮಸ್ಯೆಗಳು ಅಥವಾ ಪರಿಣಾಮಗಳನ್ನು ಪಟ್ಟಿಮಾಡಿ.**

ಉತ್ತರ : ಭೂಮೇಲ್ಮೈಯಲ್ಲಿ ಕಂಡು ಬರುವ ಸಡಿಲವಾದ ಪದರವು ವಿವಿಧ ಪ್ರಾಕೃತಿಕ ಶಕ್ತಿಗಳಿಂದ ಸ್ಥಳಾಂತರ ಹೊಂದುವ ಕ್ರಿಯೆಯನ್ನೇ ಮಣ್ಣಿನ ಸವೆತ ಅಥವಾ ಭೂಸವೆತ ಎಂದು ಕರೆಯುತ್ತಾರೆ.

**ಮಣ್ಣಿನ ಸವೆತದಿಂದ ಉಂಟಾಗುವ ಪರಿಣಾಮಗಳು.**

1. ನದಿಗಳಲ್ಲಿ ಹೂಳು ತುಂಬಿ ಪ್ರವಾಹ ಉಂಟಾಗುತ್ತದೆ.
2. ನದಿಗಳು ತಮ್ಮ ದಿಕ್ಕನ್ನು ಬದಲಾಯಿಸಿ ಆಸ್ತಿ ಪಾಸ್ತಿಗೆ ಹಾನಿ ಉಂಟು ಮಾಡುತ್ತವೆ.
3. ಜಲಾಶಯ ಅಥವಾ ಕೆರೆಗಳಲ್ಲಿ ಹೂಳು ತುಂಬುವದರಿಂದ ನೀರಿನ ಸಂಗ್ರಹಣಾ ಸಾಮರ್ಥ್ಯ ಕಡಿಮೆಯಾಗುವದು.
4. ಭೂಸವೆತದಿಂದ ಭೂಮಿಯಲ್ಲಿ ಇಂಗುವ ನೀರಿನ ಪ್ರಮಾಣ ಕಡಿಮೆಯಾಗುವದು.
5. ಭೂಸವೆತದಿಂದ ಭೂಮಿಯ ಫಲವತ್ತತೆ ಕಡಿಮೆಯಾಗುವದು.

ಇದು ಪಿ ಎಸ್ ಟಿ ಎಫ್ ಡಿಜಿಟಲ್ ಗ್ರೂಪ್‌ನ ಕೊಡುಗೆ

**3. ಮಣ್ಣಿನ ಸಂರಕ್ಷಣೆ ಎಂದರೇನು? ಅದರ ವಿಧಾನಗಳನ್ನು ಪಟ್ಟಿ ಮಾಡಿರಿ.**
**ಅಥವಾ**
**ಮಣ್ಣಿನ ಸವೆತವನ್ನು ಹೇಗೆ ತಡೆಗಟ್ಟುವಿರಿ?(ಎಪ್ರಿಲ್ 2015) (ಎಪ್ರಿಲ್ 2016)**

ಉತ್ತರ : ಮಣ್ಣಿನ ಸವೆತವನ್ನು ತಡೆಗಟ್ಟುವುದು ಹಾಗೂ ಅದರ ಫಲವತ್ತತೆಯನ್ನು ಕಾಪಾಡುವುದೇ 'ಮಣ್ಣಿನ ಸಂರಕ್ಷಣೆ' ಎನ್ನುವರು.

**ಮಣ್ಣಿನ ಸವೆತವನ್ನು ತಡೆಗಟ್ಟಲು ಹಲವಾರು ವಿಧಾನಗಳಿವೆ. ಅವುಗಳಲ್ಲಿ ಮುಖ್ಯವಾದವುಗಳೆಂದರೆ –**

1. ಇಳಿಜಾರಿಗೆ ಅಡ್ಡಲಾಗಿ ಉಳುಮೆ ಮಾಡುವುದು.
2. ಅಡ್ಡ ಬದುಗಳನ್ನು ನಿರ್ಮಿಸುವದು.
3. ವೈಜ್ಞಾನಿಕ ಬೇಸಾಯ ಕ್ರಮಗಳನ್ನು ಅನುಸರಿಸುವದು.
4. ಹಂತ ಹಂತವಾಗಿ ವ್ಯವಸಾಯ ಕ್ಷೇತ್ರಗಳ ನಿರ್ಮಾಣ ಮಾಡುವುದು.
5. ಅರಣ್ಯ ನಾಶವನ್ನು ತಡೆಗಟ್ಟಿ ಕಾಡನ್ನು ಬೆಳೆಸುವದು.
6. ನೀರಿನ ಸೂಕ್ತ ಬಳಕೆ ಮಾಡುವದು.
7. ಚೆಕ್ ಡ್ಯಾಮ್‌ಗಳ ನಿರ್ಮಾಣ.
8. ಪ್ರಾಣಿಗಳನ್ನು ಮೇಯಿಸುವುದನ್ನು ನಿಯಂತ್ರಿಸುವುದು

## ಅಧ್ಯಾಯ 5. ಭಾರತದ ಅರಣ್ಯಗಳು

**ಪ್ರಶ್ನೆ 1] ಬಿಟ್ಟ ಸ್ಥಳಗಳನ್ನು ಸೂಕ್ತವಾದ ಪದಗಳಿಂದ ತುಂಬಿರಿ.**

1. ಅಸ್ಸಾಂ, ಮೇಘಾಲಯಗಳಲ್ಲಿ ಕಂಡುಬರುವ ಅರಣ್ಯದ ಪ್ರಕಾರವು ________ ಅರಣ್ಯ ಆಗಿದೆ. – **ನಿತ್ಯ ಹರಿದ್ವರ್ಣ ಅರಣ್ಯ**
2. ಗಂಗಾನದಿ ಮುಖಜ ಭೂಮಿಯನ್ನು _____ ಎಂದು ಕರೆಯುತ್ತಾರೆ. – **ಸುಂದರಬನ**
3. ಸುಂದರ ಬನ ಅರಣ್ಯಗಳಲ್ಲಿ ಈ ಮರಗಳು ಹೆಚ್ಚಾಗಿ ಕಂಡುಬರುತ್ತವೆ. – **ಸುಂದರಿ ಮರಗಳು,**
4. ನದಿ ಮುಖಜ ಭೂಮಿ ಮತ್ತು ನದಿ ಅಳಿವೆಗಳ ತಗ್ಗು ಪ್ರದೇಶಗಳಲ್ಲಿ ಕಂಡುಬರುವ ಅರಣ್ಯ – **ಮ್ಯಾಂಗ್ರೋವ್ ಅರಣ್ಯಗಳು,**
5. ಹಿಮಾಲಯದಲ್ಲಿ ____ ಅರಣ್ಯಗಳು ಕಂಡುಬರುತ್ತವೆ.– **ಅಲ್ಪೈನ್ ಅರಣ್ಯಗಳು**
6. ವಿಜ್ಞಾನಿಗಳ ಅಭಿಪ್ರಾಯದ ಪ್ರಕಾರ ದೇಶದಲ್ಲಿಬೇಕಾದ ಅರಣ್ಯದ ಶೇ. ಪ್ರಮಾಣ – **ಶೇ. 33%.ರಷ್ಟು**
7. ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವು _____ ರಾಜ್ಯದಲ್ಲಿದೆ. – **ಕರ್ನಾಟಕ**
8. ಭಾರತದಲ್ಲಿ ಅತ್ಯಂತ ಹೆಚ್ಚು ಅರಣ್ಯವನ್ನು ಹೊಂದಿದ ರಾಜ್ಯ – **ಮಧ್ಯಪ್ರದೇಶ,**
9. ಭಾರತದಲ್ಲಿ ಅತ್ಯಂತ ಕಡಿಮೆ ಅರಣ್ಯವನ್ನು ಹೊಂದಿದ ರಾಜ್ಯ – **ಹರಿಯಾಣ**
10. ಭಾರತದಲ್ಲಿ ಸ್ಥಾಪಿತವಾದ ಮೊದಲ ರಾಷ್ಟ್ರೀಯ ಉದ್ಯಾನವನವೆಂದರೆ – **ಉತರಾಂಚಲದ ಜಿಮ್ ಕಾರ್ಬೆಟ್**
11. ದೇಶದಲ್ಲಿ ಪ್ರಥಮ ಜೈವಿಕ ಸಂರಕ್ಷಣಾ ವಲಯ – **ನೀಲಗಿರಿ ಸಂರಕ್ಷಣಾ ವಲಯ**
12. ಭಾರತದಲ್ಲಿ ಹೆಚ್ಚು ವಿಸ್ತಾರವಾಗಿ ವ್ಯಾಪಿಸಿರುವ ಅರಣ್ಯಗಳೆಂದರೆ – **ಎಲೆಯುದುರುವ ಮಾನ್ಸೂನ್ ಅರಣ್ಯಗಳು**
13. ಈ ಪ್ರಕಾರದ ಅರಣ್ಯದಲ್ಲಿನ ಸಸ್ಯಗಳು ಆಳವಾದ ಬೇರನ್ನು ಹೊಂದಿದ್ದು ಕುರುಚಲು ಜಾತಿಗೆ ಸೇರಿರುತ್ತವೆ. – **ಮರುಭೂಮಿ ಅರಣ್ಯಗಳು**
14. ಈ ಅರಣ್ಯಗಳಲ್ಲಿ ಎಲೆ ಮೊನಚಾದ ಸಸ್ಯಗಳು ಕಂಡು ಬರುತ್ತವೆ – **ಹಿಮಾಲಯ ಆಲ್ಪೈನ್ ಅರಣ್ಯಗಳಲ್ಲಿ**

**ಪ್ರಶ್ನೆ 2] ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

**1. ಸ್ವಾಭಾವಿಕ ಸಸ್ಯವರ್ಗ ಎಂದರೇನು?**
ಉತ್ತರ : ಒಂದು ಪ್ರದೇಶದಲ್ಲಿ ಪ್ರಕೃತಿದತ್ತವಾಗಿ ಬೆಳೆದಿರುವ ಎಲ್ಲಾ ಬಗೆಯ ಸಸ್ಯ ಸಮೂಹವನ್ನು ಅರಣ್ಯಗಳು ಅಥವಾ ಸ್ವಾಭಾವಿಕ ಸಸ್ಯವರ್ಗವೆಂದು ಕರೆಯುವರು.

**2. ಸ್ವಾಭಾವಿಕ ಸಸ್ಯವರ್ಗಗಳ ಮೇಲೆ ಪ್ರಭಾವ ಬೀರುವ ಅಂಶಗಳಾವುವು?**
ಉತ್ತರ : ಉಷ್ಣಾಂಶ, ಮಳೆ, ಭೂಸ್ವರೂಪ & ಮಣ್ಣುಗಳು ಸ್ವಾಭಾವಿಕ ಸಸ್ಯವರ್ಗಗಳ ಮೇಲೆ ಪ್ರಭಾವ ಬೀರುವ ಅಂಶಗಳಾಗಿವೆ.

**3. ಕರ್ನಾಟಕದ ರಾಷ್ಟ್ರೀಯ ಉದ್ಯಾನವನಗಳನ್ನು ಹೆಸರಿಸಿ.**
ಉತ್ತರ : ಕರ್ನಾಟಕದ ರಾಷ್ಟ್ರೀಯ ಉದ್ಯಾನವನಗಳು : ಬಂಡಿಪುರ, ನಾಗರಹೊಳೆ, ಬನ್ನೇರುಘಟ್ಟ.

**4. ಸುಂದರಬನ್ಸ ಎಂದರೇನು? ಅಥವಾ**
**ಗಂಗನದಿ ಮುಖಜ ಭೂಮಿಯಲ್ಲಿ ಮ್ಯಾಂಗ್ರೋವ್ ಅರಣ್ಯಗಳನ್ನು ಸುಂದರಬನ ಎಂದು ಕರೆಯುತ್ತಾರೆ. ಏಕೆ?**
ಉತ್ತರ : ಗಂಗಾನದಿಯ ಮುಖಜಭೂಮಿಯ ಮ್ಯಾಂಗ್ರೋವ್ ಅರಣ್ಯಗಳಲ್ಲಿ ಸುಂದರಿ ಮರಗಳು ಅಧಿಕವಾಗಿರುವದರಿಂದ ಈ ಪ್ರದೇಶವನ್ನು ಸುಂದರಬನ್ಸ ಕಾಡುಗಳು ಎಂದು ಕರೆಯುತ್ತಾರೆ.

**6. ಜೈವಿಕ ವೈವಿಧ್ಯತೆ ಎಂದರೇನು?**
ಉತ್ತರ : ಭಾರತದಲ್ಲಿ ವೈವಿಧ್ಯಮಯವಾದ ಭೂಸ್ವರೂಪ, ವಾಯುಗುಣ ಮತ್ತು ಸ್ವಾಭಾವಿಕ ಸಸ್ಯವರ್ಗಕ್ಕೆ ಅನುಗುಣವಾಗಿ ಇಲ್ಲಿನ ಪ್ರಾಣಿವರ್ಗ ಮತ್ತು ಪಕ್ಷಿಸಂಕುಲಗಳೂ ವೈವಿಧ್ಯಮಯವಾಗಿವೆ. ಆದ್ದರಿಂದ ಇದನ್ನು ಜೈವಿಕ ವೈವಿದ್ಯತೆ ಎನ್ನುತ್ತಾರೆ.

**7. ವನ್ಯ ಜೀವಿ ಧಾಮಗಳನ್ನು ಏಕೆ ಸ್ಥಾಪಿಸಲಾಗಿದೆ?**
ಉತ್ತರ : ವಿವಿಧ ಪ್ರಾಣಿಗಳನ್ನು ಅವುಗಳ ಮೂಲ ಸ್ಥಳದಲ್ಲಿಯೇ ಸಂರಕ್ಷಿಸಲು ವನ್ಯ ಜೀವಿ ಧಾಮಗಳನ್ನು ನಿರ್ಮಿಸಲಾಗಿದೆ.

**8. ಭಾರತದಲ್ಲಿ ಅರಣ್ಯ ಕ್ಷೇತ್ರ ಕ್ರಮೇಣವಾಗಿ ಇಳಿಮುಖವಾಗಿರಲು ಕಾರಣಗಳೇನು?**
**ಅಥವಾ ಅರಣ್ಯ ನಾಶಕ್ಕೆ ಮುಖ್ಯ ಕಾರಣಗಳೇನು?**
ಉತ್ತರ : ವ್ಯವಸಾಯದ ವಿಸ್ತರಣೆ, ಹೈನುಗಾರಿಕೆ, ರಸ್ತೆಗಳು, ರೈಲುಮಾರ್ಗಗಳು, ನೀರಾವರಿ ಯೋಜನೆಗಳ ನಿರ್ಮಾಣ, ಕಾಡ್ಗಿಚ್ಚು, ಗಣಿಗಾರಿಕೆ ಮುಂತಾದವುಗಳು ಅರಣ್ಯ ನಾಶಕ್ಕೆ ಮುಖ್ಯ ಕಾರಣಗಳಾಗಿವೆ.

**ಪ್ರಶ್ನೆ 3] ಈ ಕೆಳಗಿನ ಪ್ರಶ್ನೆಗಳಿಗೆ 2 – 3 ವಾಕ್ಯದಲ್ಲಿ ಉತ್ತರಿಸಿರಿ.**

**1. ನಿತ್ಯ ಹರಿದ್ವರ್ಣ ಅರಣ್ಯಗಳು ಹಾಗೂ ಮರುಭೂಮಿ ಅರಣ್ಯಗಳ ನಡುವಿನ ವ್ಯತ್ಯಾಸ ತಿಳಿಸಿ ಅಥವಾ (ಎಪ್ರಿಲ್ 2016)**
**ನಿತ್ಯ ಹರಿದ್ವರ್ಣ ಅರಣ್ಯಗಳು ಲಕ್ಷಣಗಳನ್ನು ತಿಳಿಸಿ**
**ಮರುಭೂಮಿ ಅರಣ್ಯಗಳ ಲಕ್ಷಣಗಳನ್ನು ತಿಳಿಸಿ. (ಎಪ್ರಿಲ್ 2015)**

| ನಿತ್ಯ ಹರಿದ್ವರ್ಣ ಅರಣ್ಯಗಳು | ಮರುಭೂಮಿ ಅರಣ್ಯಗಳು (ಎಪ್ರಿಲ್ 2015) |
|---|---|
| 1. ಈ ಸಸ್ಯವರ್ಗವು ವರ್ಷದಲ್ಲಿ 250 ಸೇಂ.ಮೀ.ಗಿಂತ ಹೆಚ್ಚು ಮಳೆ ಪಡೆಯುವ 900 ಮೀ.ಗಳಿಗಿಂತ ಕಡಿಮೆ ಎತ್ತರವನ್ನು ಹೊಂದಿರುವ ಪ್ರದೇಶಗಳಲ್ಲಿ ಕಂಡುಬರುತ್ತವೆ. | 1. ಮರುಭೂಮಿ ಅರಣ್ಯಗಳು ಸಾಮಾನ್ಯವಾಗಿ ವಾರ್ಷಿಕ 50 ಸೆ.ಮೀ.ಗಿಂತಲೂ ಕಡಿಮೆ ಮಳೆ ಬೀಳುವ ಪ್ರದೇಶಗಳಲ್ಲಿ ಕಂಡು ಬರುತ್ತವೆ. |
| 2. ಇಲ್ಲಿನ ಮರಗಳು ವರ್ಷವೆಲ್ಲಾ ಸದಾ ಹಸಿರಾಗಿರುತ್ತವೆ. | 2. ಈ ಸಸ್ಯವರ್ಗಗಳು ಆಳವಾಗಿ ಬೇರುಗಳನ್ನು ಹೊಂದಿದ್ದು ಕುರುಚಲು ಜಾತಿಯ ಸಸ್ಯವರ್ಗಗಳು ಮುಳ್ಳು ಕಂಟಿಗಳಿಂದ ಕೂಡಿರುತ್ತವೆ. |
| 3. ಇಲ್ಲಿನ ಮುಖ್ಯ ಮರಗಳೆಂದರೆ ಎಬೋನಿ, ಮಹಾಗನಿ, ಕರಿಮರ, ಬಿದಿರು ಮತ್ತು ರಬ್ಬರ | 3. ಓಯಾಸಿಸ್‌ಗಳಿರುವ ಕಡೆಗಳಲ್ಲಿ ಖರ್ಜೂರದ ಮರಗಳು ಸಾಮಾನ್ಯವಾಗಿ ಕಂಡುಬರುತ್ತವೆ. |
| 4. ಭಾರತದಲ್ಲಿ ಈ ಕಾಡುಗಳು ಪಶ್ಚಿಮ ಘಟ್ಟದ ಪಶ್ಚಿಮ ಭಾಗ, ಈಶಾನ್ಯ ರಾಜ್ಯಗಳು, ಅಂಡಮಾನ್ ನಿಕೋಬಾರ & ಲಕ್ಷ ದ್ವೀಪಗಳಲ್ಲಿ ಕಂಡು ಬರುತ್ತವೆ. | 4. ರಾಜಾಸ್ತಾನದ ಥಾರ್ ಮರುಭೂಮಿ ಅದಕ್ಕೆ ಹೊಂದಿಕೊಂಡ ಪಂಜಾಬ್, ಹರಿಯಾಣ ಮತ್ತು ಗುಜರಾತ್ ರಾಜ್ಯಗಳ ಕೆಲವು ಭಾಗಗಳಲ್ಲಿ ಈ ಅರಣ್ಯಗಳು ಕಂಡುಬರುತ್ತವೆ. |

**2. ಭಾರತದ ಸಸ್ಯವರ್ಗವನ್ನು ಎಷ್ಟು ವಿಧಗಳಾಗಿ ವಿಂಗಡಿಸಲಾಗಿದೆ? ಅವು ಯಾವುವು?**
ಉತ್ತರ : ಭಾರತದ ಸಸ್ಯವರ್ಗವನ್ನು ಆರು ವಿಧಗಳಾಗಿ ವಿಂಗಡಿಸಬಹುದು.

1. ಉಷ್ಣವಲಯದ ನಿತ್ಯ ಹರಿದ್ವರ್ಣ ಕಾಡುಗಳು
2. ಉಷ್ಣವಲಯದ ಎಲೆ ಉದುರುವಕಾಡುಗಳು
3. ಉಷ್ಣವಲಯದ ಮುಳ್ಳುಗಿಡಗಳು ಮತ್ತು ಪೊದೆಗಳು
4. ಮರುಭೂಮಿ ಸಸ್ಯವರ್ಗ
5. ಮ್ಯಾಂಗ್ರೋವ್ ಕಾಡುಗಳು
6. ಹಿಮಾಲಯ ಸಸ್ಯವರ್ಗ

**3. ಉಷ್ಣವಲಯದ ಹುಲ್ಲುಗಾವಲು ಅರಣ್ಯಗಳ ಲಕ್ಷಣಗಳೇನು?**
ಉತ್ತರ : **ಉಷ್ಣವಲಯದ ಹುಲ್ಲುಗಾವಲು ಅರಣ್ಯಗಳ ಲಕ್ಷಣಗಳು**

1. ಉಷ್ಣವಲಯದ ಹುಲ್ಲುಗಾವಲು ಅರಣ್ಯಗಳು ಭಾರತದಲ್ಲಿ 60 ರಿಂದ 75ಸೆಂ.ಮೀ. ಮಳೆ ಪಡೆಯುವ ಪ್ರದೇಶಗಳಲ್ಲಿ ಕಂಡು ಬರುತ್ತವೆ.
2. ಈ ಪ್ರಕಾರದ ಸಸ್ಯವರ್ಗದಲ್ಲಿ ಎತ್ತರವಾದ ಹುಲ್ಲು ಮತ್ತು ವಿರಳವಾಗಿ ಅಲ್ಲಲ್ಲಿ ಕುರುಚಲು ಜಾತಿಯ ಸಸ್ಯಗಳನ್ನು ಕಾಣಬಹುದಾಗಿದೆ.
3. ಭಾರತದಲ್ಲಿ ಈ ಪ್ರಕಾರದ ಅರಣ್ಯಗಳು ದಖನ್ ಪ್ರಸ್ಥಭೂಮಿಯ ಕೇಂದ್ರ, ಅರಾವಳಿ ಪರ್ವತಗಳ ಪಶ್ಚಿಮದಲ್ಲಿರುವ ಥಾರ್ ಮರುಭೂಮಿಯ ಅಂಚಿನಲ್ಲಿರುವ ಪ್ರದೇಶಗಳಲ್ಲಿ ಕಂಡು ಬರುತ್ತವೆ.

**4. ಮ್ಯಾಂಗ್ರೋವ್ ಅರಣಗಳ ಲಕ್ಷಣ ಮತ್ತು ಹಂಚಿಕೆಯನ್ನು ತಿಳಿಸಿ**
ಉತ್ತರ : **ಮ್ಯಾಂಗ್ರೋವ್ ಅರಣಗಳ ಲಕ್ಷಣ ಮತ್ತು ಹಂಚಿಕೆ**

1. ಮ್ಯಾನ್‌ಗ್ರೋವ್ ಅರಣ್ಯಗಳು ತೀರ ಪ್ರದೇಶಗಳ ತಗ್ಗುವಲಯಗಳು ಸಮುದ್ರದ ಉಬ್ಬರದ ಕಾಲದಲ್ಲಿ ನೀರಿನಿಂದ ಆವರಿಸಲ್ಪಡುತ್ತವೆ.

2. ಈ ಕಾಡುಗಳು ನದಿಮುಖಜ ಮತ್ತು ನದಿ ಅಳಿವೆಗಳ ತಗ್ಗು ಪ್ರದೇಶಗಳಲ್ಲಿ ಕಂಡುಬರುತ್ತವೆ.
3. ಗಂಗಾ, ಮಹಾನದಿ, ಗೋದಾವರಿ, ಕೃಷ್ಣಾನದಿ ಮುಖಜಭೂಮಿಗಳಲ್ಲಿ ಕಂಡುಬರುತ್ತವೆ.
4. ಗಂಗಾ ನದಿಮುಖಜ ಭೂಮಿಯಲ್ಲಿ ಸುಂದರಿ ಮರಗಳು ಹೇರಳವಾಗಿರುವುದರಿಂದ ಈ ಪ್ರದೇಶವನ್ನು ಸುಂದರಬನ ಎಂದು ಕರೆಯುತ್ತಾರೆ.
5. ಈ ಅರಣ್ಯಗಳ ಕ್ಷೇತ್ರ ದೇಶದಲ್ಲಿ 4.4 ಸಾವಿರ ಚ.ಕಿ.ಮೀ. ರಷ್ಟಿರುವುದು.

**5. ಹಿಮಾಲಯ ಆಲ್ಪೈನ್ ಅರಣ್ಯಗಳ ಲಕ್ಷಣಗಳನ್ನು ತಿಳಿಸಿರಿ.**

ಉತ್ತರ : **ಹಿಮಾಲಯ ಆಲ್ಪೈನ್ ಅರಣ್ಯಗಳ ಲಕ್ಷಣಗಳು**

1. ಹಿಮಾಲಯ ಪರ್ವತಗಳಲ್ಲಿ ವಿವಿಧ ಬಗೆಯ ಅರಣ್ಯಗಳು ಕಂಡುಬರುತ್ತವೆ. ಏಕೆಂದರೆ ಎತ್ತರವು ಹೆಚ್ಚಿದಂತೆ ಉಷ್ಣವಲಯದಿಂದ ಧ್ರುವ ಪ್ರದೇಶದವರೆಗಿನ ವಾಯುಗುಣಗಳನ್ನು ಈ ಪರ್ವತಗಳಲ್ಲಿ ಕಾಣಬಹುದು.
2. ವಾಯುಗುಣಕ್ಕೆ ಅನುಗುಣವಾಗಿ ವಿವಿಧ ಪ್ರಕಾರದ ಸಸ್ಯವರ್ಗಗಳು ಇಲ್ಲಿ ಕಂಡು ಬರುವುವು.
3. ಇಲ್ಲಿ ಬೆಳೆಯುವ ಮುಖ್ಯ ಮರಗಳೆಂದರೆ ಸಾಲ್, ಬೈರಾ, ಟೂನ್, ಸಿಲ್ವರ್, ಸ್ಪ್ರೂಸ್, ಲಾರೆಲ್ ಮುಂತಾದ ಎಲೆ ಮೊನಚಾದ ಅರಣ್ಯಗಳು ಪ್ರಧಾನವಾಗಿ ಬೆಳೆದಿರುತ್ತವೆ.

**ಪ್ರಶ್ನೆ 4] ಈ ಕೆಳಗಿನ ಪ್ರಶ್ನೆಗಳಿಗೆ 4 – 5 ವಾಕ್ಯದಲ್ಲಿ ಉತ್ತರಿಸಿರಿ.**

**1. ಭಾರತದಲ್ಲಿ ಎಲೆ ಉದುರುವ ಅರಣ್ಯಗಳ ಅಥವಾ ಮಾನ್ಸೂನ್ ಕಾಡುಗಳ ಲಕ್ಷಣ ಮತ್ತು ಹಂಚಿಕೆಯನ್ನು ತಿಳಿಸಿ.**

ಉತ್ತರ : **ಭಾರತದ ಎಲೆ ಉದುರುವ ಅರಣ್ಯಗಳ ಲಕ್ಷಣಗಳು & ಹಂಚಿಕೆ.**

1. ವಾರ್ಷಿಕ ಸರಾಸರಿ 75 ರಿಂದ 250 ಸೆಂ.ಮೀ. ಮಳೆ ಬೀಳುವ ಕಡೆಗಳಲ್ಲಿ ಈ ಅರಣ್ಯಗಳು ಕಂಡು ಬರುತ್ತವೆ.
2. ಇದು ಭಾರತದ ಶೇ. 65.5 ರಷ್ಟು ಒಟ್ಟು ಅರಣ್ಯದಲ್ಲಿ ಹರಡಿದೆ.
3. ಬೇಸಿಗೆಯ ಆರಂಭದಲ್ಲಿ ಈ ಮರಗಳ ಎಲೆಗಳು ಉದುರುತ್ತವೆ.
4. ಬೆಲೆ ಬಾಳುವ ತೇಗ, ಸಾಲ, ಶ್ರೀಗಂಧ ಮರಗಳು ಹೆಚ್ಚಾಗಿ ಕಂಡುಬರುತ್ತವೆ.
5. ಇವು ಪಶ್ಚಿಮ ಘಟ್ಟದ ಪೂರ್ವದ ಇಳಿಜಾರು, ಜಮ್ಮು & ಕಾಶ್ಮೀರ, ಬಂಗಾಳ, ಛತ್ತೀಸಘಡ್, ಒರಿಸ್ಸಾ, ಬಿಹಾರ & ಝಾರ್ಖಂಡ್‌ಗಳಲ್ಲಿ ಕಂಡುಬರುತ್ತವೆ.

ಪಿ ಎಸ್ ಜಿ ಎಸ್ ಎಸ್ ಟಿ ಎಫ್ ಡಿಜಿಟಲ್ ಗ್ರೂಪ್ ನ ಕೊಡುಗೆ

**2. ಅರಣ್ಯಗಳ ಪ್ರಾಮುಖ್ಯತೆಯನ್ನು ತಿಳಿಸಿ.**

ಉತ್ತರ : **ಕಾಡುಗಳ ಪ್ರಾಮುಖ್ಯತೆ**

1. ಕೈಗಾರಿಕೆಗಳಿಗೆ ಬೇಕಾದ ಕಚ್ಚಾವಸ್ತುಗಳನ್ನು, ಗಿಡಮೂಲಿಕೆಗಳು, ಪಶುಗಳಿಗೆ ಆಹಾರವನ್ನು ಒದಗಿಸುತ್ತವೆ.
2. ಕಾಡುಗಳು ತೇವಾಂಶವನ್ನು ಪೂರೈಸಿ ಉಷ್ಣಾಂಶವನ್ನು ಮಾರ್ಪಡಿಸುತ್ತವೆ.
3. ತೇವಾಂಶವುಳ್ಳ ಮಾರುತಗಳನ್ನು ತಡೆದು ಮಳೆ ಬೀಳುವದಕ್ಕೆ ನೆರವಾಗುತ್ತವೆ.
4. ಕಾಡುಗಳು ಮಣ್ಣಿನ ಸವಕಳಿಯನ್ನು ತಡೆಗಟ್ಟುತ್ತವೆ. ಹಾಗೂ ಫಲವತ್ತತೆಯನ್ನು ಹೆಚ್ಚಿಸುತ್ತವೆ.
5. ಕಾಡುಗಳು ಅನೇಕ ಪ್ರಾಣಿ ಪಕ್ಷಿಗಳಿಗೆ ಆಶ್ರಯ ನೀಡಿವೆ.
6. ಕಾಡುಗಳು ಪರಿಸರ ಸಮತೋಲನ ಕಾಯ್ದುಕೊಳ್ಳಲು ಸಹಕರಿಸುತ್ತವೆ.
7. ವನ್ಯಧಾಮಗಳನ್ನೊಂದಿದ್ದು ಪ್ರವಾಸಿಗರನ್ನು ಆಕರ್ಷಿಸುತ್ತವೆ.

**3. ದೇಶದಲ್ಲಿ ಅರಣ್ಯ ಸಂರಕ್ಷಣೆಗೆ ನಿಮ್ಮ ಸಲಹೆಯೇನು? ಅಥವಾ ಅರಣ್ಯ ಸಂರಕ್ಷಣೆ ಎಂದರೇನು? ಸಂರಕ್ಷಣಾ ವಿಧಾನಗಳನ್ನು ತಿಳಿಸಿ.**

**(ಜೂನ್ 2015)**

ಉತ್ತರ : ಅರಣ್ಯಗಳನ್ನು ಮಾನವ, ಪ್ರಾಣಿಗಳಿಂದ ಹಾಗೂ ನೈಸರ್ಗಿಕ ವಿಪತ್ತುಗಳಿಂದ ಕಾಪಾಡುವದನ್ನೇ ಅರಣ್ಯ ಸಂರಕ್ಷಣೆ ಎಂದು ಕರೆಯುವರು.

**ಅರಣ್ಯ ಸಂರಕ್ಷಣೆಗೆ ಕೈಗೊಳ್ಳಬೇಕಾದ ಕ್ರಮಗಳು**

1. ಅರಣ್ಯದ ಮರಗಳಿಗೆ ತಗುಲುವ ರೋಗಗಳನ್ನು ನಿಯಂತ್ರಿಸುವದು.
2. ಸಸಿಗಳನ್ನು ನೆಡುವದು, ಬೀಜಗಳನ್ನು ಹರಡುವದು.
3. ಕಾನೂನು ಬಾಹಿರವಾಗಿ ಮರ ಕಡಿಯುವದನ್ನು ನಿಯಂತ್ರಿಸುವದು.
4. ಸಾರ್ವಜನಿಕರನ್ನು ಮರ ನೆಡಲು ಪ್ರೋತ್ಸಾಹಿಸುವದು.
5. ಅರಣ್ಯಗಳಲ್ಲಿ ಸಾಕುಪ್ರಾಣಿಗಳನ್ನು ಮೇಯಿಸುವದನ್ನು ನಿಯಂತ್ರಿಸುವದು.
6. ಅರಣ್ಯಗಳ ಪ್ರಾಮುಖ್ಯತೆಯ ಬಗ್ಗೆ ತಿಳುವಳಿಕೆ ನೀಡಿ ರಕ್ಷಣೆಗೆ ಪ್ರೇರೇಪಿಸುವದು.
7. ಕಾಡ್ಗಿಚ್ಚು ಉಂಟುಮಾಡುವ ಘರ್ಷಿತ ಮರಗಳನ್ನು ತೆಗೆಯುವುದು.

## ಅಧ್ಯಾಯ 7 ಭೂಬಳಕೆ ಹಾಗೂ ವ್ಯವಸಾಯ

**ಪ್ರಶ್ನೆ 1] ಬಿಟ್ಟ ಸ್ಥಳಗಳನ್ನು ಸೂಕ್ತವಾದ ಪದಗಳಿಂದ ತುಂಬಿರಿ.**

1. ಅತಿ ಹೆಚ್ಚು ಹುಲ್ಲುಗಾವಲು ಪ್ರದೇಶವನ್ನು ಹೊಂದಿದ ರಾಜ್ಯ – **ಹಿಮಾಚಲಪ್ರದೇಶ**
2. ಅತ್ಯಂತ ಕಡಿಮೆ ಹುಲ್ಲುಗಾವಲು ಪ್ರದೇಶವನ್ನು ಹೊಂದಿದ ರಾಜ್ಯಗಳು – **ಪಂಜಾಬ & ಹರಿಯಾಣ**
3. ಮುಂಗಾರು ಬೇಸಾಯಕ್ಕಿರುವ ಇನ್ನೊಂದು ಹೆಸರು– **ಖರೀಫ್ ಬೇಸಾಯ**
4. ಹಿಂಗಾರು ಬೇಸಾಯಕ್ಕಿರುವ ಇನ್ನೊಂದು ಹೆಸರು – **ರಬಿ ಬೇಸಾಯ**
5. ಭಾರತದಲ್ಲಿ ಅತಿ ಹೆಚ್ಚು ಭತ್ತ ಬೆಳೆಯುವ ರಾಜ್ಯ – **ಪಶ್ಚಿಮ ಬಂಗಾಲ,**
6. ________ ಬೆಳೆಗೆ ಕೊಯ್ಲಿಗೆ ಬರುವವರೆಗೂ ಪೈರಿನ ತಳದಲ್ಲಿ ನೀರು ನಿಂತಿರಬೇಕು. – **ಭತ್ತ**
7. ಭಾರತದಲ್ಲಿ ರಬಿ (ಚಳಿಗಾಲದ) ಕಾಲದ ಮುಖ್ಯ ಬೆಳೆ – **ಗೋದಿ**
8. ____ ರಾಜ್ಯವನ್ನು ಗೋದಿಯ ಕಣಜ ಎಂದು ಕರೆಯುತ್ತಾರೆ. – **ಪಂಜಾಬ,**
10. ಅತಿ ಹೆಚ್ಚು ಗೋದಿಯನ್ನು ಬೆಳೆಯುವ ರಾಜ್ಯ – **ಉತ್ತರ ಪ್ರದೇಶ**
11. ಇವು ಮುಖ್ಯ ನಾರಿನ ಬೆಳೆಗಳಾಗಿವೆ. – **ಹತ್ತಿ ಮತ್ತು ಸಣಬು**
12. ಭಾರತದ ಮುಖ್ಯ ಪಾನೀಯ ಬೆಳೆಗಳು ____ & ___ – **ಚಹಾ & ಕಾಫಿ,**
13. ವಾಣಿಜ್ಯ ಮಾದರಿಯ ಪುಷ್ಪ ಕೃಷಿಯನ್ನು _____ ಎಂದು ಕರೆಯುವರು. – **ಫ್ಲೋರಿಕಲ್ಚರ್,**

**ಪ್ರಶ್ನೆ 2] ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

**1. ಭೂ ಬಳಕೆ ಎಂದರೇನು?**

ಉತ್ತರ : ಭೂಮಿಯನ್ನು ಸಾಗುವಳಿ, ಅರಣ್ಯ, ಹುಲ್ಲುಗಾವಲು, ಬೀಳುಭೂಮಿ & ವ್ಯವಸಾಯೇತರ ಬಳಕೆ ಹೀಗೆ ವಿವಿಧ ಉದ್ದೇಶಗಳಿಗೆ ಬಳಸುವದನ್ನೇ 'ಭೂಬಳಕೆ' ಎನ್ನುವರು.

**2. ಬೆಳೆ ಮಾದರಿ ಎಂದರೇನು?**

ಉತ್ತರ : ಯಾವುದೇ ಒಂದು ಪ್ರದೇಶವು ಒಂದು ನಿರ್ದಿಷ್ಟ ಕಾಲಾವಧಿಯಲ್ಲಿ ಹಲವಾರು ಬೆಳೆಗಳಿಂದ ಆವರಿಸಿದ್ದು, ಇವುಗಳ ಅನುಪಾತವನ್ನು ಬೆಳೆ ಮಾದರಿ ಎಂದು ಕರೆಯುವರು.

**3. ಭೂ ಬಳಕೆಯ ಮೇಲೆ ಆರ್ಥಿಕ ಅಂಶಗಳು ಪ್ರಭಾವ ಬೀರುತ್ತವೆ, ಹೇಗೆ?**

**(ಏಪ್ರಿಲ್ 2015)**

ಉತ್ತರ : ಭೂ ಬಳಕೆಯ ಮೇಲೆ ಪ್ರಭಾವ ಆರ್ಥಿಕ ಅಂಶಗಳೆಂದರೆ ಭೂ ಹಿಡುವಳಿ, ಜನಸಂಖ್ಯೆ, ಮಾರುಕಟ್ಟೆ, ವ್ಯವಸಾಯೋತ್ಪನ್ನಗಳ ಬೇಡಿಕೆ, ನೀರಾವರಿ ಲಭ್ಯತೆ, ಭೂಮಿಯ ಮೌಲ್ಯ ಇತ್ಯಾದಿ.

**4. ಬೀಳು ಭೂಮಿಯನ್ನು ವ್ಯವಸಾಯಕ್ಕೆ ಹೇಗೆ ಬಳಸಬಹುದು? (ಎಪ್ರಿಲ್ 2016)**

ಉತ್ತರ : ಬೀಳು ಭೂಮಿಯನ್ನು ತಾಂತ್ರಿಕತೆಯ ಸಹಾಯದಿಂದ ಅಭಿವೃದ್ಧಿಪಡಿಸಿ ಕೃಷಿಗೆ ಬಳಸಬಹುದಾಗಿದೆ.

**5. ವ್ಯವಸಾಯ ಎಂದರೇನು?**

ಉತ್ತರ : ಭೂಮಿಯನ್ನು ಉಳುಮೆ ಮಾಡಿ ಸಸ್ಯಗಳನ್ನು ಪೋಷಿಸಿ ಅದರಿಂದ ಮಾನವ ಮತ್ತು ಪ್ರಾಣಿಗಳಿಗೆ ಉಪಯೋಗವನ್ನು ಪಡೆಯುವದನ್ನೇ ವ್ಯವಸಾಯ ಅಥವಾ ಕೃಷಿ ಎಂದು ಕರೆಯುವರು.

**7. ಜೇಡ್ ಬೇಸಾಯ ಎಂದರೇನು?**

ಉತ್ತರ : ರಬಿ & ಖರೀಫ್ ಬೇಸಾಯದ ಅವಧಿಯನ್ನು ಹೊರತುಪಡಿಸಿ ಭಾರತದ ಹಲವು ಕಡೆ ಬೇಸಿಗೆ ಅವಧಿಯಲ್ಲಿ ಬೇಸಾಯದಲ್ಲಿ ತೊಡಗುವರು. ಬೇಸಿಗೆಯ ಈ ಬೇಸಾಯವನ್ನು ಜೇಡ್ ಬೇಸಾಯ ಎನ್ನುವರು.

**8. ಜೀವನಾಧಾರ ಬೇಸಾಯ ಎಂದರೇನು?**

ಉತ್ತರ : ರೈತರು ತಮ್ಮ ಜೀವನಕ್ಕೆ ಅವಶ್ಯಕವಿರುವ ಬೆಳೆಗಳನ್ನು ಮಾತ್ರ ಬೆಳೆಯುವದಕ್ಕೆ ಜೀವನಾಧಾರ ಬೇಸಾಯ ಎಂದು ಕರೆಯುವರು.

**9. ಜೀವನಾಧಾರ ಬೇಸಾಯದ ಎರಡು ವಿಧಗಳು ಯಾವುವು?**

ಉತ್ತರ : ಜೀವನಾಧಾರ ಬೇಸಾಯದ ಎರಡು ವಿಧಗಳು –

1. ಸ್ಥಿರ ಬೇಸಾಯ 2. ಸ್ಥಳಾಂತರ ಬೇಸಾಯ.

**10. ಮಿಶ್ರ ಬೇಸಾಯ ಎಂದರೇನು? (ಜೂನ್ 2015)**

ಉತ್ತರ : ಕೃಷಿ ಭೂಮಿಯನ್ನು ಬೆಳೆಗಳನ್ನು ಬೆಳೆಯುವುದಕ್ಕಷ್ಟೇ ಅಲ್ಲದೆ ದನಕರು ಸಾಕಾಣಿಕೆ, ಕೋಳಿ ಸಾಕಾಣಿಕೆ, ಜೇನು ಸಾಕಾಣಿಕೆ, ಹಂದಿ ಸಾಕಾಣಿಕೆ, ರೇಷ್ಮೆ ಕೃಷಿ ಮುಂತಾದ ಉದ್ದೇಶಗಳಿಗಾಗಿಯೂ ಬಳಸಲಾಗುವದು. ಇದಕ್ಕೆ ಮಿಶ್ರ ಬೇಸಾಯ ಎಂದು ಕರೆಯುವರು.

**11. ಸಾಂದ್ರ ಬೇಸಾಯ ಎಂದರೇನು?**

ಉತ್ತರ : ಒಂದು ವರ್ಷದಲ್ಲಿ ಒಂದೇ ವ್ಯವಸಾಯ ಕ್ಷೇತ್ರದಿಂದ ಎರಡು–ಮೂರು ಬೆಳೆಗಳನ್ನು ಬೆಳೆಯುವುದಕ್ಕೆ ಸಾಂದ್ರ ಬೇಸಾಯ ಎಂದು ಕರೆಯುವರು.

**12. ವಾಣಿಜ್ಯ ಬೇಸಾಯ ಎಂದರೇನು?**

ಉತ್ತರ : ವ್ಯಾಪಾರದ ಉದ್ದೇಶದ ಸಲುವಾಗಿ ಕೈಗೊಳ್ಳುವ ಬೇಸಾಯವನ್ನು ವಾಣಿಜ್ಯ ಬೇಸಾಯ ಎನ್ನುವರು.

**13. ಸುವರ್ಣ ಕ್ರಾಂತಿ ಎಂದರೇನು?**

ಉತ್ತರ : ಸರಕಾರವು ತೋಟಗಾರಿಕೆ ಬೇಸಾಯಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡಿದ್ದು, ಈ ಕ್ಷೇತ್ರವು ಅಪಾರ ಪ್ರಗತಿಯನ್ನು ಸಾಧಿಸಿದೆ. ತೋಟಗಾರಿಕೆ ಬೇಸಾಯದ ಈ ಪ್ರಗತಿಯನ್ನು ಸುವರ್ಣ ಕ್ರಾಂತಿ ಎಂದು ಕರೆಯುವರು.

**14. ವಾಯುವ್ಯ ಭಾರತದಲ್ಲಿ ಗೋದಿ ಅತಿ ಮುಖ್ಯ ಹಿಂಗಾರು ಬೆಳೆಯಾಗಿದೆ ಏಕೆ?**

**(ಜೂನ್ 2015)**

ಉತ್ತರ : ವಾಯುವ್ಯ ಭಾರತದಲ್ಲಿ ಗೋದಿ ಅತಿ ಮುಖ್ಯ ಹಿಂಗಾರು ಬೆಳೆಯಾಗಿದೆ. ಏಕೆಂದರೆ ಚಳಿಗಾಲದಲ್ಲಿ ತಂಪಾದ ಸಮಶೀತೋಷ್ಣವಾದ ತುಂತುರು ಮಳೆಯಿಂದ ಕೂಡಿರುವ ಸೂಕ್ತ ವಾಯುಗುಣವಿರುತ್ತದೆ.

**15. ಭಾರತದ ರೈತರು ಹೆಚ್ಚಾಗಿ ಜೂನ್–ಜುಲೈನಲ್ಲಿ ಬಿತ್ತನೆ ಮಾಡಿ ಅಕ್ಟೋಬರ್‌ನಲ್ಲಿ ಇಳುವರಿ ಪಡೆಯುತ್ತಾರೆ. ಏಕೆ? (ಎಪ್ರಿಲ್ 2016)**

ಉತ್ತರ : ಈ ಅವಧಿಯು ನೈರುತ್ಯ ಮಾನ್ಸೂನ್ ಮಾರುತಗಳ ಕಾಲವಾಗಿದ್ದು ಅಧಿಕ ಮಳೆ ಬೀಳುವುದರಿಂದ ವ್ಯವಸಾಯಕ್ಕೆ ಸೂಕ್ತವಾದ ಕಾಲವಾಗಿರುತ್ತದೆ. ಆದ್ದರಿಂದ ಬಹುತೇಕ ವ್ಯವಸಾಯವು ಈ ಅವಧಿಯಲ್ಲಿ ಜರುಗುತ್ತದೆ.

**ಪ್ರಶ್ನೆ 3] ಈ ಕೆಳಗಿನ ಪ್ರಶ್ನೆಗಳಿಗೆ 2 – 3 ವಾಕ್ಯದಲ್ಲಿ ಉತ್ತರಿಸಿರಿ.**

**1. ಭೂ ಬಳಕೆಯ ಮೇಲೆ ಪ್ರಭಾವ ಬೀರುವ ಅಂಶಗಳಾವುವು? ಅಥವಾ ಭೂಬಳಕೆಯ ಮೇಲೆ ಆರ್ಥಿಕ ಅಂಶಗಳು ಹೇಗೆ ಪ್ರಭಾವ ಬೀರುತ್ತವೆ?**

ಉತ್ತರ : **ಭೂ ಬಳಕೆಯ ಮೇಲೆ ಪ್ರಭಾವ ಬೀರುವ ಅಂಶಗಳು.**

1) ಭೂ ಸ್ವರೂಪಗಳು, ವಾಯುಗುಣ, ಮಣ್ಣಿನ ಲಕ್ಷಣಗಳು ಪ್ರಾಕೃತಿಕವಾಗಿ ಪ್ರಭಾವ ಬೀರುತ್ತವೆ.
2) ಭೂ ಹಿಡುವಳಿ, ಜನಸಂಖ್ಯೆ, ವ್ಯವಸಾಯೋತ್ಪನ್ನಗಳ ಬೇಡಿಕೆ, ಉದ್ಯೋಗ, ಜನರ ಮನೋಭಾವ, ಸಾಮಾಜಿಕ ಪರಿಸ್ಥಿತಿ, ಮಾರುಕಟ್ಟೆ ಮೊದಲಾದ ಅಂಶಗಳು ಪ್ರಭಾರ ಬೀರುತ್ತವೆ.
3) ತಾಂತ್ರಿಕತೆ, ನೀರಾವರಿ ಸೌಲಭ್ಯ, ಮಾನವನ ಸಾಮರ್ಥ್ಯ, ಭೂ ಒಡೆತನ ಮೊದಲಾದವು ಭೂ ಬಳಕೆಯ ಮೇಲೆ ಪ್ರಭಾವ ಬೀರುತ್ತವೆ.

**2. ಭೂ ಬಳಕೆಯ ಪ್ರಕಾರಗಳಾವುವು? ತಿಳಿಸಿ.**

ಉತ್ತರ : ಭೂ ಬಳಕೆಯ ಪ್ರಕಾರಗಳು

1) ನಿವ್ವಳ ಸಾಗುವಳಿ ಕ್ಷೇತ್ರ,
2) ಅರಣ್ಯ ಭೂಮಿ
3) ವ್ಯವಸಾಯೇತರ ಭೂ ಬಳಕೆ,
4) ಬೀಳು ಭೂಮಿ,
5) ಹುಲ್ಲುಗಾವಲು,
6) ಬಳಕೆಯಾಗದ ವ್ಯವಸಾಯ ಯೋಗ್ಯ ಭೂಮಿ.

**3. ಬೆಳೆ ಮಾದರಿಯನ್ನು ನಿರ್ಧರಿಸುವ ಅಂಶಗಳಾವುವು?**

ಉತ್ತರ : **ಬೆಳೆ ಮಾದರಿಯನ್ನು ನಿರ್ಧರಿಸುವ ಅಂಶಗಳು.**

1) ನೈಸರ್ಗಿಕ ಅಂಶಗಳಾದ ಭೂಸ್ವರೂಪ, ವಾಯುಗುಣ & ಮಳೆ.
2) ಹೆಚ್ಚು ಆರ್ಥಿಕ ಲಾಭ ನೀಡುವ ಬೇಳೆಗಳನ್ನು ಬೆಳೆಯುವುದು.
3) ರೈತರ ಮನೋಭಾವ– ಉದಾ : ಉತ್ತರ ಕರ್ನಾಟಕದಲ್ಲಿ ಜೋಳ, ದಕ್ಷಿಣ ಕರ್ನಾಟಕದಲ್ಲಿ ರಾಗಿ.
4) ನೀರಿನ ಪೂರೈಕೆ, ಸಾರಿಗೆ ಸಂಪರ್ಕ, ಮಾರುಕಟ್ಟೆ, ಸುಧಾರಿತ ತಳಿಗಳು, ರಾಸಾಯನಿಕ ಗೊಬ್ಬರ.

**4. ವ್ಯವಸಾಯದ ವಿಧಗಳು ಯಾವುವು?**

ಉತ್ತರ : ವ್ಯವಸಾಯದ ವಿಧಗಳು.

1. ಸಾಂದ್ರ ಬೇಸಾಯ
2. ಜೀವನಾಧಾರ ಬೇಸಾಯ
3. ವಾಣಿಜ್ಯ ಬೇಸಾಯ
4. ಮಿಶ್ರ ಬೇಸಾಯ
5. ತೋಟಗಾರಿಕಾ ಬೇಸಾಯ.
6. ಪುಷ್ಪ ಬೇಸಾಯ

**5. ವ್ಯವಸಾಯದ ಕಾಲಗಳಾವುವು?**

ಉತ್ತರ : ವ್ಯವಸಾಯದ ಕಾಲಗಳು

1. ಮುಂಗಾರು ಅಥವಾ ಖರೀಫ್ ಬೇಸಾಯ
2. ಹಿಂಗಾರು ಅಥವಾ ರಬಿ ಬೇಸಾಯ
3. ಬೇಸಿಗೆ ಅಥವಾ ಜೇಡ್ ಬೇಸಾಯ

**6. ಖಾರಿಫ್ ಬೇಸಾಯದ ಲಕ್ಷಣಗಳನ್ನು ತಿಳಿಸಿರಿ.**

ಉತ್ತರ : **ಖಾರಿಫ್ ಬೇಸಾಯದ ಲಕ್ಷಣಗಳು**

1. ನೈರುತ್ಯ ಮಾನ್ಸೂನ್ ಮಾರುತಗಳ ಅವಧಿಯ ಬೇಸಾಯವನ್ನು ಖಾರೀಫ್ ಬೇಸಾಯ ಎನ್ನುತ್ತಾರೆ.
2. ಜೂನ್ ಅಥವಾ ಜುಲೈ ತಿಂಗಳಲ್ಲಿ ಬಿತ್ತನೆ ಮಾಡಿ ಸೆಪ್ಟಂಬರ್ ಅಥವಾ ಅಕ್ಟೋಬರ್‌ನಲ್ಲಿ ಕಟಾವು ಮಾಡುತ್ತಾರೆ.
3. ಭಾರತದ ಹೆಚ್ಚು ಭಾಗದಲ್ಲಿ ಈ ರೀತಿಯ ಸಾಗುವಳಿ ಕಂಡು ಬರುತ್ತದೆ.
4. ಭತ್ತ, ರಾಗಿ, ಹತ್ತಿ, ಜೋಳ, ಮೆಕ್ಕೆಜೋಳ, ಎಣ್ಣೆಕಾಳುಗಳು ಈ ಅವಧಿಯಲ್ಲಿ ಬೆಳೆಯುವ ಮುಖ್ಯ ಬೆಳೆಗಳಾಗಿವೆ.

**7. ರಾಬಿ ಬೇಸಾಯದ ಲಕ್ಷಣಗಳನ್ನು ತಿಳಿಸಿರಿ.**

ಉತ್ತರ : **ರಾಬಿ ಬೇಸಾಯದ ಲಕ್ಷಣಗಳು**

1. ಭಾರತದಲ್ಲಿ ಚಳಿಗಾಲದ ಬೇಸಾಯವನ್ನು ರಾಬಿ ಬೇಸಾಯ ಎನ್ನುತ್ತಾರೆ.
2. ಅಕ್ಟೋಬರ್ ಅಥವಾ ನವಂಬರ್‌ನಲ್ಲಿ ಬಿತ್ತನೆ ಮಾಡಿ ಫೆಬ್ರವರಿ ಅಥವಾ ಮಾರ್ಚ್‌ನಲ್ಲಿ ಕಟಾವು ಮಾಡುತ್ತಾರೆ.
3. ಪಂಜಾಬ್, ಹರಿಯಾಣ, ಉತ್ತರಪ್ರದೇಶ, ಜಮ್ಮು–ಕಾಶ್ಮೀರ, ಆಂಧ್ರಪ್ರದೇಶ, ತಮಿಳುನಾಡುಗಳಲ್ಲಿ ಈ ಬೇಸಾಯ ಕಂಡು ಬರುತ್ತದೆ.
4. ವಾಯುವ್ಯ ಭಾರತದಲ್ಲಿ ಗೋಧಿ ಪ್ರಮುಖ ರಾಬಿ ಬೆಳೆಯಾಗಿದೆ

**8. ಸ್ಥಿರ ಮತ್ತು ಸ್ಥಳಾಂತರ ಬೇಸಾಯಕ್ಕಿರುವ ವ್ಯತ್ಯಾಸಗಳೇನು?**

ಉತ್ತರ :

| ಸ್ಥಿರ ಬೇಸಾಯ | ಸ್ಥಳಾಂತರ ಬೇಸಾಯ |
|---|---|
| 1. ಒಂದು ಪ್ರದೇಶದಲ್ಲಿ ಜನರು ಶಾಶ್ವತವಾಗಿ ನೆಲೆಸಿ ಬೇಸಾಯವನ್ನು ಮಾಡುವುದಕ್ಕೆ ಸ್ಥಿರ ಬೇಸಾಯ ಎನ್ನುತ್ತಾರೆ. | 1. ಕೃಷಿಗೆ ಒಳಪಡುವ ಭೂಮಿಯನ್ನು ಫಲವತ್ತತೆ ಕಡಿಮೆಯಾದಂತೆ ಆಗಿಂದಾಗ್ಗೆ ಬದಲಾಯಿಸುತ್ತಾರೆ. |
| 2. ಈ ಬೇಸಾಯವು ಸಾಂಪ್ರದಾಯಿಕ 'ವಾಗಿದ್ದು, ಚಿಕ್ಕ ಹಿಡುವಳಿಯನ್ನು ಹೊಂದಿರುತ್ತದೆ. | 2. ಈ ಕೃಷಿ ವಿಧಾನವು ಬುಡಕಟ್ಟು ಜನಾಂಗಗಳಲ್ಲಿ ಕಂಡುಬರುತ್ತಿತ್ತು. ಈಗ ಇದನ್ನು ನಿಷೇಧಿಸಲಾಗಿದೆ |

**9. ಹತ್ತಿ ಬೆಳೆ ಬೆಳೆಯಲು ಅವಶ್ಯವಿರುವ ಪೂರಕಾಂಶಗಳು ಮತ್ತು ಹಂಚಿಕೆಯನ್ನು ತಿಳಿಸಿ.**

ಉತ್ತರ : **ಹತ್ತಿ ಬೆಳೆ ಬೆಳೆಯಲು ಅವಶ್ಯವಿರುವ ಪೂರಕಾಂಶಗಳು**

1. ಹತ್ತಿಯು ಉಷ್ಣವಲಯ & ಉಪ ಉಷ್ಣವಲಯ ಬೆಳೆ.
2. ಹತ್ತಿ ಬೆಳೆಯ ಉತ್ಪಾದನೆಗೆ 20ಹ ರಿಂದ 25ಹ ಸೆಲ್ಸಿಯಸ್ ಉಷ್ಣಾಂಶ ಅವಶ್ಯಕ.
3. ಸುಮಾರು 75 ರಿಂದ 150 ಸೆಂ.ಮೀ. ಗಿಂತ ಹೆಚ್ಚು ಮಳೆ ಅವಶ್ಯಕ.
4. ತೇವಾಂಶವನ್ನು ಹಿಡಿದಿಟ್ಟುಕೊಳ್ಳುವ ಮಣ್ಣು ಇದಕ್ಕೆ ಹೆಚ್ಚು ಸೂಕ್ತ ಉದಾ : ಕಪ್ಪು ಮಣ್ಣು.
5. ಗುಜರಾತ್, ಮಹಾರಾಷ್ಟ್ರ, ಆಂದ್ರಪ್ರದೇಶ, ಹರಿಯಾಣ, ಕರ್ನಾಟಕ ಮತ್ತು ಮಧ್ಯಪ್ರದೇಶ ರಾಜ್ಯಗಳಲ್ಲಿ ಹತ್ತಿಯನ್ನು ಹೆಚ್ಚಾಗಿ ಬೆಳೆಯುತ್ತಾರೆ.

**10. ಚಹ ಬೆಳೆ ಬೆಳೆಯಲು ಅವಶ್ಯವಿರುವ ಭೌಗೋಳಿಕ ಲಕ್ಷಣ ಮತ್ತು ಹಂಚಿಕೆಯನ್ನು ತಿಳಿಸಿ**

ಉತ್ತರ : **ಚಹ ಬೆಳೆ ಬೆಳೆಯಲು ಅವಶ್ಯವಿರುವ ಭೌಗೋಳಿಕ ಲಕ್ಷಣಗಳು & ಹಂಚಿಕೆ**

1. ಚಹವು ಉಷ್ಣವಲಯ & ಉಪ ಉಷ್ಣವಲಯಗಳಲ್ಲಿ ಬೆಳೆಯುವ ನಿತ್ಯ ಹರಿದ್ವರ್ಣದ ಬಹುವಾರ್ಷಿಕ ಬೆಳೆಯಾಗಿದೆ.
2. ಚಹ ಬೆಳೆಗೆ 21ಹ ಸೆಲ್ಸಿಯಸ್ ಉಷ್ಣಾಂಶ ಅವಶ್ಯಕ.
3. 150 – 200 ಸೆಂ.ಮೀ. ಮಳೆ ಅವಶ್ಯಕ.
4. ಕೊಳೆತ ಜೈವಿಕಾಂಶವುಳ್ಳ ಹಾಗೂ ನೀರು ಬಸಿದು ಹೋಗುವಂತಹ ಮರಳು ಮಿಶ್ರಿತ ಜೇಡಿ ಮಣ್ಣು ಉತ್ತಮವಾದುದು.
5. ಆಸ್ಸಾಂ, ಪಶ್ಚಿಮ ಬಂಗಾಳ, ತಮಿಳುನಾಡು ಹಾಗೂ ಕೇರಳಗಳಲ್ಲಿ ಚಹಾದ ಬೇಸಾಯವನ್ನು ಕಾಣುತ್ತೇವೆ.

**11. ಹೊಗೆಸೊಪ್ಪು ಬೆಳೆ ಬೆಳೆಯಲು ಅವಶ್ಯವಿರುವ ಭೌಗೋಳಿಕ ಲಕ್ಷಣ & ಹಂಚಿಕೆಯನ್ನು ತಿಳಿಸಿ.**

ಉತ್ತರ : **ಹೊಗೆಸೊಪ್ಪು ಬೆಳೆ ಬೆಳೆಯಲು ಅವಶ್ಯವಿರುವ ಭೌಗೋಳಿಕ ಲಕ್ಷಣಗಳು & ಹಂಚಿಕೆ**

1. ಇದು ಉಷ್ಣವಲಯದ ಬೆಳೆಯಾಗಿದ್ದು, 21ಹ ರಿಂದ 27ಹ ಸೆಲ್ಸಿಯಸ್ ಉಷ್ಣಾಂಶ ಅವಶ್ಯಕ.
2. ಸಾಧಾರಣ ಮಳೆ ಬೀಳುವ ಪ್ರದೇಶ ಅವಶ್ಯವಿದ್ದು, ಸರಾಸರಿ 50 ಸೆಂ.ಮೀ. ಮಳೆ ಬೇಕು.
3. ಮರಳು ಮಿಶ್ರಿತ ಮಣ್ಣು & ರಾಸಾಯನಿಕ ಗೊಬ್ಬರ ಅವಶ್ಯಕ.
4. ಆಂದ್ರಪ್ರದೇಶ, ಗುಜರಾತ, ಉತ್ತರಪ್ರದೇಶ, ಕರ್ನಾಟಕ, ಬಿಹಾರ, ತಮಿಳುನಾಡು & ಮಹಾರಾಷ್ಟ್ರಗಳಲ್ಲಿ ಹೆಚ್ಚು ಹೊಗೆಸೊಪ್ಪನ್ನು ಉತ್ಪಾದಿಸುವರು.

**ಪ್ರಶ್ನೆ 4] ಈ ಕೆಳಗಿನ ಪ್ರಶ್ನೆಗಳಿಗೆ 4 – 5 ವಾಕ್ಯದಲ್ಲಿ ಉತ್ತರಿಸಿರಿ.**

**1. ವ್ಯವಸಾಯದ ಪ್ರಾಮುಖ್ಯತೆಯನ್ನು ತಿಳಿಸಿ.**

ಉತ್ತರ : **ವ್ಯವಸಾಯದ ಪ್ರಾಮುಖ್ಯತೆ.**

1) ವ್ಯವಸಾಯವು ಜನರಿಗೆ ಆಹಾರವನ್ನು & ಜಾನುವಾರುಗಳಿಗೆ ಮೇವನ್ನು ಒದಗಿಸುತ್ತದೆ.
2) ಇದು ಸಾಕಷ್ಟು ಜನರಿಗೆ ಉದ್ಯೋಗವನ್ನು ಒದಗಿಸಿ ನಿರುದ್ಯೋಗ ಸಮಸ್ಯೆಯನ್ನು ಹೋಗಲಾಡಿಸುತ್ತದೆ.
3) ಕೃಷಿ ಆಧಾರಿತ ಕೈಗಾರಿಕೆಗಳಿಗೆ ಕಚ್ಚಾವಸ್ತುಗಳನ್ನು ಒದಗಿಸುತ್ತದೆ. ಉದಾ : ಹತ್ತಿ, ಕಬ್ಬು, ಸಣಬು ಇತ್ಯಾದಿ.
4) ಕೃಷಿಯು ಹಲವಾರು ಕೈಗಾರಿಕೆಗಳನ್ನು ಪೋಷಿಸುತ್ತದೆ. ಉದಾ : ರಸಗೊಬ್ಬರ, ಕ್ರಿಮಿನಾಶಕ & ಯಂತ್ರೋಪಕರಣಗಳು.
5) ವ್ಯವಸಾಯವು ಸಾರಿಗೆ ಸಂಪರ್ಕ, ವ್ಯಾಪಾರ ಮೊದಲಾದ ಹಲವಾರು ತೃತೀಯ ಆರ್ಥಿಕ ಉದ್ಯೋಗಗಳನ್ನು ಪೋಷಿಸುತ್ತದೆ.
6) ವ್ಯವಸಾಯವು ರಾಷ್ಟ್ರೀಯ ವರಮಾನವನ್ನು ಹೆಚ್ಚಿಸುತ್ತದೆ.

ಇದು ಎಸ್ ಎಸ್ ಟಿ ಎಫ್ ಡಿಜಿಟಲ್ ಗ್ರೂಪ್ ನ ಕೊಡುಗೆ

**2. ಭತ್ತದ ಬೆಳೆ ಬೆಳೆಯಲು ಅವಶ್ಯವಿರುವ ಭೌಗೋಳಿಕ ಲಕ್ಷಣ & ಹಂಚಿಕೆ ತಿಳಿಸಿ.**

ಉತ್ತರ : **ಭತ್ತದ ಬೆಳೆ ಬೆಳೆಯಲು ಅವಶ್ಯವಿರುವ ಭೌಗೋಳಿಕ ಲಕ್ಷಣ & ಹಂಚಿಕೆ.**

1. ಭತ್ತವು ಮುಖ್ಯವಾಗಿ ಖಾರಿಫ್ ಬೆಳೆಯಾಗಿದೆ.
2. ಭತ್ತ ಬೆಳೆಯು 25ಹಸೆಲ್ಸಿಯಸ್ ಉಷ್ಣಾಂಶ ಅವಶ್ಯಕ.
3. 100 ರಿಂದ 200 ಸೆಂ.ಮೀ. ವಾರ್ಷಿಕ ಮಳೆ ಅವಶ್ಯಕ.
4. ಫಲವತ್ತಾದ ಜೇಡಿ ಮಣ್ಣು ಮತ್ತು ಮೆಕ್ಕಲು ಮಣ್ಣು ಭತ್ತದ ಬೆಳೆಗೆ ಸೂಕ್ತವಾಗಿರುತ್ತದೆ.
5. ಬೆಳೆಯು ಕೊಯ್ಲಿಗೆ ಬರುವವರೆಗೂ ಪೈರಿನ ತಳದಲ್ಲಿ ನೀರು ನಿಂತಿರಬೇಕಾದುದರಿಂದ ಸಮತಟ್ಟಾದ ಭೂಮಿ ಬೇಕಾಗುತ್ತದೆ.
6. ಪಶ್ಚಿಮ ಬಂಗಾಳ ರಾಜ್ಯವು ಅತಿ ಹೆಚ್ಚು ಭತ್ತವನ್ನು ಬೆಳೆಯುವ ರಾಜ್ಯವಾಗಿದೆ.

**3. ಗೋದಿ ಬೆಳೆ ಬೆಳೆಯಲು ಅವಶ್ಯವಿರುವ ಭೌಗೋಳಿಕ ಲಕ್ಷಣ & ಹಂಚಿಕೆ ತಿಳಿಸಿ.**

ಉತ್ತರ : **ಗೋದಿ ಬೆಳೆ ಬೆಳೆಯಲು ಅವಶ್ಯವಿರುವ ಭೌಗೋಳಿಕ ಲಕ್ಷಣ & ಹಂಚಿಕೆ.**

1. ಗೋದಿಯು ಭಾರತದ ಚಳಿಗಾಲ (ರಬಿ) ದ ಮುಖ್ಯ ಬೆಳೆಯಾಗಿದೆ.
2. ಗೋದಿ ಬೆಳೆಗೆ 10ಹಯಿಂದ 15ಹ ಸೆಲ್ಸಿಯಸ್ ಉಷ್ಣಾಂಶ ಅವಶ್ಯಕ.
3. 50 ರಿಂದ 70 ಸೆಂ.ಮೀ. ವಾರ್ಷಿಕ ಮಳೆ ಅವಶ್ಯಕ.
4. ಮರಳು ಮಿಶ್ರಿತ ಜೇಡಿಮಣ್ಣು ಮತ್ತು ಕಪ್ಪು ಮಣ್ಣಿನಲ್ಲಿ ಚೆನ್ನಾಗಿ ಗೋದಿಯು ಬೆಳೆಯುತ್ತದೆ.
5. ಉತ್ತರ ಪ್ರದೇಶವು ಗೋದಿಯ ಉತ್ಪಾದನೆಯಲ್ಲಿ ಪ್ರಥಮ ಸ್ಥಾನವನ್ನು ಪಡೆದಿದೆ.
6. ಪಂಜಾಬ್ ರಾಜ್ಯವು ಭಾರತದ ಗೋದಿಯ ಖಣಜವೆನಿಸಿದೆ.

**4. ಕಬ್ಬು ಬೆಳೆ ಬೆಳೆಯಲು ಅವಶ್ಯವಿರುವ ಭೌಗೋಳಿಕ ಲಕ್ಷಣ ಮತ್ತು ಹಂಚಿಕೆಯನ್ನು ತಿಳಿಸಿ.**

ಉತ್ತರ : **ಕಬ್ಬು ಬೆಳೆ ಬೆಳೆಯಲು ಅವಶ್ಯವಿರುವ ಭೌಗೋಳಿಕ ಲಕ್ಷಣಗಳು**

1) ಇದು ವಾರ್ಷಿಕ ಬೆಳೆಯಾಗಿದ್ದು, ನೀರಾವರಿ ಪ್ರದೇಶದಲ್ಲಿ ಬೆಳೆಯುವ ಬೆಳೆಯಾಗಿದೆ.
2) ಈ ಬೆಳೆಗೆ ಹೆಚ್ಚು ಉಷ್ಣಾಂಶ & ತೇವಾಂಶ ಹೊಂದಿರುವ ವಾಯುಗುಣ ಅವಶ್ಯಕ.
3) ಕಬ್ಬಿನ ಬೆಳೆಗೆ 21ಹ ರಿಂದ 26ಹ ಸೆಲ್ಸಿಯಸ್ ಉಷ್ಣಾಂಶ.
4) 100 ರಿಂದ 150 ಸೆಂ.ಮೀ. ವಾರ್ಷಿಕ ಮಳೆ ಅವಶ್ಯಕ.
5) ಮೆಕ್ಕಲು ಮಣ್ಣು & ಕಪ್ಪು ಮಣ್ಣಿನಲ್ಲಿ ಕಬ್ಬು ಚೆನ್ನಾಗಿ ಬೆಳೆಯುತ್ತದೆ.
6) ಉತ್ತರಪ್ರದೇಶ, ಮಹಾರಾಷ್ಟ್ರ, ತಮಿಳುನಾಡು, ಕರ್ನಾಟಕ, ಗುಜರಾತ, ಆಂಧ್ರಪ್ರದೇಶ ರಾಜ್ಯಗಳಲ್ಲಿ ಕಬ್ಬನ್ನು ಹೆಚ್ಚಾಗಿ ಬೆಳೆಯುತ್ತಾರೆ.

ಇದು ಪಿಡಿಎಫ್ ಡಿಪೋ ಗ್ರೂಪ್ ನ ಕೊಡುಗೆ

## ಅಧ್ಯಾಯ 8 ಖನಿಜ ಮತ್ತು ಶಕ್ತಿ ಸಂಪನ್ಮೂಲಗಳು

**ಪ್ರಶ್ನೆ 1] ಬಿಟ್ಟ ಸ್ಥಳಗಳನ್ನು ಸೂಕ್ತವಾದ ಪದಗಳಿಂದ ತುಂಬಿರಿ.**

1. ಕಬ್ಬಿಣದ ಮಿಶ್ರ ಲೋಹಗಳಲ್ಲಿ ಅತಿ ಮುಖ್ಯವಾದ ಮಿಶ್ರ ಲೋಹ ______ ಆಗಿದೆ. – **ಮ್ಯಾಂಗನೀಸ್**
2. ಬಾಕ್ಸೈಟ್ ಅದಿರಿನಿಂದ ________ ಲೋಹವನ್ನು ಉತ್ಪಾದಿಸುತ್ತಾರೆ. – **ಅಲ್ಯೂಮಿನಿಯಂ**
3. ಕಾಗೆ ಬಂಗಾರ ಎಂದು ಕರೆಯಲ್ಪಡುವ ಲೋಹ – **ಅಭ್ರಕ**
4. ಪ್ರಾಚೀನ ಕಾಲದಿಂದಲೂ ಪ್ರಪಂಚದಾದ್ಯಂತ ಅತ್ಯಂತ ಹೆಚ್ಚಿನ ಮೌಲ್ಯವನ್ನು ಹೊಂದಿದ ಲೋಹ – **ಚಿನ್ನ**
5. ದೇಶದಲ್ಲಿ ಅತಿ ಹೆಚ್ಚು ಚಿನ್ನವನ್ನು ಉತ್ಪಾದಿಸುವ ಗಣಿ. – **ರಾಯಚೂರು ಜಿಲ್ಲೆಯ ಹಟ್ಟಿಗಣಿ**
6. ಕರ್ನಾಟಕದ ______ ಪ್ರದೇಶದಲ್ಲಿ ಚಿನ್ನ ಎಳೆಯರೂಪದಲ್ಲಿ ದೊರೆಯುತ್ತದೆ. – **ಗದಗ ಜಿಲ್ಲೆಯ ಕಪ್ಪತಗುಡ್ಡ,**
7. ದ್ರವರೂಪದ **ಚಿನ್ನ** : ಪೇಟ್ರೋಲಿಯಂ : : ಕಪ್ಪು ವಜ್ರ : _____ – **ಕಲ್ಲಿದ್ದಲು**
8. ಪುರಾತನ ಕಾಲದಲ್ಲಿ ಪೆಟ್ರೋಲಿಯಂ ಉತ್ಪತ್ತಿಯಾದದ್ದು ಈ ಅವಶೇಷಗಳಿಂದ – **ಜೀವಿಗಳ ಅವಶೇಷಗಳಿಂದ**
9. ಭಾರತದಲ್ಲಿ ಮೊದಲು (ಸ್ವತಂತ್ರ ಪೂರ್ವದಲ್ಲಿ) ಪೆಟ್ರೋಲಿಯಂ ಪತ್ತೆಯಾದ ಸ್ಥಳ – **ಆಸ್ಸಾಂನ 'ದಿಗ್ಬಾಯಿ'**
10. ಭಾರತದ ಅತಿ ದೊಡ್ಡ ತೈಲ ನಿಕ್ಷೇಪ – **ಬಾಂಬೈ ಹೈ**
11. ಅತ್ಯಂತ ಹಗುರವಾದ ಅಣು ಖನಿಜ – **ಲಿಥಿಯಂ,**
12. **ಬೆರಿಲಿಯಂ** ಆಕ್ಸೈಡನ್ನು ಅಣುವಿದ್ಯುತ್ ಉತ್ಪಾದನೆಯ ರಿಯಾಕ್ಟರುಗಳಲ್ಲಿ ____ ಕಾರ್ಯಕ್ಕಾಗಿ ಬಳಸಲಾಗುವುದು. – **'ಮಾಡರೇಟರ್',**
13. ಭಾರತದಲ್ಲಿ ಮೊದಲ ಸೌರ ವಿದ್ಯುತ್ ಉತ್ಪಾದನಾ ಕೇಂದ್ರವನ್ನು ರಾಜಸ್ಥಾನದ ___ ನಲ್ಲಿ ಸ್ಥಾಪಿಸಲು ಯೋಜಿಸಲಾಗಿದೆ. – **ಬಾರ್‌ಮರ್**
14. ಇತ್ತೀಚಿಗೆ ಕರ್ನಾಟಕದ ________ ಜಿಲ್ಲೆಯಲ್ಲಿ ಸೌರವಿದ್ಯುತ್ ಸ್ಥಾಪಿಸಲು ಉದ್ದೇಶಿಸಲಾಗಿದೆ. – **ಚಿಕ್ಕಬಳ್ಳಾಪುರ**

**ಪ್ರಶ್ನೆ 2] ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

**1. ಖನಿಜ ಎಂದರೇನು?**

ಉತ್ತರ : ಪ್ರಕೃತಿಯಲ್ಲಿ ಸ್ವಾಭಾವಿಕವಾಗಿ ದೊರೆಯುವ ನಿರ್ದಿಷ್ಟ ರಾಸಾಯನಿಕ ಸಂಯೋಜನೆಯನ್ನು ಒಳಗೊಂಡಿರುವ ಮಿಶ್ರಣವನ್ನೇ ಖನಿಜವೆಂದು ಕರೆಯುವರು.

**2. ಕರ್ನಾಟಕದಲ್ಲಿ ಕಂಡು ಬರುವ ಕಬ್ಬಿಣ ಅದಿರಿನ ನಿಕ್ಷೇಪಗಳು ಯಾವವು?**

ಉತ್ತರ : ಕರ್ನಾಟಕದ ಕೆಮ್ಮಣ್ಣುಗುಂಡಿ, ಹೊಸಪೇಟೆ, ಸೊಂಡುರು, ಕುದುರೆಮುಖಗಳಲ್ಲಿ ಕಬ್ಬಿಣ ಅದಿರಿನ ನಿಕ್ಷೇಪಗಳಿವೆ.

**3. ಮ್ಯಾಂಗನೀಸ್ ಅದಿರನ್ನು ಒಂದು ಮಿಶ್ರ ಲೋಹವನ್ನಾಗಿ ಪರಿಗಣಿಸಲಾಗಿದೆ. ಏಕೆ?**

ಉತ್ತರ : ಮ್ಯಾಂಗನೀಸ್ ಅದಿರನ್ನು ಕಬ್ಬಿಣ & ಉಕ್ಕಿನ ಕೈಗಾರಿಕೆಯನ್ನೊಳಗೊಂಡು ಪ್ರತಿಯೊಂದು ಕೈಗಾರಿಕೆಯಲ್ಲಿ ಮಿಶ್ರಲೋಹನ್ನಾಗಿ ಬಳಸುವುದರಿಂದಾಗಿ ಇದನ್ನು ಒಂದು ಮಿಶ್ರ ಲೋಹವೆಂದು ಪರಿಗಣಿಸಲಾಗಿದೆ.

**4. ಬಾಕ್ಸೈಟನ್ನು 20 ನೇ ಶತಮಾನದ ಅದ್ಭುತ ಲೋಹವೆಂದು ಕರೆಯಲು ಕಾರಣವೇನು? (ಎಪ್ರಿಲ್ 2015)**

ಉತ್ತರ : ಬಾಕ್ಸೈಟ್ ವೈವಿದ್ಯಮಯ ಉಪಯೋಗಗಳಿಗಾಗಿ ಬಳಸಲ್ಪಡುವವದರಿಂದ ಇದನ್ನು 20 ನೇ ಶತಮಾನದ ಅದ್ಭುತ ಲೋಹವೆಂದು ಕರೆಯುತ್ತಾರೆ.

**5. ಅಭ್ರಕನಲ್ಲಿರುವ ಗುಣವಿಶೇಷತೆ ಏನು?**

ಉತ್ತರ : ಅಭ್ರಕವು ಒಳ್ಳೆಯ ಪಾರದರ್ಶಕತೆ, ಸ್ಥಿತಿ ಸ್ಥಾಪಕತ್ವ, ಶಾಖ ನಿರೋಧಕ ಹಾಗೂ ಹೊಳಮಳ್ಳ ಸಿಲಿಕೇಟ ಖನಿಜವಾಗಿದೆ.

**6. ಆಭ್ರಕವನ್ನು ಟೆಲಿಫೋನ್‌ಗಳಲ್ಲಿ ಹೆಚ್ಚಾಗಿ ಬಳಸುತ್ತಾರೆ. ಏಕೆ?**

ಉತ್ತರ : ಅಭ್ರಕವು ಶಾಖ ಮತ್ತು ವಿದ್ಯುತ್ತಿನ ಮಂದವಾಹಕವಾಗಿರುವುದರಿಂದ ಇದನ್ನು ಶಾಖ ನಿರೋಧಕ ಹಾಗೂ ವಿದ್ಯುತ್ ನಿರೋಧಕವಾಗಿ ಟೆಲಿಫೋನ್‌ಗಳಲ್ಲಿ ಹೆಚ್ಚಾಗಿ ಬಳಸುತ್ತಾರೆ.

**7. ಚಿನ್ನವನ್ನು ಒಂದು ಮೌಲ್ಯನಿರ್ಧಾರಕವನ್ನು ಪರಿಗಣಿಸಲಾಗಿದೆ. ಏಕೆ?**

ಉತ್ತರ : ಚಿನ್ನವು ಪ್ರಪಂಚದಾದ್ಯಂತ ಅತ್ಯಂತ ಹೆಚ್ಚಿನ ಮೌಲ್ಯವನ್ನು ಹೊಂದಿರುವದಿಂದಾಗಿ ಅಂತರಾಷ್ಟ್ರೀಯ ಹಣಕಾಸು ವ್ಯವಸ್ಥೆಯಲ್ಲಿ ಹಾಗೂ ಅಂತರಾಷ್ಟ್ರೀಯ ಮೌಲ್ಯ ನಿರ್ಧರಿಸುವಲ್ಲಿ ಚಿನ್ನವು ನಿರ್ಧಾರಕ ಮಾಧ್ಯಮವಾಗಿ ಬಳಸಲ್ಪಡುವುದು.

**8. ಕರ್ನಾಟಕದಲ್ಲಿ ಚಿನ್ನದ ನಿಕ್ಷೇಪಗಳು ಎಲ್ಲಿ ಕಂಡು ಬರುತ್ತವೆ?**

ಉತ್ತರ : ಕರ್ನಾಟಕದ ಕೋಲಾರ, ರಾಯಚೂರು ಜಿಲ್ಲೆಯ ಹಟ್ಟಿ, ಗದಗ ಬಳಿಯ ಕಪ್ಪತಗುಡ್ಡದಲ್ಲಿ ಬೆಣಚುಕಲ್ಲಿನ ಶಿಲಾಸ್ತರಗಳಲ್ಲಿ ಚಿನ್ನದ ನಿಕ್ಷೇಪಗಳು ಕಂಡು ಬರುತ್ತವೆ.

**9. ಭಾರತದ ಪ್ರಮುಖ ಶಕ್ತಿ ಸಂಪನ್ಮೂಲಗಳಾವವು? ವಿವರಿಸಿ.**

ಉತ್ತರ : ಮುಗಿದು ಹೋಗುವ ಶಕ್ತಿ ಸಂಪನ್ಮೂಲಗಳಲ್ಲಿ ಕಲ್ಲಿದ್ದಲು, ಪೆಟ್ರೋಲಿಯಂ, ಅಣು ಖನಿಜಗಳು ಹಾಗೂ ಮುಗಿದು ಹೋಗದೇ ಇರುವ ಶಕ್ತಿ ಸಂಪನ್ಮೂಲಗಳಲ್ಲಿ ಸೌರಶಕ್ತಿ, ಪವನ ಶಕ್ತಿ, ಜೈವಿಕ ಅನಿಲ ಶಕ್ತಿ ಮುಂತಾದವು ಭಾರತದ ಪ್ರಮುಖ ಶಕ್ತಿ ಸಂಪನ್ಮೂಲಗಳಾಗಿವೆ.

**10. ಕಲ್ಲಿದ್ದಲು ಹೇಗೆ ರಚನೆಗೊಂಡಿದೆ?**

ಉತ್ತರ : ಕೋಟ್ಯಾಂತರ ವರ್ಷಗಳ ಹಿಂದೆ ಭೂಮಿಯಲ್ಲಿ ದಟ್ಟವಾದ ಅರಣ್ಯಗಳಿಂದ ಕೂಡಿದ್ದವೆಂದೂ, ಕ್ರಮೇಣ ಇವುಗಳು ಭೂಮಿಯ ಪದರುಗಳಲ್ಲಿ ಹುದುಗಿ ಹೋಗಿ ಶಾಖ ಮತ್ತು ಒತ್ತಡದಿಂದ ಕಲ್ಲಿದ್ದಲಾಗಿ ಮಾರ್ಪಡು ಹೊಂದಿದೆಯೆಂದು ನಂಬಲಾಗಿದೆ.

**11. ಕಚ್ಚಾ ತೈಲ ಎಂದರೇನು?**

ಉತ್ತರ : ಭೂಮಿಯಿಂದ ಹೊರತೆಗೆಯುವ ಪೆಟ್ರೋಲಿಯಂ ಹಲವಾರು ಬಗೆಯ ಮಿಶ್ರಣಗಳಿಂದ ಕೂಡಿರುವುದರಿಂದ ಅದನ್ನು ಕಚ್ಚಾ ತೈಲ ಎಂದು ಕರೆಯುವರು.

**12. ಭಾರತದ ಪ್ರಮುಖ ತೈಲ ನಿಕ್ಷೇಪಗಳಾವವು?**

ಉತ್ತರ : ಅಸ್ಸಾಂನ ದಿಗ್ಬಾಯಿ, ಲಕಿಮಪುರ, ಹುಗ್ರಿಜಾನ್, ನಹರ್‌ಕಟಿಯಾ, ಗುಜರಾತ್ ರಾಜ್ಯದ ಅಂಕಲೇಶ್ವರ, ಮಹಾರಾಷ್ಟ್ರದ ಬಾಂಬೈ ಹೈ ಪ್ರದೇಶಗಳು ಭಾರತದ ಪ್ರಮುಖ ತೈಲ ನಿಕ್ಷೇಪಗಳಾಗಿವೆ.

**13. ಪೆಟ್ರೋಲಿಯನ್ನು ಶುದ್ಧೀಕರಿಸಿದಾಗ ದೊರೆಯುವ ವಸ್ತುಗಳಾವವು?**

ಉತ್ತರ : ಪೆಟ್ರೋಲಿಯನ್ನು ಶುದ್ಧೀಕರಿಸಿದಾಗ ಗ್ಯಾಸೋಲಿನ್, ಪೆಟ್ರೋಲ್, ಡಿಸೇಲ್ & ಸೀಮೆಎಣ್ಣೆ ದೊರೆಯುವವು.

**14. ಭಾರತದಲ್ಲಿ ಕಂಡು ಬರುವ ಪ್ರಮುಖ ಅಣು ಖನಿಜಗಳು ಯಾವುವು?**

ಉತ್ತರ : ಭಾರತದಲ್ಲಿ ಕಂಡುಬರುವ ಅಣು ಖನಿಜಗಳಲ್ಲಿ ಯುರೇನಿಯಂ, ಥೋರಿಯಂ, ಬೆರಿಲಿಯಂ, ಲಿಥಿಯಂ ಮುಂತಾದವುಗಳು ಪ್ರಮುಖವಾಗಿವೆ.

**15. ಅಸಂಪ್ರದಾಯಕ ಶಕ್ತಿ ಸಂಪನ್ಮೂಲಗಳೆಂದರೇನು?**

ಉತ್ತರ : ಪುನರ್ ಬಳಕೆ ಮಾಡಬಹುದಾದ ಶಕ್ತಿ ಮೂಲಗಳಾದ ಸೌರಶಕ್ತಿ, ಪವನ ಶಕ್ತಿ, ಸಾಗರ ನೀರಿನ ಉಬ್ಬರವಿಳಿತ ಶಕ್ತಿ, ಜೈವಿಕ ಅನಿಲ ಶಕ್ತಿ ಮೊದಲಾದವುಗಳನ್ನು ಅಸಂಪ್ರದಾಯಕ ಶಕ್ತಿ ಸಂಪನ್ಮೂಲಗಳೆಂದು ಕರೆಯುವರು.

**16. ಸೌರಶಕ್ತಿ ಎಂದರೇನು?**

ಉತ್ತರ : ಸೂರ್ಯನ ಕಿರಣಗಳಿಂದ ಹೊರ ಸೂಸಲ್ಪಡುವ ಶಾಖದ ಬಳಕೆಯನ್ನು ಸೌರಶಕ್ತಿ ಎಂದು ಕರೆಯುವರು.

**ಪ್ರಶ್ನೆ 3] ಈ ಕೆಳಗಿನ ಪ್ರಶ್ನೆಗಳಿಗೆ 2 – 3 ವಾಕ್ಯದಲ್ಲಿ ಉತ್ತರಿಸಿರಿ.**

**1. ಮ್ಯಾಂಗನೀಸ್ ಅದಿರಿನ ಉಪಯೋಗಗಳೇನು?**

ಉತ್ತರ : **ಮ್ಯಾಂಗನೀಸ್ ಅದಿರಿನ ಉಪಯೋಗಗಳು**

1. ಮ್ಯಾಂಗನೀಸ್ ಅದಿರನ್ನು ಉಕ್ಕಿನ ಉತ್ಪಾದನೆಯಲ್ಲಿ ಬಳಸುವರು.
2. ರಾಸಾಯನಿಕ ಮತ್ತು ವಿದ್ಯುತ್ ಉಪಕರಣಗಳ ತಯಾರಿಕೆ ಬಳಸುವರು.
3. ಬಣ್ಣದ ಗಾಜುಗಳ ತಯಾರಿಕೆಯಲ್ಲಿ ಬಳಸುವರು.

**2. ಅಭ್ರಕದ ಉಪಯೋಗಗಳನ್ನು ತಿಳಿಸಿರಿ.**

ಉತ್ತರ : **ಅಭ್ರಕದ ಉಪಯೋಗಗಳು**

1. ಅಭ್ರಕವು ಒಳ್ಳೆಯ ಪಾರದರ್ಶಕತೆ, ಸ್ಥಿತಿ ಸ್ಥಾಪಕತೆ, ಶಾಖ ನಿರೋಧಕ ಗುಣ ಹೊಂದಿರವ ಲೋಹವಾಗಿದೆ.
2. ಇದು ಶಾಖ ಮತ್ತು ವಿದ್ಯುತ್ತಿನ ಮಂದವಾಹಕವಾಗಿರುವುದರಿಂದ ಇದನ್ನು ಶಾಖ ನಿರೋಧಕ ಹಾಗೂ ವಿದ್ಯುತ್ ನಿರೋಧಕವಾಗಿ ಬಳಸುತ್ತಾರೆ.
3. ಟೆಲಿಫೋನ್, ಟೆಲಿಗ್ರಾಫ್, ನಿಸ್ತಂತು ಸೇವೆ, ಗಾಜು ತಯಾರಿಕೆ, ಬಣ್ಣ ವಾರ್ನಿಷ್, ಕೃತಕ ರಬ್ಬರ್, ಡೈನೊಮೋಗಳು, ರಾಸಾಯನಿಕ ಕೈಗಾರಿಕೆಯಲ್ಲಿ ಉಪಯೋಗಿಸಲಾಗುತ್ತದೆ.

**3. ಕಲ್ಲಿದ್ದಲಿನ ಉಪಯೋಗವನ್ನು ತಿಳಿಸಿರಿ. ಅಥವಾ**
**ಕಲ್ಲಿದ್ದಲನ್ನು ಕಪ್ಪು ಬಂಗಾರ ಎಂದು ಕರೆಯಲು ಕಾರಣವೇನು?**

ಉತ್ತರ : ಕಲ್ಲಿದ್ದಲು ಕೇವಲ ಶಕ್ತಿಯ ಖನಿಜವಾಗಿರದೇ ಕೀಟ ನಿರೋಧಕಗಳು, ಸ್ಫೋಟಕ ವಸ್ತುಗಳು, ಕೃತಕ ನಾರು, ಕೃತಕ ರಬ್ಬರ್, ಪ್ಲಾಸ್ಟಿಕ್, ರಾಸಾಯನಿಕ ಗೊಬ್ಬರ ಮುಂತಾದವುಗಳ ತಯಾರಿಕೆಯಲ್ಲಿ ಬಳಸಲಾಗುತ್ತದೆ. ಹೀಗೆ ಬಹು ಉಪಯೋಗಿ ಖನಿಜವಾದ್ದರಿಂದ ಇದನ್ನು ಕಪ್ಪು ಬಂಗಾರ ಎಂದು ಕರೆಯುತ್ತಾರೆ.

**4. ಪೆಟ್ರೋಲಿಯಂನ್ನು ದ್ರವರೂಪದ ಚಿನ್ನ ಎಂದು ಕರೆಯಲು ಕಾರಣವೇನು? (ಜೂನ್ 2015)**

ಉತ್ತರ : 1. ವ್ಯವಸಾಯ, ಕೈಗಾರಿಕೆ ಹಾಗೂ ಸಾರಿಗೆ ಕ್ಷೇತ್ರಗಳಲ್ಲಿ ಪೆಟ್ರೋಲಿಯಂ ಅಮೂಲ್ಯ ಶಕ್ತಿ ಸಂಪನ್ಮೂಲ.
2. ಇದು ಶಾಂತಿ ಹಾಗೂ ಯುದ್ಧ ಕಾಲಗಳೆರಡರಲ್ಲೂ ಅಮೂಲ್ಯವಾದದು.
3. ಆದುದರಿಂದಲೇ ಇದನ್ನು 'ದ್ರವರೂಪದ ಚಿನ್ನ' ಎಂದು ಕರೆಯಲಾಗುತ್ತದೆ.

**5. ಸೌರಶಕ್ತಿಯ ಬಗ್ಗೆ ಟಿಪ್ಪಣಿ ಬರೆಯಿರಿ.**

ಉತ್ತರ : 1. ಸೂರ್ಯನ ಕಿರಣಗಳಿಂದ ಹೊರ ಸೂಸಲ್ಪಡುವ ಶಾಖದ ಬಳಕೆಯನ್ನೇ ಸೌರಶಕ್ತಿ ಎಂದು ಕರೆಯುತ್ತಾರೆ.
2. ಇದು ಮುಗಿಯದ ಸಂಪನ್ಮೂಲವಾಗಿದ್ದು, ಸೌರಶಕ್ತಿಯನ್ನು ನೇರವಾಗಿ ಶಾಖ ಶಕ್ತಿಯನ್ನಾಗಿ ಪರಿವರ್ತಿಸಬಹುದು.
3. ಸೌರಶಕ್ತಿಯನ್ನು ಈಗಾಗಲೇ ಸೋಲಾರ್ ವಾಟರ್ ಹೀಟರ್, ಕುಕ್ಕರ್, ಸೋಲಾರ್ ಥರ್ಮಲ್, ವಿಯುತ್ ದೀಪ, ರೈಲ್ವೆ ಸಿಗ್ನಲ್, ನೀರೆತ್ತಲು ಹಾಗೂ ಸಂಪರ್ಕ ಮಾಧ್ಯಮಗಳಲ್ಲಿ ಬಳಸಿಕೊಳ್ಳಲಾಗುತ್ತಿದೆ.

**6. ಶಕ್ತಿ ಸಂಪನ್ಮೂಲಗಳ ಕೊರತೆಯನ್ನು ನಿವಾರಿಸಲು ಕೈಗೊಳ್ಳಬೇಕಾದ ಕ್ರಮಗಳಾವವು?**

ಉತ್ತರ : ಶಕ್ತಿ ಸಂಪನ್ಮೂಲಗಳ ಕೊರತೆಯನ್ನು ನಿವಾರಿಸಲು ಕೈಗೊಳ್ಳಬೇಕಾದ ಕ್ರಮಗಳು.

1. ಅಸಂಪ್ರದಾಯಕ ಶಕ್ತಿ ಸಂಪನ್ಮೂಲಗಳನ್ನು ಹೆಚ್ಚಾಗಿ ಬಳಸುವದು.
2. ಜಲವಿದ್ಯುತ್ ಉತ್ಪಾದನೆಗೆ ಪ್ರಾಮುಖ್ಯತೆ ನೀಡುವದು.
3. ನಿರುಪಯುಕ್ತ ವಸ್ತುಗಳನ್ನು ಬಳಸಿ ವಿದ್ಯುತ್ ಉತ್ಪಾದಿಸುವದು.
4. ಬದಲಿ ಸ್ಥಳೀಯ ಸಂಪನ್ಮೂಲಗಳನ್ನು ಬಳಸುವದು.
5. ಅಸಂಪ್ರದಾಯಕ ಶಕ್ತಿ ಸಂಪನ್ಮೂಲಗಳ ಬಳಕೆಗೆ ಪ್ರೋತ್ಸಾಹ ನೀಡುವುದು.
6. ಮುಗಿದು ಹೋಗುವ ಸಂಪನ್ಮೂಲಗಳನ್ನು ಮಿತವಾಗಿ ಬಳಸಲು ತಿಳುವಳಿಕೆ ನೀಡುವುದು.

**7. ಗ್ಲೋಬಲ್ ವಾರ್ಮಿಂಗ್ ಅಥವಾ ಜಾಗತೀಕ ತಾಪಮಾನ ಎಂದರೇನು?**

ಉತ್ತರ : ಪ್ರಪಂಚದಾದ್ಯಂತ ಸಾಂಪ್ರದಾಯಕ ಶಕ್ತಿ ಮೂಲಗಳ ಬಳಕೆಯಿಂದ ಹಸಿರು ಮನೆ ಪರಿಣಾಮ ಉಂಟಾಗುತ್ತಿದ್ದು, ಭೂಮಿಯ ವಾಯುಮಂಡಲದಲ್ಲಿ ಉಷ್ಣಾಂಶ ಹೆಚ್ಚಾಗುವ ಸಂಭವನೀಯತೆಯನ್ನು ಗಮನಿಸಲಾಗಿದೆ. ಇದನ್ನೇ ಗ್ಲೋಬಲ್ ವಾರ್ಮಿಂಗ್ ಎಂದು ಕರೆಯಲಾಗಿದೆ.

**8. ಅಸಂಪ್ರದಾಯಕ ಶಕ್ತಿ ಸಂಪನ್ಮೂಲಗಳ ಪ್ರಾಮುಖ್ಯತೆಯನ್ನು ವಿವರಿಸಿ.**

ಉತ್ತರ : **ಅಸಂಪ್ರದಾಯಕ ಶಕ್ತಿ ಸಂಪನ್ಮೂಲಗಳ ಪ್ರಾಮುಖ್ಯತೆ**

1. ಭಾರತದಲ್ಲಿರುವ ವಿದ್ಯುತ್ ಕೊರತೆಯನ್ನು ಹೋಗಲಾಡಿಸಲು ಅಸಂಪ್ರದಾಯಕ ಶಕ್ತಿ ಸಂಪನ್ಮೂಲಗಳು ಸಹಾಯ ಮಾಡುತ್ತವೆ.
2. ಸಾಂಪ್ರದಾಯಕ ಶಕ್ತಿ ಸಂಪನ್ಮೂಲಗಳ ಮೇಲಿನ ಅವಲಂಬನೆ(ಒತ್ತಡ)ಯನ್ನು ಅಸಂಪ್ರದಾಯಕ ಶಕ್ತಿ ಸಂಪನ್ಮೂಲಗಳು ಕಡಿಮೆ ಮಾಡುತ್ತವೆ.
3. ಅಮೂಲ್ಯವಾದ ವಿದೇಶಿ ವಿನಿಮಯವನ್ನು ಉಳಿಸಿ, ಆರ್ಥಿಕಾಭಿವೃದ್ಧಿ ಸಹಕಾರಿಯಾಗುತ್ತವೆ.
4. ಅಸಂಪ್ರದಾಯಕ ಶಕ್ತಿ ಸಂಪನ್ಮೂಲಗಳು ಪರಿಸರ ಸ್ನೇಹಿಯಾಗಿದ್ದು ಮಾಲಿನ್ಯವನ್ನು ಉಂಟು ಮಾಡುವುದಿಲ್ಲ.

**9. ಸಾಂಪ್ರದಾಯಿಕ ಶಕ್ತಿಮೂಲಗಳ ಬಳಕೆಯನ್ನು ಮಿತಿಗೊಳಿಸುವುದು ಇಂದು ಅಗತ್ಯವಾಗಿದೆ. ಏಕೆ? (ಎಪ್ರಿಲ್ 2016)**

ಉತ್ತರ : 1. ಸಾಂಪ್ರದಾಯಿಕ ಶಕ್ತಿ ಸಂಪನ್ಮೂಲಗಳು ಮುಗಿದು ಹೋಗುವ ಸಂಪನ್ಮೂಲಗಳಾಗಿವೆ.
2. ಇವುಗಳ ಅತಿಯಾದ ಬಳಕೆಯಿಂದ ಹಸಿರುಮನೆ ಪರಿಣಾಮವುಂಟಾಗುತ್ತದೆ.
3. ಇವುಗಳ ಅತಿಯಾದ ಬಳಕೆಯಿಂದ ಪರಿಸರ ಮಾಲಿನ್ಯ ಉಂಟಾಗುತ್ತದೆ.
4. ಜಾಗತಿಕ ತಾಪಮಾನ ಏರಿಕೆಯಾಗುತ್ತದೆ.
5. ಇವುಗಳನ್ನು ಮುಂದಿನ ಜನಾಂಗಕ್ಕೆ ಸಂರಕ್ಷಿಡಬೇಕಾಗಿರುವದರಿಂದ ಇವುಗಳನ್ನು ಮಿತವಾಗಿ ಬಳಸಬೇಕು.

## ಅಧ್ಯಾಯ 9 ಭಾರತದ ಸಾರಿಗೆ

**ಪ್ರಶ್ನೆ 1] ಬಿಟ್ಟ ಸ್ಥಳಗಳನ್ನು ಸೂಕ್ತವಾದ ಪದಗಳಿಂದ ತುಂಬಿರಿ.**

1. ಜಗತ್ತಿನ ಅತಿ ಎತ್ತರದ (**4267** ಮೀ. ಎತ್ತರ) ರಸ್ತೆ ಮಾರ್ಗ ____ & ___ಗಳ ನಡುವೆ ಸಂಪರ್ಕ ಕಲ್ಪಿಸುತ್ತದೆ. – **ಕುಲುಮನಾಲಿ ಮತ್ತು ಲ್ಹೇ**
2. ದೇಶದ ಅತಿ ಉದ್ದವಾದ (ದೊಡ್ಡದಾದ) ರಾಷ್ಟ್ರೀಯ ಹೆದ್ದಾರಿ :– **ವಾರಣಾಸಿ–ಕನ್ಯಾಕುಮಾರಿ**(ಒಊ 7)**(2343 ಕಿ.ಮೀ)**
3. ಸುವರ್ಣ ಚತುಷ್ಕೋನ ಯೋಜನೆಯು ಪ್ರಾರಂಭವಾದದ್ದು ಕ್ರಿ ಶ ___ರಲ್ಲಿ.– **ಕ್ರಿಶ 1999,**
4. ಕಛ್ ಖಾರಿಯ ಶಿರೋಭಾಗದಲ್ಲಿರುವ ಬಂದರು – **ಕಾಂಡ್ಲಾ ಬಂದರು**
5. ಭಾರತದ ಹೆಬ್ಬಾಗಿಲು ಎಂದು ಕರೆಯಲ್ಪಡುವ ಬಂದರು.– **ಮುಂಬಯಿ**
6. ಮುಂಬಯಿ ಬಂದರಿನ ಒತ್ತಡವನ್ನು ತಗ್ಗಿಸುವ ಉದ್ದೇಶದಿಂದ ಸ್ಥಾಪಿತವಾದ ಬಂದರು – **ನವಶೇವಾ ಬಂದರು,**
7. ಮರ್ಮಗೋವಾ ಬಂದರು ಗೋವಾ ರಾಜ್ಯದ ____ ಕೊಲ್ಲಿಯ ಪ್ರದೇಶದಲ್ಲಿದೆ.– **ಝುವಾರಿ ಕೊಲ್ಲಿ**
8. ಅತ್ಯಂತ ಹಳೆಯದಾದ ಕೃತಕ ಬಂದರು – **ಚನ್ನೈ ಬಂದರು**
9. ಭಾರತದ ಚಹದ ಬಂದರು – **ಕೋಲ್ಕತ್ತಾ ಬಂದರು**
10. ಕೊಲ್ಕತ್ತಾ ಬಂದರಿನ ಒತ್ತಡ ಕಡಿಮೆ ಮಾಡಲು ನಿರ್ಮಿಸಿರುವ ಕೃತಕ ಬಂದರು – **ಹಾಲ್ದಿಯಾ ಬಂದರು**
11. ದೆಹಲಿ :**ಇಂದಿರಾಗಾಂಧಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣ** : : ಚನ್ನೈ : – **ಅಣ್ಣಾ ಅಂತರಾಷ್ಟ್ರೀಯ ವಿಮಾನ ನಿಲ್ದಾಣ**
12. ಕೊಲ್ಕತ್ತಾ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಹೆಸರು – **ಸುಭಾಸ್‌ಚಂದ್ರ ಬೋಸ್ ವಿಮಾನ ನಿಲ್ದಾಣ**
13. ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಹೆಸರು – **ನಾಡಪ್ರಭು ಕೆಂಪೇಗೌಡ**

**ಪ್ರಶ್ನೆ 2] ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

**1. ಸಾರಿಗೆ ಎಂದರೇನು?**

**ಉತ್ತರ** : ಜನರನ್ನು & ಸರಕುಗಳನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸುವದನ್ನೇ ಸಾರಿಗೆ ಎಂದು ಕರೆಯುವರು.

**2. ಭಾರತದಲ್ಲಿರುವ ನಾಲ್ಕು ಪ್ರಕಾರದ ಸಾರಿಗೆಗಳಾವವು?**

ಉತ್ತರ : ಭಾರತದಲ್ಲಿ ಸಾರಿಗೆಯಲ್ಲಿ ಮುಖ್ಯವಾಗಿ ನಾಲ್ಕು ಪ್ರಕಾರಗಳಿವೆ.
1. ರಸ್ತೆ ಸಾರಿಗೆ, 2. ರೈಲುಸಾರಿಗೆ,
3. ವಾಯುಸಾರಿಗೆ, 4. ಜಲಸಾರಿಗೆ.

**3. ಭಾರತದಲ್ಲಿರುವ ನಾಲ್ಕು ಪ್ರಕಾರದ ರಸ್ತೆ ಸಾರಿಗೆಗಳಾವವು?**

ಉತ್ತರ : ಭಾರತದಲ್ಲಿರುವ ನಾಲ್ಕು ಪ್ರಕಾರದ ರಸ್ತೆ ಸಾರಿಗೆಗಳು.
1. ರಾಷ್ಟ್ರೀಯ ಹೆದ್ದಾರಿಗಳು 2. ರಾಜ್ಯ ಹೆದ್ದಾರಿಗಳು
3. ಜಿಲ್ಲಾ ರಸ್ತೆಗಳು 4. ಗ್ರಾಮೀಣ ರಸ್ತೆಗಳು

**4. 1989ರಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವನ್ನು ಸ್ಥಾಪಿಸಲಾಗಿದೆ. ಏಕೆ?**

ಉತ್ತರ : ರಾಷ್ಟ್ರೀಯ ಹೆದ್ದಾರಿಗಳ ನಿರ್ಮಾಣ ಮತ್ತು ನಿರ್ವಹಣೆಗಾಗಿ 1989ರಲ್ಲಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವನ್ನು ಸ್ಥಾಪಿಸಲಾಗಿದೆ.

**5. ಸುವರ್ಣ ಚತುಷ್ಕೋನ ಹೆದ್ದಾರಿಯ ವಿಶೇಷತೆ ಏನು? ಅಥವಾ**
**ಸುವರ್ಣ ಚತುಷ್ಕೋನ ಹೆದ್ದಾರಿಯು ದೇಶ ಯಾವ ಮಹಾನಗರಗಳನ್ನು ಸೇರಿಸುತ್ತದೆ?**

ಉತ್ತರ : ಸುವರ್ಣ ಚತುಷ್ಕೋನ ಹೆದ್ದಾರಿಯು ದೇಶದ ಮಹಾನಗರಗಳಾದ ದೆಹಲಿ, ಮುಂಬಯಿ, ಬೆಂಗಳೂರು, ಚನ್ನೈ, ಕೊಲ್ಕತ್ತಾ ನಗರಗಳನ್ನು ಸಂಪರ್ಕಿಸುತ್ತದೆ.

**6. ರಾಷ್ಟ್ರೀಯ ಹೆದ್ದಾರಿಗಳ ಕಾರ್ಯಗಳನ್ನು ತಿಳಿಸಿ.**

ಉತ್ತರ : ಇವು ದೇಶದ ಅತಿ ಮುಖ್ಯ ರಸ್ತೆಗಳು. ದೇಶದ ಉದ್ದಗಲಕ್ಕೂ ನಿರ್ಮಿತವಾಗಿವೆ. ರಾಜ್ಯದ ರಾಜದಾನಿಗಳು, ಪ್ರಧಾನ ಬಂದರುಗಳು ಮತ್ತು ಕೈಗಾರಿಕಾ ನಗರಗಳನ್ನು ಸಂಪರ್ಕಿಸುತ್ತವೆ.

ಇದು ಪಿಎಸ್ ಜಿ ಪಿ ಡಿ ಎಫ್ ಡಿಜಿಟಲ್ ಗ್ರಂಥದ ಕೊಡುಗೆ

**ಪ್ರಶ್ನೆ 3] ಈ ಕೆಳಗಿನ ಪ್ರಶ್ನೆಗಳಿಗೆ 4 – 5 ವಾಕ್ಯದಲ್ಲಿ ಉತ್ತರಿಸಿರಿ.**

**1. ಭಾರತದಲ್ಲಿ ರಸ್ತೆ ಸಾರಿಗೆಯ ಪ್ರಾಮುಖ್ಯತೆ ತಿಳಿಸಿರಿ.**

ಉತ್ತರ : **ಭಾರತದಲ್ಲಿ ರಸ್ತೆ ಸಾರಿಗೆಯ ಪ್ರಾಮುಖ್ಯತೆ**

1. ಭಾರತವು ಕೃಷಿ ಪ್ರಧಾನ ಮತ್ತು ಹಳ್ಳಿಗಳ ದೇಶವಾಗಿದ್ದು, ಕೃಷಿ ಹಾಗೂ ಹಳ್ಳಿಗಳ ಅಭಿವೃದ್ಧಿಗೆ ರಸ್ತೆ ಸಾರಿಗೆಯು ಅತ್ಯಗತ್ಯವಾಗಿದೆ.
2. ರೈತರು ತಾವು ಬೆಳೆದ ಉತ್ಪನ್ನಗಳನ್ನು ಮಾರುಕಟ್ಟೆಗೆ ಒಯ್ಯಲು ರಸ್ತೆ ಸಾರಿಗೆ ಅವಶ್ಯಕ.
3. ಹಳ್ಳಿಗಳಿಗೆ ಬೇಕಾದ ಅವಶ್ಯಕ ವಸ್ತುಗಳನ್ನು ಪೂರೈಸಿಕೊಳ್ಳಲು ರಸ್ತೆ ಸಾರಿಗೆ ಬೇಕು.
4. ರಸ್ತೆ ಸಾರಿಗೆಗಳು ರೈಲು ಸಾರಿಗೆಗೆ ಪೂರಕವಾಗಿವೆ.
5. ಬಾಗಿಲಿನಿಂದ ಬಾಗಿಲಿಗೆ ಸರಕುಗಳ ಸಾಗಾಣಿಕೆ ರಸ್ತೆ ಮಾರ್ಗಗಳಿಂದ ಸಾಧ್ಯವಾಗಿದೆ.
6. ಕೈಗಾರಿಕೆಗಳಿಗೆ ಕಚ್ಚಾ ವಸ್ತುಗಳನ್ನು ಮುಟ್ಟಿಸಲು & ಕೈಗಾರಿಕೆಗಳಿಂದ ಸಿದ್ಧ ವಸ್ತುಗಳನ್ನು ಮಾರುಕಟ್ಟೆಗೆ ತಲುಪಿಸಲು ರಸ್ತೆ ಸಾರಿಗೆ ಅವಶ್ಯಕ.

**2. ಸುವರ್ಣ ಚತುಷ್ಕೋನ ಯೋಜನೆ ಎಂದರೇನು? ವಿವರಿಸಿ.**

ಉತ್ತರ : 1. ಸುವರ್ಣ ಚತುಷ್ಕೋನ ಯೋಜನೆಯು ಚತುಷ್ಪತ/ಷಟ್ಪಥ ರಸ್ತೆಗಳನ್ನು ಹೊಂದಿದ 15,000 ಕಿ.ಮೀ.ಗಳಷ್ಟು ಉದ್ದವಾಗಿರುವ ರಾಷ್ಟ್ರೀಯ ಹೆದ್ದಾರಿಯಾಗಿದೆ.

2. ಈ ಯೋಜನೆಯನ್ನು 1999ರಲ್ಲಿ ಆರಂಭಿಸಿದ್ದು, ಈ ಯೋಜನೆಯ ಒಟ್ಟು ವೆಚ್ಚ 54,000 ಕೋಟಿ ರೂಪಾಯಿಗಳಾಗಿರುವುದು.

3. ಇದು ಪ್ರಪಂಚದ ಯಾವುದೇ ಒಂದು ದೇಶವು ಒಂದು ಅವಧಿಯಲ್ಲಿ ಕೈಗೊಂಡಿರುವ ರಸ್ತೆ ಅಭಿವೃದ್ಧಿ ಯೋಜನೆಗಳಿಗಿಂತ ಅತಿ ದೊಡ್ಡದಾಗಿದೆ. ಈ ಯೋಜನೆಯ ದೇಶದ ಆರ್ಥಿಕ ಅಭಿವೃದ್ಧಿಗೆ ಅಗತ್ಯವಾಗಿದೆ

4. ಸುವರ್ಣ ಚತುಷ್ಕೋನ ಹೆದ್ದಾರಿಯು ದೇಶದ ಮಹಾನಗರಗಳಾದ ದೆಹಲಿ, ಮುಂಬಯಿ, ಬೆಂಗಳೂರು, ಚೆನ್ನೈ, ಕಲ್ಕತ್ತ ನಗರಗಳನ್ನು ಸಂಪರ್ಕಿಸುತ್ತದೆ.

**3. ಕಾರಿಡಾರ್ ರಸ್ತೆಗಳು ಎಂದರೇನು? ಅವುಗಳ ಪ್ರಾಮುಖ್ಯತೆ ತಿಳಿಸಿ.**

ಉತ್ತರ : ದೇಶವನ್ನು ಉತ್ತರ ಹಾಗೂ ದಕ್ಷಿಣ ಮತ್ತು ಪೂರ್ವ ಹಾಗೂ ಪಶ್ಚಿಮವಾಗಿ ಸಂಪರ್ಕಿಸುವ ಹೆದ್ದಾರಿಗಳೇ ಕಾರಿಡಾರ್ ರಸ್ತೆಗಳಾಗಿವೆ.

**ಕಾರಿಡಾರ ಹೆದ್ದಾರಿಗಳ ಪ್ರಾಮುಖ್ಯತೆ**

1. ಕಾರಿಡಾರ್ ರಸ್ತೆಗಳು ಆರ್ಥಿಕವಾಗಿ ಮಾತ್ರವಲ್ಲದೆ ರಾಜಕೀಯವಾಗಿಯೂ ಹೆಚ್ಚು ಪ್ರಾಮುಖ್ಯತೆಯನ್ನು ಪಡೆದಿವೆ.
2. ಸರಕು ಸಾಮಗ್ರಿಗಳನ್ನು ಅತ್ಯಲ್ಪ ಅವಧಿಯಲ್ಲಿ ದೇಶದ ಒಂದು ಕಡೆಯಿಂದ ಮತ್ತೊಂದು ಕಡೆಗೆ ಅತಿ ಕಡಿಮೆ ವೆಚ್ಚದಲ್ಲಿ ಸಾಗಿಸಲು ಉಪಯುಕ್ತವಾಗಿವೆ.
3. ಈ ಯೋಜನೆಯು ಕೈಗಾರಿಕೆಗಳಿಗೆ ವರದಾನವಾಗಿದೆ.

**4. ರಸ್ತೆ ಸಾರಿಗೆಯ ತೊಡಕು (ಸಮಸ್ಯೆಗಳು) ಗಳನ್ನು ತಿಳಿಸಿರಿ. (ಎಪ್ರಿಲ್ 2015) (ಜೂನ್ 2015)**

ಉತ್ತರ : **ರಸ್ತೆ ಸಾರಿಗೆಯ ತೊಡಕುಗಳು**

1. ಅನೇಕ ಗ್ರಾಮೀಣ ರಸ್ತೆಗಳು ಮಳೆಗಾಲದಲ್ಲಿ ವಾಹನ ಸಂಚಾರಕ್ಕೆ ಅನುಪಯುಕ್ತವಾಗಿವೆ.
2. ರಸ್ತೆ ಸಾರಿಗೆಯು ಪರಿಸರ ಮಾಲಿನ್ಯ, ವಾಹನ ದಟ್ಟಣೆ ಹಾಗೂ ಅಪಘಾತಗಳಿಗೂ ಕಾರಣವಾಗಿವೆ.
3. ರಸ್ತೆಗಳು ಪ್ರತಿ ವರ್ಷ ಮಳೆ, ಪ್ರವಾಹ ಮತ್ತು ಚಂಡಮಾರುತಗಳಿಂದ ಹಾಳಾಗುತ್ತವೆ.
4. ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳ ನಿರ್ಮಾಣ & ನಿರ್ವಹಣೆಯೂ ಅಸಮರ್ಪಕವಾಗಿದೆ.
5. ರಸ್ತೆಗಳ ಬದಿಯಲ್ಲಿ ಬೇಕಾದ ಅಗತ್ಯಗಳ ಕೊರತೆಯನ್ನು ದೇಶದಾದ್ಯಂತ ಕಾಣಬಹುದು.

**5. ಭಾರತದ ಪೂರ್ವ & ಪಶ್ಚಿಮ ಕರಾವಳಿಯ ಮುಖ್ಯ ಬಂದರುಗಳನ್ನು ಹೆಸರಿಸಿ.**

ಉತ್ತರ : **ಭಾರತದ ಪೂರ್ವ ಕರಾವಳಿಯ ಬಂದರುಗಳು**

1) ಕಾಂಡ್ಲ (ಗುಜರಾತ್), ಮುಂಬಯಿ & ನವಶೇವಾ (ಮಹಾರಾಷ್ಟ್ರ), ಮರ್ಮಗೋವಾ (ಗೋವಾ), ನವಮಂಗಳೂರು (ಕರ್ನಾಟಕ), ಕೊಚ್ಚಿನ್ (ಕೇರಳ).

**ಭಾರತದ ಪೂರ್ವ ಕರಾವಳಿಯ ಬಂದರುಗಳು**

1) ತುತುಕುಡಿ & ಚೆನ್ನೈ (ತಮಿಳುನಾಡು), ವಿಶಾಖಪಟ್ಟಣ (ಆಂದ್ರಪ್ರದೇಶ), ಪಾರಾದೀಪ (ಒರಿಸ್ಸಾ), ಹಾಲ್ದಿಯಾ & ಕೊಲ್ಕತ್ತಾ (ಪಶ್ಚಿಮ ಬಂಗಾಲ).

**6. ಭಾರತದ ಅಂತರಾಷ್ಟ್ರೀಯ ವಿಮಾನ ನಿಲ್ದಾಣಗಳನ್ನು ಹೆಸರಿಸಿ.**

ಉತ್ತರ : ಭಾರತದ ಅಂತರಾಷ್ಟ್ರೀಯ ವಿಮಾನ ನಿಲ್ದಾಣಗಳು

1) ಮುಂಬಯಿಯ ಸಹರಾ ಮತ್ತು ಸಾಂತ್ರಾಕ್ರೂಜ ಅಂತರಾಷ್ಟ್ರೀಯ ವಿಮಾನ ನಿಲ್ದಾಣ.
2) ದೆಹಲಿಯ ಇಂದಿರಾಗಾಂಧಿ ಅಂತರಾಷ್ಟ್ರೀಯ ವಿಮಾನ ನಿಲ್ದಾಣ.
3) ಕೊಲ್ಕತ್ತಾದ ಸುಭಾಸ್ ಚಂದ್ರ ಬೋಸ್ ಅಂತರಾಷ್ಟ್ರೀಯ ವಿಮಾನ ನಿಲ್ದಾಣ.
4) ಚನ್ನೈಯ ಅಣ್ಣಾ ಅಂತರಾಷ್ಟ್ರೀಯ ವಿಮಾನ ನಿಲ್ದಾಣ.
5) ಬೆಂಗಳೂರಿನ ನಾಡಪ್ರಭು ಕೆಂಪೆಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣ.
6) ಹೈದ್ರಾಬಾದ್, 7) ಅಹಮದಾಬಾದ್, 8) ಪಣಜಿ, 9) ಅಮೃತಸರ್, 10) ಗುವಾಹಟಿ, 11) ತಿರುವನಂತಪುರ.

## ಅಧ್ಯಾಯ 12. ನೈಸರ್ಗಿಕ ವಿನಾಶಕಾರಕಗಳು

**ಪ್ರಶ್ನೆ 1] ಬಿಟ್ಟ ಸ್ಥಳಗಳನ್ನು ಸೂಕ್ತವಾದ ಪದಗಳಿಂದ ತುಂಬಿರಿ.**

1. ಸಾಮಾನ್ಯವಾಗಿ ಪ್ರತಿ ವರ್ಷ ತಮಿಳುನಾಡು ಮತ್ತು ಆಂಧ್ರ ಪ್ರದೇಶಗಳು ಇದರ ದಾಳಿಗೆ ತುತ್ತಾಗುತ್ತವೆ. – **ಚಂಡಮಾರುತ**
2. ಮ್ಯಾಂಗ್ರೋವ್ ಅರಣ್ಯಗಳನ್ನು ಬೆಳೆಸುವುದರಿಂದ ಇದನ್ನು ತಡೆಗಟ್ಟಬಹುದು. – **ಕಡಲುಕೊರೆತ**
3. ದಕ್ಷಿಣ ಭಾರತದ ಕೋಯ್ನಾ ಮತ್ತು ಲಾತೂರ್‌ಗಳಲ್ಲಿ ____ ಸಂಭವಿಸಿದೆ. – **ಭೂಕಂಪನ**
4. ಸಾಮಾನ್ಯವಾಗಿ ಅತಿ ಹೆಚ್ಚು ಚಂಡಮಾರುತಗಳು ಸಂಭವಿಸುವುದು ಈ ತಿಂಗಳುಗಳಲ್ಲಿ. – **ಅಕ್ಟೋಬರ್ – ನವಂಬರ್**

**ಪ್ರಶ್ನೆ 2] ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

**1. ಪ್ರಾಕೃತಿಕ ವಿನಾಶಕಾರಕಗಳು ಎಂದರೇನು?**

ಉತ್ತರ : ಪ್ರಾಕೃತಿಕವಾಗಿ ಸಂಭವಿಸುವ ಮಾನವನ ಪ್ರಾಣ, ಆಸ್ತಿ–ಪಾಸ್ತಿ ಸೇರಿದಂತೆ ನೈಸರ್ಗಿಕ ಸಂಪತ್ತುಗಳ ನಾಶಕ್ಕೆ ಕಾರಣವಾಗುವ ವಿನಾಶಕಾರಿ ಘಟನೆಗಳನ್ನು ಪ್ರಾಕೃತಿಕ ವಿನಾಶಕಾರಕಗಳೆಂದು ಕರೆಯುವರು.

**2. ಭಾರತದಲ್ಲಿ ಚಂಡಮಾರುತಗಳು ಯಾವಾಗ ಸಂಭವಿಸುತ್ತವೆ?**

ಉತ್ತರ : ಭಾರತದಲ್ಲಿ ಚಂಡಮಾರುತಗಳು ಎರಡು ಅವಧಿಯಲ್ಲಿ ಹೆಚ್ಚು ಸಂಭವಿಸುತ್ತವೆ.

1) ಅಕ್ಟೋಬರ್ – ನವಂಬರ್ ತಿಂಗಳಲ್ಲಿ ಹೆಚ್ಚು ಸಂಭವಿಸುತ್ತವೆ.
2) ಮೇ – ಜೂನ್ ತಿಂಗಳಲ್ಲಿಯೂ ಸಂಭವಿಸುತ್ತವೆ.

**3. ಪ್ರವಾಹಗಳೆಂದರೇನು?**

ಉತ್ತರ : ಅತ್ಯಧಿಕ ಮಳೆ ಸುರಿದಾಗ ಮತ್ತು ಅತ್ಯಧಿಕ ಹಿಮ ಕರಗಿದಾಗ ನದಿಗಳ ನೀರಿನ ಪ್ರಮಾಣವು ಅವುಗಳ ಸಾಮರ್ಥ್ಯಕ್ಕಿಂತಲೂ ಹೆಚ್ಚಾಗಿ ನದಿ ದಂಡೆಗಳ ಇಕ್ಕೆಲಗಳಲ್ಲಿ ಉಕ್ಕಿ ಹರಿಯುವುದು. ಇದನ್ನು ಪ್ರವಾಹ ಎನ್ನುವರು.

**4. ಭೂಕುಸಿತ ಎಂದರೇನು?**

ಉತ್ತರ : ಪರ್ವತಗಳ ಅಥವಾ ಬೆಟ್ಟಗಳ ಮೇಲ್ಭಾಗದಿಂದ ಕಡಿದಾದ ಇಳಿಜಾರಿನಗುಂಟ ಕೆಳಕ್ಕೆ ಜಾರುವ ಭೂರಾಶಿಗೆ ಭೂಕುಸಿತಗಳೆನ್ನುವರು.

**5. ಭೂಕಂಪ ಎಂದರೇನು?**

ಉತ್ತರ : ಭೂಮೇಲ್ಮೈ ಕಂಪಿಸುವುದು, ನಡುಗುವುದು ಅಥವಾ ಅಲುಗಾಡುವುದನ್ನು 'ಭೂಕಂಪ'ವೆಂದು ಕರೆಯುವರು.

**6. ಗಣಿಗಾರಿಕೆ ಪ್ರದೇಶದಲ್ಲಿ ಭೂಕುಸಿತವುಂಟಾಗಲು ಕಾರಣವೇನು? ಎಪ್ರಿಲ್ 2016**

ಉತ್ತರ : ಆಳದಲ್ಲಿರುವ ಅದಿರಿನ ನಿಕ್ಷೇಪದವರೆಗೆ ಗಣಿಗಳನ್ನು ತೆಗೆಯುವುದರಿಂದ ಭೂಮಿಯು ಸಡಿಲಗೊಂಡು ಭೂಕುಸಿತಗಳುಂಟಾಗುತ್ತವೆ.

**7. ಕಡಲ ಕೊರೆತ ಎಂದರೇನು?**

ಉತ್ತರ : ಸಮುದ್ರದ ಅಲೆಗಳು ನಿರಂತರವಾಗಿ ತೀರ ಪ್ರದೇಶಗಳಿಗೆ ಅಪ್ಪಳಿಸುತ್ತವೆ. ಇವುಗಳಿಂದ ತೀರ ಪ್ರದೇಶವು ಸವೆತಕ್ಕಿಡಾಗುತ್ತದೆ. ಇದನ್ನು ಕಡಲ ಕೊರೆತ ಎನ್ನುವರು.

**ಪ್ರಶ್ನೆ 3] ಈ ಕೆಳಗಿನ ಪ್ರಶ್ನೆಗಳಿಗೆ 2 – 3 ವಾಕ್ಯದಲ್ಲಿ ಉತ್ತರಿಸಿರಿ.**

**1. ನೈಸರ್ಗಿಕ ( ಪ್ರಾಕೃತಿಕ ) ವಿನಾಶಕಾರಕಗಳು ಯಾವುವು? (ಎಪ್ರಿಲ್ 2015)**

ಉತ್ತರ : **ನೈಸರ್ಗಿಕ ( ಪ್ರಾಕೃತಿಕ ) ವಿನಾಶಕಾರಕಗಳು**

1. ಭೂಕಂಪಗಳು, 2. ಪ್ರವಾಹಗಳು & ಕ್ಷಾಮಗಳು, 3. ಚಂಡಮಾರುತಗಳು, 4. ಭೂಕುಸಿತ, 5. ಕರಾವಳಿ ಕೊರೆತ, 6. ಹಿಮಪಾತ

**2. ಭಾರತದಲ್ಲಿ ಚಂಡ ಮಾರುತ ಉಂಟಾಗಲು ಕಾರಣವೇನು?**

ಉತ್ತರ : 1. ಭಾರತದಲ್ಲಿ ಚಂಡ ಮಾರುತಗಳ ಬಂಗಾಳ ಕೊಲ್ಲಿಯಲ್ಲಿ ಉಗಮಗೊಳ್ಳುತ್ತವೆ.

2. ಮೂರು ಕಡೆ ಭೂಭಾಗವಿದ್ದು ಭೂಮಿ ಮತ್ತು ಸಾಗರ ಭಾಗಗಳ ನಡುವಿನ ಉಷ್ಣಾಂಶ ಹಾಗೂ ಒತ್ತಡದಲ್ಲಿ ತೀವ್ರ ವ್ಯತ್ಯಾಸವಿದ್ದಾಗ ಬಂಗಾಳ ಕೊಲ್ಲಿಯಲ್ಲಿ ಚಂಡ ಮಾರುತಗಳು ಉಂಟಾಗುತ್ತವೆ.

**3. ಸಾಮಾನ್ಯವಾಗಿ ಭಾರತದ ಪೂರ್ವ ಕರಾವಳಿಯು ಚಂಡ ಮಾರುತಗಳ ದಾಳಿಗೆ ಒಳಗಾಗುತ್ತವೆ. ಏಕೆ?**

**ಕಾರಣ ಕೊಡಿ.**

ಉತ್ತರ : 1. ಭಾರತದಲ್ಲಿ ಸಾಮಾನ್ಯವಾಗಿ ಚಂಡಮಾರುತಗಳು ಅಕ್ಟೋಬರ್–ನವಂಬರ್ ತಿಂಗಳಲ್ಲಿ ಕಂಡುಬರುತ್ತವೆ.

2. ಈ ಅವಧಿಯಲ್ಲಿ ಪರ್ಯಾಯ ಪ್ರಸ್ಥಭೂಮಿ ಮತ್ತು ಸಮುದ್ರಗಳ ನಡುವಿನ ಉಷ್ಣಾಂಶ ಮತ್ತು ಒತ್ತಡದ ವ್ಯತ್ಯಾಸದಿಂದ ಬಂಗಾಳಕೊಲ್ಲಿಯಲ್ಲಿ ಚಂಡಮಾರುತಗಳು ಉಂಟಾಗುತ್ತವೆ.

3. ಬಂಗಾಳಕೊಲ್ಲಿಯಲ್ಲಿ ಉಗಮವಾಗುವ ಚಂಡಮಾರುತಗಳು ಪಶ್ಚಿಮದ ಕಡೆಗೆ ಬೀಸುವುದರಿಂದ ಭಾರತದ ಪೂರ್ವ ತೀರ ಪ್ರದೇಶಗಳಲ್ಲಿರುವ ತಮಿಳು

ನಾಡು, ಆಂಧ್ರ ಪ್ರದೇಶ ಮತ್ತು ಒರಿಸ್ಸಾಗಳು ಚಂಡ ಮಾರುತಗಳ ದಾಳಿಗೆ ಒಳಗಾಗುತ್ತವೆ.

**4. ಚಂಡಮಾರುತಗಳ ಪರಿಣಾಮಗಳಾವವು?**

ಉತ್ತರ : ಚಂಡಮಾರುತಗಳ ಪರಿಣಾಮಗಳು

1. ಇವುಗಳಿಂದ ಅಪಾರ ಸಾವು ನೋವು ಉಂಟಾಗುತ್ತದೆ.
2. ಬೆಳೆಗಳು ಸಂಪೂರ್ಣ ನಾಶವಾಗುತ್ತವೆ.
3. ಸಾರಿಗೆ ಸಂಪರ್ಕ, ವಿದ್ಯುತ್ ಸೌಕರ್ಯ, ಜನಜೀವನ ಅಸ್ತವ್ಯಸ್ತವಾಗುವದು.
4. ಒಳನಾಡಿಗೆ ಸಾಕಷ್ಟು ಮಳೆಯನ್ನು ತರುತ್ತವೆ.
5. ಸಾಗರದ ಅಲೆಗಳು ಒಳನಾಡಿಗೂ ಚಾಚಿ ಜಲರಾಶಿಗಳು ಲವಣಯುಕ್ತ ವಾಗುತ್ತವೆ.
6. ಚಂಡಮಾರುತಗಳು ನಿಂತ ನಂತರ ಸಾಂಕ್ರಾಮಿಕ ರೋಗಗಳು ಅಪಾರ ಹಾನಿಯನ್ನುಂಟು ಮಾಡುತ್ತವೆ.

**5. ಚಂಡಮಾರುತಗಳಿಂದಾಗುವ ಅನಾಹುತಗಳಿಂದ ತಪ್ಪಿಸಿಕೊಳ್ಳಲು ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳಾವುವು?**

ಉತ್ತರ : **ಚಂಡಮಾರುತಗಳ ಬಗ್ಗೆ ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳು.**

1) ಅಪಾಯಕಾರಿ ತಗ್ಗು ಪ್ರದೇಶಗಳಿಂದ ಜನರನ್ನು ಸ್ಥಳಾಂತರಿಸುವುದು.
2) ವಿದ್ಯುಜ್ಜನಕ ಯಂತ್ರಗಳು, ದೋಣಿಗಳು, ಹೆಲಿಕಾಪ್ಟರ್ ಮೊದಲಾದ ಸಾರಿಗೆಗಳನ್ನು ಸಜ್ಜಾಗಿರಿಸುವುದು.
3) ರೈಲು-ಬಸ್ಸು ಮೊದಲಾದ ಮಾರ್ಗಗಳನ್ನು ಚಂಡಮಾರುತ ಪ್ರಭಾವದ ವಲಯದಿಂದ ಬದಲಾಯಿಸುವುದು.
4) ಸಮೂಹ ಮಾಧ್ಯಮಗಳ ಮೂಲಕ ಚಂಡಮಾರುತಗಳ ಬಗ್ಗೆ ವಿವರಗಳನ್ನು ನಿರಂತರವಾಗಿ ಜನರಿಗೆ ನೀಡುವುದು.
5) ಅಗತ್ಯವಿರುವ ಸೇನಾ ತುಕಡಿಗಳನ್ನು ಸಿದ್ಧಗೊಳಿಸಿಡುವುದು.
6) ಸಾಕಷ್ಟು ಸಿಹಿನೀರು ಹಾಗೂ ಉಡುಪುಗಳನ್ನು ಸಂಗ್ರಹಿಸಿಡುವುದು.
7) ಔಷಧ ಹಾಗೂ ಇತರ ವೈದ್ಯಕೀಯ ನೆರವಿಗಾಗಿ ಸಿದ್ಧರಾಗಿರುವುದು.

**6. ಪ್ರವಾಹಗಳುಂಟಾಗಲು ಕಾರಣಗಳೇನು?**

ಉತ್ತರ : **ಪ್ರವಾಹಗಳುಂಟಾಗಲು ಕಾರಣಗಳು**

1. ಕೆಲವು ವೇಳೆ ಅತ್ಯಧಿಕ ಮಳೆ ಬೀಳುವದರಿಂದ ಪ್ರವಾಹಗಳುಂಟಾಗುತ್ತವೆ.
2. ನದಿಯ ಪಾತ್ರಗಳಲ್ಲಿ ಹೂಳು ತುಂಬಿ ನೀರು ಇಕ್ಕೆಲಗಳಲ್ಲಿಯೂ ಹರಿದು ಪ್ರವಾಹಗಳು ಉಂಟಾಗುತ್ತವೆ.
3. ಸಮುದ್ರದ ಮಧ್ಯೆ ಭೂಕಂಪನಗಳು ಸಂಭವಿಸುವುದರಿಂದಲೂ ಪ್ರವಾಹಗಳುಂಟಾಗುತ್ತವೆ.
4. ಆಣೆಕಟ್ಟು ಹಾಗೂ ಇತರೆ ಅಡ್ಡಕಟ್ಟೆಗಳು ಒಡೆದು ಒಮ್ಮೆಲೇ ಬಿಡುಗಡೆಯಾಗುವ ನೀರಿನಿಂದ ಪ್ರವಾಹಗಳು ಉಂಟಾಗುತ್ತವೆ.
5. ನದಿಗಳು ಪಾತ್ರವನ್ನು ಬದಲಾಯಿಸುವುದರಿಂದಲೂ ಪ್ರವಾಹಗಳು ಉಂಟಾಗುತ್ತವೆ.
6. ಚಂಡಮಾರುತಗಳು ಅಪಾರ ಮಳೆ ಬೀಳುವುದೂ ಸಹ ಪ್ರವಾಹಗಳಿಗೆ ಕಾರಣವಾಗುವುದು.

**7. ಪ್ರವಾಹಗಳಿಂದುಂಟಾಗುವ ಪರಿಣಾಮಗಳೇನು?**

ಉತ್ತರ : **ಪ್ರವಾಹಗಳಿಂದಾಗುವ ಪರಿಣಾಮಗಳು**

1. ಪ್ರವಾಹಗಳು ಜನರ ಆಸ್ತಿ-ಪಾಸ್ತಿ, ಮನೆ, ಭೂಮಿ ಮತ್ತು ಬೆಳೆಗಳನ್ನು ಹಾನಿಗೀಡುಮಾಡುತ್ತವೆ.
2. ದೂರ ಸಂಪರ್ಕ, ವಿದ್ಯುತ್ ಪೂರೈಕೆ, ಸಾರಿಗೆ ಸೌಲಭ್ಯ ಮುಂತಾದವುಗಳು ಅಸ್ತ-ವ್ಯಸ್ತಗೊಳ್ಳುತ್ತವೆ.
3. ಪ್ರವಾಹಗಳ ಪರಿಣಾಮದಿಂದ ಫಲವತ್ತಾದ ಮಣ್ಣಿನ ಮೇಲ್ಭಾಗವು ಕೊಚ್ಚಿ ಹೋಗುತ್ತದೆ. ಹಾಗೂ ಅನೇಕ ಗಿಡಮರಗಳು ಹಾನಿಗೊಳಗಾಗುತ್ತವೆ.
4. ಪ್ರವಾಹಗಳಿಂದ ವಿಶಾಲವಾಗಿ ಹರಡಿದ ನೀರು ಅನೇಕ ರೋಗಗಳ ಹರಡುವಿಕೆಗೆ ಕಾರಣವಾಗುತ್ತದೆ.

**8. ಪ್ರವಾಹ ತಡೆಗಟ್ಟಲು ಕೈಗೊಳ್ಳಬೇಕಾದ ಕ್ರಮಗಳೇನು?**

ಉತ್ತರ : **ಪ್ರವಾಹ ತಡೆಗಟ್ಟಲು ಕೈಗೊಳ್ಳಬೇಕಾದ ಕ್ರಮಗಳು**

1. ಜಲಾನಯನ ಪ್ರದೇಶದಲ್ಲಿ ಅರಣ್ಯಗಳನ್ನು ಬೆಳೆಸುವದು.
2. ನದಿಗಳಿಗೆ ಆಣೆಕಟ್ಟುಗಳನ್ನು ಕಟ್ಟಿ ಜಲಾಶಯಗಳಲ್ಲಿ ನೀರನ್ನು ಸಂಗ್ರಹಿಸಿ ಇತರ ಕಡೆಗಳಿಗೆ ನೀರನ್ನು ಹರಿಸುವದು.
3. ನದಿಗಳ ಇಕ್ಕೆಲಗಳಲ್ಲಿ ಅಡ್ಡಗಟ್ಟೆಗಳನ್ನು ನಿರ್ಮಿಸುವುದು.
4. ಪ್ರವಾಹಗಳ ಮುನ್ಸೂಚನೆಯನ್ನು ನೀಡಲು ಕೇಂದ್ರಗಳನ್ನು ಸ್ಥಾಪಿಸುವುದು.

**9. ಭೂ ಕುಸಿತಕ್ಕೆ ಕಾರಣಗಳಾವುವು? (ಜೂನ್ 2015)**

**ಉತ್ತರ : ಭೂ ಕುಸಿತಕ್ಕೆ ಕಾರಣಗಳು**

1. ಸಮುದ್ರದ ಅಲೆಗಳಿಂದ ಕಡಲತೀರ ಕೊರೆತಕ್ಕಿಡಾಗುವದರಿಂದ.
2. ಕಡಿದಾದ ಪರ್ವತ ಪ್ರದೇಶಗಳಲ್ಲಿ ರಸ್ತೆ, ರೈಲು ಮಾರ್ಗ, ಕಾಲುವೆ ನಿರ್ಮಿಸುವದರಿಂದ.
3. ಆಳವಾದ ಗಣಿಗಾರಿಕೆ ಮಾಡುವುದರಿಂದ.
4. ಕಡಿದಾದ ಇಳಿಜಾರನ್ನು ಆಳವಾಗಿ ಉಳುಮೆ ಮಾಡುವುದರಿಂದ.
5. ಅರಣ್ಯಗಳನ್ನು ಅತಿಯಾಗಿ ಕಡಿಯುವದರಿಂದ.

**10. ಭೂಕುಸಿದ ಪರಿಣಾಮಗಳೇನು?**

ಉತ್ತರ : **ಭೂಕುಸಿತದ ಪರಿಣಾಮಗಳು**

1. ಸಾರಿಗೆ ಸಂಚಾರಕ್ಕೆ ಅಡ್ಡಿ ಉಂಟಾಗುತ್ತದೆ.
2. ಜೀವಹಾನಿ ಮತ್ತು ಆಸ್ತಿ ಹಾನಿಯನ್ನುಂಟು ಮಾಡುತ್ತವೆ.
3. ಭೂಕುಸಿತದಿಂದ ಅನೇಕ ಚಿಕ್ಕ ನದಿಗಳು ಹರಿಯುವದಕ್ಕೆ ಅಡ್ಡಿ ಉಂಟಾಗುತ್ತದೆ.
4. ಹಳ್ಳಗಳು ಮತ್ತು ಅನೇಕ ಸಸ್ಯವರ್ಗಗಳು ಭೂಗತವಾಗುತ್ತವೆ.

**11. ಕಡಲ ಕೊರೆತದ ನಿರ್ವಹಣೆಯನ್ನು ತಿಳಿಸಿ. ಅಥವಾ ಕಡಲ ಕೊರೆತವನ್ನು ಹೇಗೆ ತಡೆಗಟ್ಟಬಹುದು?**

ಉತ್ತರ : **ಕಡಲ ಕೊರೆತದ ನಿರ್ವಹಣೆ**

1. ತೀರ ಪ್ರದೇಶದಲ್ಲಿ ಮರಳು ತೆಗೆಯುವದನ್ನು ನಿಯಂತ್ರಿಸುವದು.
2. ತೀರ ಪ್ರದೇಶದುದ್ದಕ್ಕೂ ಅಲೆಗಳು ಪ್ರಭಲವಾಗಿರುವ ಕಡೆ ತಡೆಗೋಡೆಯನ್ನು ನಿರ್ಮಿಸುವದು.
3. ತೀರದುದ್ದಕ್ಕೂ ಮ್ಯಾಂಗ್ರೋವ್ ಅರಣ್ಯಗಳನ್ನು ಬೆಳೆಸಲು ಕಾರ್ಯಕ್ರಮ ರೂಪಿಸುವದು ಅತ್ಯಂತ ಪರಿಣಾಮಕಾರಿ.

**12. ಕಡಲ ಕೊರೆತದಿಂದಾಗುವ ಪರಿಣಾಮಗಳೇನು?**

ಉತ್ತರ : **ಕಡಲ ಕೊರೆತದಿಂದಾಗುವ ಪರಿಣಾಮಗಳು**

1. ಅಲೆಗಳು ತೀರ ಸವೆಸುವುದರಿಂದ ಅಪಾರ ಭೂ ಪ್ರದೇಶ ಸಮುದ್ರದ ಪಾಲಾಗುವುದು.
2. ಮನೆ, ರಸ್ತೆ ಮೊದಲಾದವು ಮುಳುಗಿ ಅಪಾರ ನಷ್ಟವುಂಟಾಗುವುದು.

**13. ಪಶ್ಚಿಮ ಕರಾವಳಿಗಿಂತ ಪೂರ್ವ ಕರಾವಳಿಯಲ್ಲಿ ಕಡಲ ಕೊರೆತ ಕಡಿಮೆ ಏಕೆ?**

ಉತ್ತರ : 1. ಪಶ್ಚಿಮ ಕರಾವಳಿಗಿಂತ ಪೂರ್ವ ಕರಾವಳಿಯಲ್ಲಿ ಕಡಲ ಕೊರೆತ ಕಡಿಮೆ.

2. ಏಕೆಂದರೆ ಈಶಾನ್ಯ ಮಾನ್ಸೂನ್ ಮಾರುತಗಳು ನೈರುತ್ಯ ಮಾನ್ಸೂನ್‌ಗಳಷ್ಟು ಪ್ರಬಲವಾಗಿರುವುದಿಲ್ಲ.
3. ಅಲ್ಲದೆ ಪೂರ್ವದ ಬಂಗಾಳ ಕೊಲ್ಲಿಯು ಮೂರು ಕಡೆ ಭೂರಾಶಿಯಿಂದ ಕೂಡಿರುವ ಕೊಲ್ಲಿ ಇದು ಸಮುದ್ರವಲ್ಲ.
4. ಆದುದರಿಂದ ಪೂರ್ವ ಕರಾವಳಿಯಲ್ಲಿ ಅಲೆಗಳ ಆರ್ಭಟ ಹೆಚ್ಚಾಗಿರುವುದಿಲ್ಲ.

**14. ಮ್ಯಾಂಗ್ರೋವ್ ಅರಣ್ಯಗಳನ್ನು ಬೆಳೆಸುವುದು ಕಡಲುಕೊರೆತ ತಡೆಯಲು ತುಂಬಾ ಸಹಕಾರಿ. ಈ ಹೇಳಿಕೆಯನ್ನು ವಿಮರ್ಶಿಸಿ.**

ಉತ್ತರ : 1. ಮ್ಯಾಂಗ್ರೋವ್ ಅರಣ್ಯಗಳು ಸಾಮಾನ್ಯವಾಗಿ ನದಿಮುಖಜ ಭೂಮಿಯಲ್ಲಿ ಕಂಡುಬರುತ್ತವೆ.

2. ಬಿಳಿಲುಗಳು ಮ್ಯಾಂಗ್ರೋವ್ ಅರಣ್ಯಗಳ ವಿಶೇಷ ಲಕ್ಷಣವಾಗಿದ್ದು ಈ ಸಸ್ಯಗಳು ಬೃಹದಾಕಾರದ ಅಲೆಗಳನ್ನೂ ಭಾಗಿ ತಡೆದುಕೊಳ್ಳುತ್ತವೆ.
3. ಆದ್ದರಿಂದ ಈ ಅರಣ್ಯಗಳನ್ನು ಬೆಳೆಸುವುದರಿಂದ ತೀರ ಪ್ರದೇಶದಲ್ಲಿ ಕಡಲಕೊರೆತವನ್ನು ತಡೆಗಟ್ಟಬಹುದು.

**15 ಕಡಲ ಕೊರೆತವು ಹೆಚ್ಚಾಗಿ ಕಂಡು ಬರುವ ರಾಜ್ಯಗಳಾವುವು? ಏಕೆ? (ಎಪ್ರಿಲ್ 2016)**

ಉತ್ತರ : ನೈರುತ್ಯ ಮಾನ್ಸೂನ್ ಮಾರುತಗಳ ಆರಂಭದಲ್ಲಿ ಅರಬ್ಬಿ ಸಮುದ್ರದಲ್ಲಿ ಅತಿ ಹೆಚ್ಚು ಎತ್ತರದ ಅಲೆಗಳು ತೀರ ಪ್ರದೇಶಕ್ಕೆ ಅಪ್ಪಳಿಸಿ ಭೂಸವೆತ ಉಂಟು ಮಾಡುತ್ತವೆ. ಇದರಿಂದ ಪಶ್ಚಿಮ ತೀರದ ಪ್ರದೇಶಗಳಾದ ಕೇರಳ, ಕರ್ನಾಟಕ, ಗೋವಾ ರಾಜ್ಯಗಳಲ್ಲಿ ಕಡಲ ಕೊರೆತ ಹೆಚ್ಚು. ಇದಲ್ಲದೆ ತಮಿಳುನಾಡಿನ ಕನ್ಯಾಕುಮಾರಿ, ಮಹಾರಾಷ್ಟ್ರ ಮತ್ತು ಗುಜರಾತಗಳಲ್ಲಿ ಕಡಲ ಕೊರೆತ ಕಂಡು ಬರುತ್ತದೆ.

**16. ಭೂಕಂಪಕ್ಕೆ ಕಾರಣಗಳೇನು?**

ಉತ್ತರ : **ಭೂಕಂಪಕ್ಕೆ ಕಾರಣಗಳು**

1. ನಗರೀಕರಣದಿಂದ ಭೂಮಿಯ ಒಡಲಲ್ಲಿ ಒತ್ತಡ ಹೆಚ್ಚಾಗಿ ಭೂಕಂಪನ ಸಂಭವಿಸುತ್ತದೆ.
2. ಅರಣ್ಯನಾಶ, ಆಣೆಕಟ್ಟುಗಳ ನಿರ್ಮಾಣ, ಗಣಿಗಾರಿಕೆಗಳಿಂದಾಗಿ ಭೂಕಂಪನ ಸಂಭವಿಸುತ್ತದೆ.

**17. ಭೂಕಂಪದ ಪರಿಣಾಮಗಳನ್ನು ತಿಳಿಸಿ.**

ಉತ್ತರ : **ಭೂಕಂಪದ ಪರಿಣಾಮಗಳು**

1. ಸಾರಿಗೆ ಸಂಪರ್ಕಗಳ ಕಡಿತ ಉಂಟಾಗುವದು.
2. ನದಿಯ ದಿಕ್ಕು ಬದಲಾಯಿಸುವದು.
3. ಸಾರ್ವಜನಿಕ ಆಸ್ತಿಗೆ ಹಾನಿಯಾಗುವದು.

**18. ಭೂಕಂಪದ ಅನಾಹುತಗಳಿಂದ ತಪ್ಪಿಸಿಕೊಳ್ಳಲು ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳೇನು?**

**ಉತ್ತರ : ಭೂಕಂಪ ಅನಾಹುತಗಳಿಂದ ತಪ್ಪಿಸಿಕೊಳ್ಳಲು ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳು**

1. ಭೂಕಂಪನ ಹೆಚ್ಚು ಸಂಭವಿಸುವ ವಲಯಗಳಲ್ಲಿ ಬಹು ಅಂತಸ್ತಿನ ಕಟ್ಟಡಗಳನ್ನು ನಿಷೇಧಿಸುವದು.
2. ಕಟ್ಟಡಗಳು ಸ್ಥಿತಿ ಸ್ಥಾಪಕತ್ವ ಗುಣವನ್ನು ಹೊಂದುವಂತೆ ನಿರ್ಮಿಸುವದು.
3. ಭೂಕಂಪನ ಉಂಟಾದಾಗ ಶೀಘ್ರವೇ ವಿದ್ಯುತ್ ಸಂಪರ್ಕವನ್ನು

ಕತ್ತರಿಸುವದು.

4. ಈ ವಲಯಗಳಲ್ಲಿ ಕಟ್ಟಡಗಳನ್ನು ಹಗುರವಾದ ವಸ್ತುಗಳಿಂದ ನಿರ್ಮಿಸುವುದು.
5. ಸಂತ್ರಸ್ತರಿಗೆ ಅಗತ್ಯ ಮೂಲ ಸೌಕರ್ಯಗಳನ್ನು ಒದಗಿಸುವುದು.

**19. ನೈಸರ್ಗಿಕ ವಿಕೋಪಗಳು ಸಂಭವಿಸಿದಾಗ ಕೈಗೊಳ್ಳಬೇಕಾದ ಪರಿಹಾರೋಪಾಯಗಳೇನು?**

ಉತ್ತರ : ನೈಸರ್ಗಿಕ ವಿಕೋಪಗಳು ಸಂಭವಿಸಿದಾಗ ಸಿದ್ದಪಡಿಸಿದ ಆಹಾರ, ಆಹಾರದ ಹಂಚಿಕೆ, ಶುದ್ಧ ಕುಡಿಯುವ ನೀರಿನ ಪೂರೈಕೆ, ಔಷಧಿ ಹಂಚಿಕೆ, ತಾತ್ಕಾಲಿಕ ವಸತಿ ವ್ಯವಸ್ಥೆ, ಅಗತ್ಯ ಸೌಕರ್ಯಗಳನ್ನು ತುರ್ತಾಗಿ ಒದಗಿಸುವಂತಹ ಕ್ರಮಗಳನ್ನು ಕೈಗೊಳ್ಳುವದು.

**20. ನೈಸರ್ಗಿಕ ವಿನಾಶಕಾರಕಗಳನ್ನು ಊಹಿಸುವುದು ಅಸಾಧ್ಯವಾಗಿದೆ. ಏಕೆ?**

ಉತ್ತರ : ಪ್ರಕೃತಿಯಲ್ಲಿ ಸಂಭವಿಸುವ ಹಲವಾರು ಘಟನೆಗಳು ಮಾನವಾತೀತವಾದವು. ಇವುಗಳನ್ನು ತಡೆಗಟ್ಟುವುದು, ಅವುಗಳು ಎಲ್ಲಿ, ಯಾವಾಗ, ಹೇಗೆ ಸಂಭವಿಸುತ್ತವೆಯೆಂಬುದನ್ನು ಕರಾರುವಕ್ಕಾಗಿ ಊಹಿಸುವುದು ಇಂದಿನ ವೈಜ್ಞಾನಿಕ ಕಾಲದಲ್ಲಿಯೂ ಅಸಾಧ್ಯವಾಗಿದೆ.

## ಅಧ್ಯಾಯ 3. ಗ್ರಾಮೀಣಾಭಿವೃದ್ಧಿ

**ಪ್ರಶ್ನೆ 1. ಬಹು ಆಯ್ಕೆ ಪ್ರಶ್ನೆಗಳು.**

1. 'ಭಾರತದ ನೈಜ ಅಭಿವೃದ್ಧಿಯೆಂದರೆ, ಅದು ಗ್ರಾಮಗಳ ಅಭಿವೃದ್ಧಿ' ಎಂದು ಹೇಳಿದವರು –**ಮಹಾತ್ಮ ಗಾಂಧೀಜಿ (ಎಪ್ರಿಲ್ 2015)**
2. 2011ರ ಜನಗಣತಿಯ ಪ್ರಕಾರ ಹಳ್ಳಿಗಳಲ್ಲಿ ವಾಸಿಸುತ್ತಿರುವ ಜನರ ಶೇ. ಪ್ರಮಾಣ – **ಶೇ. 68.84%**
3. ಭಾರತದಲ್ಲಿ ಮೂರು ಹಂತದ ಪಂಚಾಯತಿಗಳು ಅಸ್ತಿತ್ವಕ್ಕೆ ಬಂದದ್ದು ಸಂವಿಧಾನದ ಈ ತಿದ್ದುಪಡಿಯಿಂದ. – **73ನೇ ತಿದ್ದುಪಡಿ**
4. ಭಾರತದಲ್ಲಿ ಪಂಚಾಯತ್ ರಾಜ್ ಕಾಯ್ದೆ ಜಾರಿಗೆ ಬಂದದ್ದು – **ಕ್ರಿಶ 1993**
5. ಗ್ರಾಮಗಳ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸಲು ಈ ಯೋಜನೆ ಸಹಕಾರಿ – **ಸುವರ್ಣ ಗ್ರಾಮೋದಯ ಯೋಜನೆ,**
6. ಗ್ರಾಮೀಣ ಬಡ ಮಹಿಳೆಯರನ್ನು ಸಂಘಟಿಸಲು ಮತ್ತು ಅವರನ್ನು ಆರ್ಥಿಕ ಸ್ವಾವಲಂಬಿಗಳನ್ನಾಗಿ ಮಾಡಲು ಜಾರಿಗೆ ಬಂದ ಯೋಜನೆ – **ಮಹಿಳಾ ಸ್ವಸಹಾಯ ಸಂಘ (ಸ್ತ್ರೀ ಶಕ್ತಿ ಸಂಘ)**

**ಪ್ರಶ್ನೆ 2] ಈ ಕೆಳಗಿನ ಪ್ರಶ್ನೆಗಳಿಗೆ ಒಂದು ವಾಕ್ಯಗಳಲ್ಲಿ ಉತ್ತರಿಸಿರಿ.**

ಇದು ಎಸ್ ಎಸ್ ಪಿ ಡಿ ಎಫ್ ಡಿಜಿಟಲ್ ಗ್ರೂಪ್ ನ ಕೊಡುಗೆ

**1. ಗ್ರಾಮೀಣಾಭಿವೃದ್ಧಿಯ ಅರ್ಥ ತಿಳಿಸಿ.**

ಉತ್ತರ : ಗ್ರಾಮೀಣ ಪ್ರದೇಶದಲ್ಲಿ ಕೃಷಿ & ಕೃಷಿ ಸಂಬಂಧಿಸಿದ ಚಟುವಟಿಕೆಗಳ ಅಭಿವೃದ್ಧಿಯ ಜೊತೆಗೆ ವಸತಿ, ಶಿಕ್ಷಣ, ಆರೋಗ್ಯ, ನೈರ್ಮಲ್ಯ, ಸಾರಿಗೆ, ಸಂಪರ್ಕ ಮುಂತಾದ ಸಾಮಾಜಿಕ ಮತ್ತು ಆರ್ಥಿಕ ಮೂಲಸೌಲಭ್ಯಗಳನ್ನು ಅಭಿವೃದ್ಧಿಪಡಿಸುವದನ್ನು ಗ್ರಾಮೀಣಾಭಿವೃದ್ಧಿ ಎಂದು ಕರೆಯಬಹುದಾಗಿದೆ.

**2. ಅಧಿಕಾರ ವಿಕೇಂದ್ರಿಕರಣ ಎಂದರೇನು?**

ಉತ್ತರ : ಪ್ರತಿಯೊಂದು ಹಳ್ಳಿಯ ಆಡಳಿತದ ಅಧಿಕಾರ ಹಾಗೂ ಹಳ್ಳಿಯ ಅಭಿವೃದ್ಧಿಯ ಜವಾಬ್ದಾರಿಯನ್ನು ಹಳ್ಳಿಯ ಜನರಿಗೆ ವಹಿಸಿಕೊಡುವುದನ್ನು ಅಧಿಕಾರ ವಿಕೇಂದ್ರಿಕರಣ ಎನ್ನುತ್ತಾರೆ.

**3. ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳನ್ನು ಹೆಸರಿಸಿ.**

ಉತ್ತರ : ಸರ್ಕಾರವು 1993ರಲ್ಲಿ ಸಂವಿಧಾನದ 73 ನೇ ತಿದ್ದುಪಡಿಯ ಪ್ರಕಾರ ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದಿವೆ. ಅವುಗಳೆಂದರೆ –

1. ಗ್ರಾಮ ಪಂಚಾಯ್ತಿ, 2. ತಾಲ್ಲೂಕು ಪಂಚಾಯ್ತಿ, 3. ಜಿಲ್ಲಾ ಪಂಚಾಯ್ತಿ.

**4. ಸರಕಾರ ಜಾರಿಗೆ ತಂದ ವಸತಿ ಯೋಜನೆಗಳನ್ನು ಹೆಸರಿಸಿ.**

ಉತ್ತರ : ಸರ್ಕಾರ ಜಾರಿಗೆ ತಂದ ವಸತಿ ಯೋಜನೆಗಳು

1. ಇಂದಿರಾ ಅವಾಸ್ ಯೋಜನೆ, 2. ಅಂಬೇಡ್ಕರ್–ವಾಲ್ಮೀಕಿ ವಸತಿ ಯೋಜನೆ, 3. ಆಶ್ರಯ ಯೋಜನೆ

**5. ಸರ್ಕಾರ ಬಡತನ ನಿವಾರಣೆಗೆ ಜಾರಿಗೊಳಿಸಿರುವ ಪ್ರಮುಖ ಯೋಜನೆಗಳನ್ನು ಹೆಸರಿಸಿ.**

ಉತ್ತರ : ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಮತ್ತು ಸ್ವರ್ಣಜಯಂತಿ ಗ್ರಾಮ ಸ್ವ ಉದ್ಯೋಗ ಯೋಜನೆ.

**6. ಸುವರ್ಣ ಗ್ರಾಮೋದಯ ಯೋಜನೆಯ ಉದ್ದೇಶವೇನು?**

ಉತ್ತರ : ಗ್ರಾಮಗಳ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸುವುದು ಸುವರ್ಣ ಗ್ರಾಮೋದಯ ಯೋಜನೆಯ ಉದ್ದೇಶವಾಗಿದೆ.

**7. ಸ್ತ್ರೀ ಶಕ್ತಿ ಸಂಘಗಳ ಸ್ಥಾಪನೆಯ ಉದ್ದೇಶವೇನು?**

ಉತ್ತರ : ಗ್ರಾಮೀಣ ಬಡ ಮಹಿಳೆಯರನ್ನು ಸಂಘಟಿಸಲು ಮತ್ತು ಅವರನ್ನು ಆರ್ಥಿಕ ಸ್ವಾವಲಂಬಿಗಳನ್ನಾಗಿ ಮಾಡುವ ಉದ್ದೇಶದಿಂದ ಸ್ತ್ರೀ ಶಕ್ತಿ ಸಂಘಗಳ ಸ್ಥಾಪಿಸಲಾಗಿದೆ.

**8. ಮಹಿಳೆಯರ ಯಾವ ದುಡಿಮೆಯನ್ನು ಶ್ರಮ ಎಂದು ಪರಿಗಣಿಸಿಲ್ಲ?**

ಉತ್ತರ : ಮಹಿಳೆಯರು ಮನೆಯಲ್ಲಿ ಮಾಡುವ ಕೂಲಿರಹಿತ ದುಡಿಮೆಯನ್ನು ಶ್ರಮ ಎಂದು ಪರಿಗಣಿಸಿಲ್ಲ.

**ಪ್ರಶ್ನೆ 3] ಈ ಕೆಳಗಿನ ಪ್ರಶ್ನೆಗಳಿಗೆ 4 – 5 ವಾಕ್ಯಗಳಲ್ಲಿ ಉತ್ತರಿಸಿರಿ.**

**1. ಗ್ರಾಮೀಣ ಅಭಿವೃದ್ಧಿಯ ಮಹತ್ವವನ್ನು ವಿವರಿಸಿ.**

**(ಎಪ್ರಿಲ್ 2015) (ಎಪ್ರಿಲ್ 2016)**

ಉತ್ತರ : **ಗ್ರಾಮೀಣಾಭಿವೃದ್ಧಿಯ ಮಹತ್ವ**

1. ಗ್ರಾಮೀಣ ಪ್ರದೇಶದಲ್ಲಿ ಕಂಡುಬರುವ ಬಡತನ, ನಿರುದ್ಯೋಗ, ಅನಕ್ಷರತೆ, ಅನಾರೋಗ್ಯ, ಮೂಲ ಸೌಕರ್ಯಗಳ ಕೊರತೆಯನ್ನು ಹೋಗಲಾಡಿಸುವದು.
2. ಗ್ರಾಮೀಣ ಜನರಿಗೆ ಶಿಕ್ಷಣ, ತರಬೇತಿ, ಆರೋಗ್ಯ, ನೈರ್ಮಲ್ಯ ಮುಂತಾದ ಸೌಲಭ್ಯಗಳನ್ನು ಒದಗಿಸಬೇಕು.
3. ಕೃಷಿಯ ಜೊತೆಗೆ ಪಶುಪಾಲನೆ, ಮೀನುಗಾರಿಕೆ, ರೇಷ್ಮೆ ಕೃಷಿ, ಕೋಳಿಸಾಕಣೆ ಮುಂತಾದ ಕೃಷಿ ಸಂಬಂಧಿ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸಬೇಕು.
4. ವಿದ್ಯುತ್, ನೀರಾವರಿ, ಸಾರಿಗೆ, ಸಂಪರ್ಕ, ಮಾರುಕಟ್ಟೆ ಮುಂತಾದ ಅಗತ್ಯ ಸೌಕರ್ಯಗಳನ್ನು ಗ್ರಾಮೀಣ ಜನರಿಗೆ ಒದಗಿಸಿಕೊಡಬೇಕು.
5. ಸಣ್ಣ ಹಾಗೂ ಗುಡಿ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಿ, ಗ್ರಾಮೀಣ ಅರ್ಥವ್ಯವಸ್ಥೆಯನ್ನು ಬಲಪಡಿಸಬೇಕು.
6. ಕೃಷಿಕಾರ್ಮಿಕರು, ಹಿಂದುಳಿದ ಹಾಗೂ ಬಡ ವರ್ಗದ ಜನರಿಗೆ ನಿರಂತರವಾಗಿ ಉದ್ಯೋಗವಕಾಶಗಳನ್ನು ಒದಗಿಸಿಕೊಡಬೇಕು.

**2. ಗಾಂಧೀಜಿಯವರ ಗ್ರಾಮ ಸ್ವರಾಜ್ಯ ಕಲ್ಪನೆಯನ್ನು ವಿಕೇಂದ್ರಿಕರಣದ ಹಿನ್ನೆಲೆಯಲ್ಲಿ ತಿಳಿಸಿ. (ಜೂನ್ 2015)**

ಉತ್ತರ :

1. ಪ್ರತಿಯೊಂದು ಹಳ್ಳಿಯ ಆಡಳಿತದ ಅಧಿಕಾರ ಹಾಗೂ ಹಳ್ಳಿಯ ಅಭಿವೃದ್ಧಿಯ ಜವಬ್ದಾರಿಯನ್ನು ಹಳ್ಳಿಯ ಜನರಿಗೆ ವಹಿಸಿಕೊಡುವುದನ್ನು ಅಧಿಕಾರ ವಿಕೇಂದ್ರಿಕರಣ ಎನ್ನುತ್ತಾರೆ.
2. ವಿಕೇಂದ್ರಿಕರಣದಿಂದ ಸ್ವಾವಲಂಬಿ, ಸ್ವಯಂಪೂರ್ಣ ಹಾಗೂ ಸಮೃದ್ಧ ಗ್ರಾಮಗಳನ್ನು ಅಭಿವೃದ್ಧಿಪಡಿಸಬಹುದು. ಇದನ್ನೇ ಗಾಂಧೀಜಿಯವರು 'ಗ್ರಾಮ ಸ್ವರಾಜ್ಯ' ಎಂದು ಕರೆದಿದ್ದರು.
3. ವಿಕೇಂದ್ರಿಕರಣವು ಎಲ್ಲಾ ರೀತಿಯ ಶೋಷಣೆಯನ್ನು ತಡೆಯುತ್ತದೆ.
4. ಮಾನವನ ಸ್ವಾತಂತ್ರ್ಯ ಮತ್ತು ಘನತೆಯನ್ನು ಸಂರಕ್ಷಿಸುತ್ತದೆ.
5. ವಿಕೇಂದ್ರಿಕರಣದ ಜಾರಿಗಾಗಿ ಪಂಚಾಯತ್ ರಾಜ್ಯ ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ.
6. 1993ರ ಸಂವಿಧಾನದ 73ನೇ ತಿದ್ದುಪಡಿಯ ಮೂಲಕ ದೇಶದಲ್ಲಿ ದೇಶದಾದ್ಯಂತ ಏಕರೂಪದ ಪಂಚಾಯತ್ ರಾಜ್ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದಿವೆ.
7. ದೇಶದಲ್ಲಿ ಮೂರು ಹಂತದ ಪಂಚಾಯತ್ ರಾಜ್ ಸಂಸ್ಥೆಗಳು ಅಸ್ತಿತ್ವಕ್ಕೆ ಬಂದವು – 1. ಗ್ರಾಮ ಪಂಚಾಯತಿ 2. ತಾಲ್ಲೂಕ ಪಂಚಾಯತಿ. 3. ಜಿಲ್ಲಾ ಪಂಚಾಯತಿ.

**3. ಭಾರತದಲ್ಲಿ ಗ್ರಾಮೀಣ ಆರ್ಥಿಕ ಪರಿಸ್ಥಿತಿ ಹೇಗಿದೆ?**

ಉತ್ತರ : **ಭಾರತದಲ್ಲಿ ಗ್ರಾಮೀಣ ಆರ್ಥಿಕ ಪರಿಸ್ಥಿತಿ –**

1. ಗ್ರಾಮೀಣ ಪ್ರದೇಶಗಳಲ್ಲಿ ಕೃಷಿ ಮತ್ತು ಹೈನುಗಾರಿಕೆ ಸಂಬಂಧಿ ಉದ್ಯೋಗಗಳು ಪ್ರಧಾನವಾಗಿ ಕಂಡುಬರುತ್ತವೆ.
2. ಗ್ರಾಮೀಣ ಪ್ರದೇಶದಲ್ಲಿ ನಿರುದ್ಯೋಗ ಸಮಸ್ಯೆಯು ಹೆಚ್ಚಾಗಿ ಕಂಡುಬರುತ್ತದೆ.
3. ಬಹುತೇಕ ಕೃಷಿಯೊಂದನ್ನೇ ಅವಲಂಬಿಸಿರುವ ಗ್ರಾಮೀಣ ಜನರಲ್ಲಿ ಬಡತನ ಹೆಚ್ಚಾಗಿದೆ.
4. ಆಧುನಿಕತೆಯ ಹೊಡೆತಕ್ಕೆ ಸಿಲುಕಿ ಗ್ರಾಮೀಣ ಗುಡಿಕೈಗಾರಿಕೆಗಳು ನಶಿಸಿಹೋಗಿವೆ.
5. ಸುಮಾರು ಶೇ. 60 ರಷ್ಟು ಜನರು ಪ್ರಾಥಮಿಕ ವಲಯದಲ್ಲಿ ದುಡಿಯುತ್ತಿದ್ದರೂ, ರಾಷ್ಟ್ರೀಯ ಆದಾಯಕ್ಕೆ ಈ ವಲಯದ ಕೊಡುಗೆ ಅತ್ಯಂತ ಕಡಿಮೆಯಿದೆ.
6. ನಗರ ಮತ್ತು ಗ್ರಾಮೀಣ ಪ್ರದೇಶಗಳ ನಡುವಿನ ಅಂತರ ದಿನೇ ದಿನೇ ಹೆಚ್ಚಾಗುತ್ತಿದೆ.
7. ಗ್ರಾಮೀಣ ಪ್ರದೇಶದಲ್ಲಿ ಇಂದಿಗೂ ಶಿಕ್ಷಣ, ಆರೋಗ್ಯ, ನೈರ್ಮಲ್ಯ ಮೊದಲಾದ ಮೂಲ ಸೌಕರ್ಯಗಳ ಕೊರತೆಯನ್ನು ಕಾಣಬಹುದಾಗಿದೆ.

**4. ಮಹಿಳೆಯರ ಅಭಿವೃದ್ಧಿಯಲ್ಲಿ ಸ್ವ ಸಹಾಯ ಸಂಘಗಳ ಪಾತ್ರವನ್ನು ವಿವರಿಸಿ.**

ಉತ್ತರ : ಮಹಿಳೆಯರ ಅಭಿವೃದ್ಧಿಯಲ್ಲಿ ಸ್ವ ಸಹಾಯ ಸಂಘಗಳ ಪಾತ್ರ

1. ಗ್ರಾಮೀಣ ಬಡ ಮಹಿಳೆಯರನ್ನು ಸಂಘಟಿಸುವಲ್ಲಿ ಮತ್ತು ಅವರನ್ನು ಆರ್ಥಿಕ ಸ್ವಾವಲಂಬಿಗಳನ್ನಾಗಿ ಮಾಡುತ್ತವೆ.
2. ಮಹಿಳೆಯರು ಸುಲಭವಾಗಿ ಸಾಲ ಪಡೆದು ಉತ್ಪಾದಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ದುಡಿಯುತ್ತಿದ್ದಾರೆ.
3. ಮಹಿಳೆಯರು ಸಂಘಟಿತ ಪ್ರಯತ್ನದ ಮೂಲಕ ಸಾಮಾಜಿಕ ಅನಿಷ್ಟಗಳ ವಿರುದ್ಧ ಹೋರಾಡುತ್ತಿದ್ದಾರೆ.
4. ದೇಶವನ್ನು ಸ್ವಚ್ಛ ಹಾಗೂ ಪ್ರಗತಿಪರ ಸಮಾಜವನ್ನು ಕಟ್ಟುವಲ್ಲಿ ನೆರವಾಗುತ್ತಿವೆ.

**5. ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರವನ್ನು ಬರೆಯಿರಿ.**

ಉತ್ತರ : **ಗ್ರಾಮೀಣಾಭಿವೃದ್ಧಿಯಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರ –**

1. ಗ್ರಾಮೀಣಾಭಿವೃದ್ಧಿಯಲ್ಲಿ ಗ್ರಾಮಗಳ ಜನರು ಪಾಲ್ಗೊಳ್ಳುವಂತೆ ಮಾಡುವಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳ ಪಾತ್ರ ಹಿರಿದಾದುದು.
2. ಗ್ರಾಮಗಳಿಗೆ ರಸ್ತೆ, ಚರಂಡಿ, ಕುಡಿಯುವ ನೀರು, ಬೀದಿ ದೀಪ, ಶೌಚಾಲಯ, ಶಾಲೆ ಮತ್ತು ಆಸ್ಪತ್ರೆ ಕಟ್ಟಡಗಳು, ಮಾರುಕಟ್ಟೆ ಮುಂತಾದ ಸಮುದಾಯಕ್ಕೆ ಉಪಯೋಗವಾಗುವ ಮೂಲ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಸಾಧ್ಯವಿದೆ.
3. ಗ್ರಾಮೀಣ ಉತ್ಪಾದಕ ಚಟುವಟಿಕೆಗಳಾದ ಕೃಷಿ, ಪಶುಪಾಲನೆ, ಮೀನುಗಾರಿಕೆ, ಸಾಮಾಜಿಕ ಅರಣ್ಯ ಮುಂತಾದವುಗಳನ್ನು ಅಭಿವೃದ್ಧಿಪಡಿಸುವ ಮೂಲಕ ಜನರಿಗೆ ದುಡಿಯುವ ಅವಕಾಶಗಳನ್ನು ಹೆಚ್ಚಿಸಬಹುದಾಗಿದೆ.
4. ಗ್ರಾಮೀಣ ಹಾಗೂ ಗುಡಿ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಬಹುದು.
5. ಆಹಾರ ಸಂಸ್ಕರಣಾ ಘಟಕಗಳ ಸ್ಥಾಪನೆಗೆ ಪ್ರೋತ್ಸಾಹ ನೀಡುವುದು.
6. ಸುವರ್ಣ ಗ್ರಾಮೋದಯ ಯೋಜನೆಯ ಮೂಲಕ ಮೂಲಭೂತ ಸೌಕರ್ಯಗಳನ್ನು ಬಲಪಡಿಸುವುದು.

**6. ಭಾರತದ ಗ್ರಾಮೀಣಾಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರವೇನು?**

ಉತ್ತರ : ಭಾರತದ ಗ್ರಾಮೀಣಾಭಿವೃದ್ಧಿಯಲ್ಲಿ ಮಹಿಳೆಯರ ಪಾತ್ರ.

1. ಕೃಷಿ, ಪಶುಪಾಲನೆ, ಮೀನುಗಾರಿಕೆ, ರೇಷ್ಮೆ ಕೃಷಿ, ತೋಟಗಾರಿಕೆ, ಪುಷ್ಪಕೃಷಿ, ಕೋಳಿಸಾಕಣೆಯ ಕ್ಷೇತ್ರಗಳಲ್ಲಿ ಮಹಿಳೆಯರು ಹೆಚ್ಚಾಗಿ ದುಡಿಯುತ್ತಿದ್ದಾರೆ.
2. ಸರ್ಕಾರಿ ಕಛೇರಿಗಳಲ್ಲಿ ಪುರುಷರಿಗೆ ಸರಿಸಮವಾಗಿ ಸಕಲ ಕೆಲಸ ಕಾರ್ಯಗಳಲ್ಲಿ ದುಡಿಯುತ್ತಿದ್ದಾರೆ.
3. ರಾಜಕೀಯ ಕ್ಷೇತ್ರದಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದು ಮಹಿಳೆಯರು ದೇಶದ ಪ್ರಗತಿಗೆ ಶ್ರಮಿಸುತ್ತಿದ್ದಾರೆ.
4. ಗ್ರಾಮಾಂತರ ಪ್ರದೇಶಗಳಲ್ಲಿ ಸ್ತ್ರೀಶಕ್ತಿ ಸಂಘಗಳು ಮಹಿಳೆಯರನ್ನು ಆರ್ಥಿಕ ಸ್ವಾವಲಂಬಿಗಳನ್ನಾಗಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತವೆ.
5. ಸ್ವಚ್ಛ ಹಾಗೂ ಪ್ರಗತಿಪರ ಸಮಾಜವನ್ನು ಕಟ್ಟುವಲ್ಲಿ ಮಹಿಳೆಯರು ಅತ್ಯಂತ ಮಹತ್ವದ ಪಾತ್ರ ವಹಿಸುತ್ತಾರೆ.

## ವ್ಯವಹಾರ ಅಧ್ಯಯನ – ಅಧ್ಯಾಯ 1. ಬ್ಯಾಂಕು ವ್ಯವಹಾರಗಳು

**ಪ್ರಶ್ನೆ 1] ಬಿಟ್ಟ ಸ್ಥಳಗಳನ್ನು ಸೂಕ್ತ ಸ್ಥಳಗಳಿಂದ ತುಂಬಿರಿ.**

1. ಬ್ಯಾಂಕ್ ಎಂಬ ಪದವು ಇಟಾಲಿಯನ್ ಈ ಪದದಿಂದ ಬಂದಿದೆ. – **ಬ್ಯಾಂಕೋ**
2. ಬ್ಯಾಂಕ್ ಎಂಬ ಪದವು ಫ್ರೆಂಚ್‌ನ ಈ ಪದದಿಂದ ಬಂದಿದೆ. – **ಬ್ಯಾಂಕ್**
3. ಬ್ಯಾಂಕ ಪದದ ಅರ್ಥ – **ಬೆಂಚು ಅಥವಾ ಹಣವನ್ನು ವಿನಿಮಯ ಮಾಡಿಕೊಳ್ಳುವ ಟೇಬಲ್,**
4. ಎಟಿಎಂ ಇದರ ವಿಸ್ತೃತ ರೂಪ : – **Automatic Teller Machine**
5. ಬ್ಯಾಂಕುಗಳ ಬ್ಯಾಂಕ್(ಬ್ಯಾಂಕುಗಳ ತಾಯಿ) – **ರಿಜರ್ವ ಬ್ಯಾಂಕ್** **(ಎಪ್ರಿಲ್ 2015) (ಎಪ್ರಿಲ್ 2016)**
6. ರಾಷ್ಟ್ರೀಕೃತ ಬ್ಯಾಂಕಿಗೆ ಉದಾಹರಣೆ – **ಭಾರತೀಯ ಸ್ಟೇಟ್ ಬ್ಯಾಂಕ್**
7. ರಾಷ್ಟ್ರೀಯ ಉಳಿತಾಯ ಪತ್ರಗಳನ್ನು ಈ ಇಲಾಖೆಯು ನೀಡುತ್ತದೆ.– **ಭಾರತೀಯ ಅಂಚೆ ಇಲಾಖೆ** **(ಜೂನ್ 2015)**
8. ಜನರು ಹಣ ಉಳಿತಾಯ ಮಾಡಲು ಈ ಖಾತೆ ಸಹಾಯ ಮಾಡುತ್ತದೆ. – **ಉಳಿತಾಯ ಖಾತೆ**
9. ಬ್ಯಾಂಕಿನಲ್ಲಿ ದಿನಕ್ಕೆ ಎಷ್ಟು ಬಾರಿಯಾದರೂ ವ್ಯವಹರಿಸಬಹುದಾದ ಖಾತೆ – **ಚಾಲ್ತಿ ಖಾತೆ**
10. ಬ್ಯಾಂಕುಗಳು ಬಡ್ಡಿಯನ್ನು ನೀಡದಿರುವ ಖಾತೆ – **ಚಾಲ್ತಿ ಖಾತೆ**
11. ಬ್ಯಾಂಕುಗಳು ಈ ಖಾತೆಗೆ ಸೇವಾಶುಲ್ಕ ವಸೂಲು ಮಾಡುತ್ತವೆ. – **ಚಾಲ್ತಿ ಖಾತೆ**
12. ಬ್ಯಾಂಕುಗಳು ಈ ಖಾತೆಯ ಠೇವಣಿಗಳಿಗೆ ಬಡ್ಡಿ ಕೊಡುವುದಿಲ್ಲ. – **ಚಾಲ್ತಿ ಖಾತೆ**
13. ಸಾಮಾನ್ಯವಾಗಿ ವ್ಯಾಪಾರಸ್ಥರು, ಉದ್ಯಮಿಗಳು ಈ ಖಾತೆಯನ್ನು ತೆರೆಯುತ್ತಾರೆ. – **ಚಾಲ್ತಿ ಖಾತೆ**
14. ಯಾವ ಖಾತೆಗೆ ಬ್ಯಾಂಕುಗಳು ಓವರ್‌ಡ್ರಾಫ್ಟ್ ಸೌಲಭ್ಯವನ್ನು ನೀಡಿರುತ್ತವೆ.– **ಚಾಲ್ತಿ ಖಾತೆ**
15. ಭವಿಷ್ಯದ ಅವಶ್ಯಕತೆಗಳಿಗೆ ತಿಂಗಳು ತಿಂಗಳು ವ್ಯವಸ್ಥಿತವಾಗಿ ಠೇವಣಿಗಳನ್ನು ಒಂದು ಅವಧಿಗೆ ಜಮಾ ಮಾಡುವ ಖಾತೆ – **ಆವರ್ತ ಠೇವಣಿ ಖಾತೆ**
16. ಮದುವೆ, ಗೃಹ ನಿರ್ಮಾಣ, ಆಸ್ತಿ ಖರೀದಿ ಮೊದಲಾದ ಭವಿಷ್ಯದ ಅವಶ್ಯಕತೆಗಾಗಿ ಈ ಖಾತೆಯನ್ನು ತೆರೆಯಬಹುದು – **ಆವರ್ತ ಠೇವಣಿ ಖಾತೆ,**
17. ಯಾವ ಖಾತೆಯಲ್ಲಿ ಒಂದು ನಿಶ್ಚಿತ ಅವಧಿಗೆ ಠೇವಣಿಗಳನ್ನು ಇಡಲಾಗುತ್ತದೆ.– **ನಿಶ್ಚಿತ ಠೇವಣಿ ಖಾತೆ**
18. ಪ್ರತಿಯೊಬ್ಬರೂ ಬ್ಯಾಂಕ್ ಖಾತೆ ಹೊಂದಲು ಕೇಂದ್ರ ಸರಕಾರ ಜಾರಿಗೆ ತಂದ ಯೋಜನೆ – **ಜನಧನ ಯೋಜನೆ**

**ಪ್ರಶ್ನೆ 2] ಈ ಕೆಳಗಿನ ಪ್ರಶ್ನೆಗಳಿಗೆ 2–3 ಉತ್ತರಿಸಿ.**

**1. ಬ್ಯಾಂಕು ಎಂದರೇನು?**

**ಉತ್ತರ :** ಬ್ಯಾಂಕ್ ಎಂಬ ಪದವು ಹಣಕಾಸಿನ ವ್ಯವಹಾರಗಳಿಗೆ ಸಂಬಂಧಪಟ್ಟಿದೆ. ಇದು ಠೇವಣಿಗಳನ್ನು ಸ್ವೀಕರಿಸಿ, ಆ ಠೇವಣಿಗಳನ್ನು ಸಾಲಗಳ ರೂಪದಲ್ಲಿ ಬೇರೆ ಬೇರೆ ಸೇವೆಗಳಿಗಾಗಿ ಕೊಡುತ್ತದೆ. ಬ್ಯಾಂಕಿನಲ್ಲಿರುವ ಸೇವೆಗಳನ್ನು ಉಪಯೋಗಿಸಿಕೊಳ್ಳುವ ವ್ಯವಹಾರಗಳನ್ನು ಬ್ಯಾಂಕಿಂಗ್ ಎನ್ನುತ್ತೇವೆ.

**2. ಭಾರತೀಯ ಅಂಚೆ ಕಛೇರಿಯು ಯಾವ ರೀತಿ ಬ್ಯಾಂಕಿಂಗ್ ವ್ಯವಹಾರ ಮಾಡುತ್ತದೆ? ಅಥವಾ**

**ಅಂಚೆ ಇಲಾಖೆಯು ಕೈಗೊಂಡಿರುವ ಹಣಕಾಸಿನ ವ್ಯವಹಾರಗಳು ಯಾವುವು?**

**ಉತ್ತರ :** ಅಂಚೆ ಕಛೇರಿಯು ಬ್ಯಾಂಕಿಂಗ್ ವ್ಯವಹಾರಗಳಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಉಳಿತಾಯ ಪತ್ರಗಳು, ಅಂಚೆ ಉಳಿತಾಯ ಖಾತೆಗಳು, ಕಿಸಾನ ವಿಕಾಸ ಪತ್ರಗಳು ಮಾಹೆಯಾನ ತೀರು ಠೇವಣಿಗಳು, ಅಂಚೆ ವಿಮೆ, ನಿವೃತ್ತಿ ವೇತನ & ಹಣವನ್ನು ವರ್ಗಾಯಿಸುವುದು ಮುಂತಾದ ಅನೇಕ ಹಣಕಾಸಿನ ವ್ಯವಹಾರಗಳನ್ನು ಮಾಡುತ್ತದೆ.

**3. ಬ್ಯಾಂಕುಗಳಲ್ಲಿ ತೆರೆಯಬಹುದಾದ ವಿವಿಧ ಖಾತೆಗಳಾವವು?**

ಉತ್ತರ : ಬ್ಯಾಂಕುಗಳಲ್ಲಿ ತೆರೆಯಬಹುದಾದ ವಿವಿಧ ಖಾತೆಗಳು

1. ಉಳಿತಾಯ ಖಾತೆ 2. ಚಾಲ್ತಿ ಖಾತೆ 3. ಆವರ್ತ ಠೇವಣಿ ಖಾತೆ 4. ನಿಶ್ಚಿತ ಠೇವಣಿ ಖಾತೆ.

**4. ಬ್ಯಾಂಕ್ ಖಾತೆಗಳಲ್ಲಿ ಉಳಿತಾಯ ಖಾತೆ ತೆರೆಯುವವರ ಸಂಖ್ಯೆ ಹೇರಳವಾಗಿರುತ್ತದೆ. ಕಾರಣ ಕೊಡಿ.**

**ಉತ್ತರ : ಬ್ಯಾಂಕ್ ಖಾತೆಗಳಲ್ಲಿ ಉಳಿತಾಯ ಖಾತೆ ತೆರೆಯುವವರ ಸಂಖ್ಯೆ ಹೇರಳವಾಗಿರುತ್ತದೆ. ಕಾರಣವೆಂದರೆ –**

1. ಉಳಿತಾಯ ಖಾತೆಯು ಜನರು ಹಣ ಉಳಿತಾಯ ಮಾಡಲು ಸಹಾಯ ಮಾಡುತ್ತದೆ.
2. ಸಾಮಾನ್ಯವಾಗಿ ವೇತನ ಪಡೆಯುವವರು, ವಿದ್ಯಾರ್ಥಿಗಳು, ಹಿರಿಯ ನಾಗರಿಕರು & ಪಿಂಚಣಿದಾರರು ಕೂಡ ಖಾತೆ ತೆರೆಯಲು ಅವಕಾಶವಿದೆ.
3. ಇತ್ತೀಚಿನ ದಿನಗಳಲ್ಲಿ ಸರ್ಕಾರ ನೀಡುವ ಎಲ್ಲಾ ರೀತಿಯ ರಿಯಾಯತಿ, ಧನಸಹಾಯ & ವಿದ್ಯಾರ್ಥಿ ವೇತನ ಮುಂತಾದವು ನೇರವಾಗಿ ಸಿಗುವಂತೆ ಮಾಡಿರುವುದು.
4. ಈ ಕಾರಣಗಳಿಂದ ಬ್ಯಾಂಕ್ ಖಾತೆಗಳಲ್ಲಿ ಉಳಿತಾಯ ಖಾತೆ ತೆರೆಯುವವರ ಸಂಖ್ಯೆ ಹೇರಳವಾಗಿರುತ್ತದೆ.

**ಪ್ರಶ್ನೆ 3] ಈ ಕೆಳಗಿನ ಪ್ರಶ್ನೆಗಳಿಗೆ 4–5 ಉತ್ತರಿಸಿ.**

**1. ಬ್ಯಾಂಕಿನ ವ್ಯವಹಾರಕ್ಕೆ ಸಂಬಂಧಿಸಿದಂತೆ ಗಮನಿಸಬಹುದಾದ ಗುಣಲಕ್ಷಣಗಳನ್ನು ಪಟ್ಟಿಮಾಡಿ.**

**ಉತ್ತರ : ಬ್ಯಾಂಕುಗಳ ಗುಣಲಕ್ಷಣಗಳು**

1. ಬ್ಯಾಂಕುಗಳು ಸಾರ್ವಜನಿಕರ ಹಣದ ವಹಿವಾಟನ್ನು ಮಾಡುತ್ತವೆ.
2. ಬ್ಯಾಂಕ್ ಒಬ್ಬ ವ್ಯಕ್ತಿ, ಒಂದು ಸಂಸ್ಥೆ ಅಥವಾ ಒಂದು ಕಂಪನಿಯಾಗಿರಬಹುದು.
3. ಇದು ಹಣಕಾಸಿವ ವ್ಯವಹಾರ ಮಾಡುವ ಸಂಸ್ಥೆಯಾಗಿದೆ.
4. ಬ್ಯಾಂಕುಗಳು ಸಾರ್ವಜನಿಕರಿಂದ ಠೇವಣಿಗಳನ್ನು ಅಂಗೀಕರಿಸುತ್ತವೆ.
5. ಗ್ರಾಹಕರಿಗೆ ವಿವಿಧ ಉದ್ದೇಶಗಳಿಗಾಗಿ ಹಣವನ್ನು ಸಾಲರೂಪದಲ್ಲಿ ಕೊಡುತ್ತವೆ.
6. ಬ್ಯಾಂಕು ಸೇವೆಯ ಮನೋಭಾವ ಹೊಂದಿದ್ದು ಲಾಭ ಪಡೆಯುವ ಒಂದು ಸಂಸ್ಥೆಯಾಗಿದೆ.
7. ಬ್ಯಾಂಕುಗಳು ನಿರ್ಧಿಷ್ಟವಾದ ಹೆಸರಿನಿಂದ ವ್ಯವಹರಿಸುತ್ತವೆ. ಉದಾ – ಸ್ಟೇಟ್ ಬ್ಯಾಂಕ್ ಆಫ್ ಮೈಸೂರು.

**2. ಬ್ಯಾಂಕ್ ನಿರ್ವಹಿಸುವ ಕಾರ್ಯಗಳಾವವು? (ಜೂನ್ 2015)**

**ಉತ್ತರ : ಬ್ಯಾಂಕ್ ನಿರ್ವಹಿಸುವ ಕಾರ್ಯಗಳು.**

1. ಸಾರ್ವಜನಿಕರಿಂದ ಅಥವಾ ಇತರರಿಂದ ಠೇವಣಿಗಳನ್ನು ಅಂಗೀಕರಿಸುವುದು.
2. ಸಾರ್ವಜನಿಕರಿಗೆ & ಸಂಘ ಸಂಸ್ಥೆಗಳಿಗೆ ಸಾಲಗಳನ್ನು ಕೊಡುವುದು.
3. ಹಣವನ್ನು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವರ್ಗಾಯಿಸುವುದು.
4. ಚೆಕ್ಕು & ಹುಂಡಿಗಳ ಮೇಲೆ ಹಣ ವಸೂಲು ಮಾಡುವುದು.
5. ಸಾಲಪತ್ರಗಳನ್ನು & ಜವಬ್ದಾರಿ ಪತ್ರಗಳನ್ನು ಕೊಡುವುದು.
6. ಭದ್ರತಾ ಕಪಾಟುಗಳನ್ನು ಬಾಡಿಗೆಗೆ ಕೊಡುವುದು.
7. ವಿದೇಶಿ ವಿನಿಮಯ ವ್ಯವಹಾರಗಳನ್ನು ನಿರ್ವಹಿಸುವದು.
8. ಬೆಲೆ ಬಾಳುವ ವಸ್ತುಗಳನ್ನು ತಮ್ಮ ಸುಪರ್ಧಿಗಳಲ್ಲಿ ಭದ್ರವಾಗಿ ಇಟ್ಟುಕೊಳ್ಳುವುದು.

**3. ಬ್ಯಾಂಕ್ ಖಾತೆ ತೆರೆಯುವದರಿಂದಾಗುವ ಅನುಕೂಲಗಳಾವವು? ಎಪ್ರಿಲ್ 2016**

**ಅಥವಾ ಬ್ಯಾಂಕ್ ಖಾತೆ ಅನುಕೂಲಕರವಾದದ್ದು ಹೇಗೆ?**

**ಉತ್ತರ :** ಬ್ಯಾಂಕ್ ಖಾತೆ ತೆರೆಯುವದರಿಂದಾಗುವ ಅನುಕೂಲಗಳು.

1. ಬ್ಯಾಂಕು ಖಾತೆಯು ಹಣದ ಭದ್ರತೆ ಕಾಪಾಡುತ್ತದೆ.
2. ಬ್ಯಾಂಕು ಖಾತೆಯು ಹಣದ ಪಾವತಿಗಳನ್ನು ಮಾಡಲು ಸಹಾಯ

ಮಾಡುತ್ತದೆ.

3. ಬ್ಯಾಂಕು ಖಾತೆಯನ್ನು ಹೊಂದಿರುವವರು ಸಾಲ ಪಡೆಯಲು ಸಾಧ್ಯವಾಗುತ್ತದೆ.
4. ಬ್ಯಾಂಕು ಖಾತೆಯು ವ್ಯವಹಾರಗಳನ್ನು ಸುಗಮವಾಗಿ ನಡೆಸಲು ಸಾಧ್ಯ ಮಾಡಿಕೊಡುತ್ತದೆ.
5. ಬ್ಯಾಂಕು ಖಾತೆದಾರರು ಭದ್ರತಾ ಕಪಾಟುಗಳನ್ನು ಪಡೆಯಬಹುದು.
6. ಬ್ಯಾಂಕು ಖಾತೆಯು ಹಣವನ್ನು ವಸೂಲು ಮಾಡಲು ಸಹಾಯ ಮಾಡುತ್ತದೆ.

**4. ಭಾರತೀಯ ರಿಜರ್ವ ಬ್ಯಾಂಕನ್ನು ಬ್ಯಾಂಕುಗಳ ಬ್ಯಾಂಕು ಎಂದು ಕರೆಯಲು ಕಾರಣಗಳೇನು?**

**ಉತ್ತರ :**

1. ಭಾರತದಲ್ಲಿ ಬ್ಯಾಂಕುಗಳ ಎಲ್ಲಾ ಚಟುವಟಿಕೆಗಳು ರಿಜರ್ವ ಬ್ಯಾಂಕಿನ ಹತೋಟಿಯಲ್ಲಿರುತ್ತವೆ.
2. ರಿಜರ್ವ ಬ್ಯಾಂಕು ದೇಶದ ಕೇಂದ್ರ ಬ್ಯಾಂಕಾಗಿದೆ.
3. ಇದು ಹಣಕಾಸಿನ ಕಾರ್ಯ ನೀತಿಯನ್ನು ರೂಪಿಸುತ್ತದೆ.
4. ಈ ಕಾರ್ಯ ನೀತಿಯನ್ನು ಎಲ್ಲಾ ಬ್ಯಾಂಕುಗಳು ಪಾಲಿಸಬೇಕಾಗುತ್ತದೆ.
5. ರಿಜರ್ವ ಬ್ಯಾಂಕ್ ನೋಟುಗಳ ಚಲಾವಣೆಯ ಏಕಸ್ವಾಮ್ಯವನ್ನು ಹೊಂದಿದೆ.
6. ವಿದೇಶಿ ವಿನಿಮಯ ಸಂಗ್ರಹದ ಮೇಲ್ವಿಚಾರಕನಂತೆ ಕಾರ್ಯ ನಿರ್ವಹಿಸುತ್ತದೆ.
7. ಕೃಷಿಯ ಅಭಿವೃದ್ಧಿಗೆ ಪರೋಕ್ಷವಾಗಿ ಹಣಕಾಸಿನ ಸಹಾಯವನ್ನು ಒದಗಿಸುತ್ತದೆ.

**5. ಉಳಿತಾಯ ಖಾತೆ & ಚಾಲ್ತಿ ಖಾತೆಗಳಿಗಿರುವ ವ್ಯತ್ಯಾಸಗಳೇನು?**

**(ಎಪ್ರಿಲ್ 2015)**

ಉತ್ತರ : **ಉಳಿತಾಯ ಖಾತೆ & ಚಾಲ್ತಿ ಖಾತೆಗಳಿಗಿರುವ ವ್ಯತ್ಯಾಸಗಳು**

| ಉಳಿತಾಯ ಖಾತೆ | ಚಾಲ್ತಿ ಖಾತೆ |
|---|---|
| 1. ಸಾಮಾನ್ಯವಾಗಿ ವೇತನ ಪಡೆಯುವವರು ಅಥವಾ ಒಂದು ನಿಯಮಿತ ಆದಾಯ ಹೊಂದಿರುವ ಜನರಿಂದ ಉಳಿತಾಯ ಖಾತೆ ತೆರೆಯಲ್ಪಡುತ್ತದೆ. | 1. ಚಾಲ್ತಿ ಖಾತೆಯನ್ನು ಸಾಮಾನ್ಯವಾಗಿ ಹೆಚ್ಚು ಬ್ಯಾಂಕು ವಹಿವಾಟು ನಡೆಸುವ ವ್ಯಾಪಾರಸ್ಥರು, ವಾಣಿಜ್ಯ ಮತ್ತು ಔದ್ಯೋಗಿಕ ಸಂಸ್ಥೆಯವರು ತೆರೆಯುತ್ತಾರೆ. |
| 2. ಈ ಖಾತೆಯು ಜನರು ಹಣ ಉಳಿತಾಯ ಮಾಡಲು ಸಹಾಯ ಮಾಡುತ್ತದೆ. | 2. ಇಲ್ಲಿ ಠೇವಣಿಗಳ ಮೂಲಕ ಮತ್ತು ಬೇಡಿಕೆ ಠೇವಣಿಗಳ ಮೂಲಕ ಹಣವನ್ನು ಹಿಂಪಡೆಯಲು ಸಾಧ್ಯವಾಗುತ್ತದೆ. |
| 3. ಉಳಿತಾಯ ಖಾತೆಯ ಗರಿಷ್ಠ ಮೊತ್ತಕ್ಕೆ ಪರಿಮಿತಿ ಇರುವುದಿಲ್ಲ. | 3. ಹಣವನ್ನು ದಿನಕ್ಕೆ ಎಷ್ಟು ಬಾರಿಯಾದರೂ ತುಂಬಬಹುದು. ಮತ್ತು ಎಷ್ಟು ಬಾರಿಯಾದರೂ ಹಿಂಪಡೆಯಬಹುದು. |
| 4. ಈ ಖಾತೆಗೆ ಬ್ಯಾಂಕುಗಳು ಬಡ್ಡಿಯನ್ನು ಕೊಡುತ್ತವೆ. | 4. ಈ ಖಾತೆಯ ಠೇವಣಿಗಳಿಗೆ ಬ್ಯಾಂಕುಗಳು ಬಡ್ಡಿಯನ್ನು ಕೊಡುವುದಿಲ್ಲ. |
| 5. ಬ್ಯಾಂಕಿನಿಂದ ಹಣ ಹಿಂದಕ್ಕೆ ಪಡೆಯಲು ಚೆಕ್ಕು ಪುಸ್ತಕ ಅಥವಾ ಹಣ ಹಿಂದಕ್ಕೆ ಪಡೆಯುವ ಚೀಟಿಯ ಮೂಲಕ ಸಾಧ್ಯವಿದೆ. | 5. ಬ್ಯಾಂಕುಗಳು ತಮ್ಮ ಸೇವೆಗೆ ಸೇವಾ ಶುಲ್ಕ ವಸೂಲು ಮಾಡುತ್ತದೆ. |

ಡಿಜಿಟಲ್ ಗ್ರೂಪ್ ನ ಕೊಡುಗೆ

**6. ಬ್ಯಾಂಕಿನಲ್ಲಿ ಖಾತೆ ತೆರೆಯಲು ಅನುಸರಿಸಬೇಕಾದ ಕ್ರಮಗಳನ್ನು ತಿಳಿಸಿ.**

ಉತ್ತರ : ಬ್ಯಾಂಕಿನಲ್ಲಿ ಖಾತೆ ತೆರೆಯಲು ಅನುಸರಿಸಬೇಕಾದ ಕ್ರಮಗಳು

1. ಯಾವ ವಿಧವಾದ ಬ್ಯಾಂಕ್ ಖಾತೆಯನ್ನು ತೆಗೆಯಬೇಕೆಂಬುದನ್ನು ನಿರ್ಧರಿಸುವುದು.
2. ನಿಮಗೆ ಅನುಕೂಲವಾದ ಬ್ಯಾಂಕಿನ ಅಧಿಕಾರಿಯನ್ನು ಸಂಪರ್ಕಿಸುವುದು.
3. ಪ್ರಸ್ತಾವನೆ ಅರ್ಜಿ–ಖಾತೆ ತೆರೆಯುವ ಲೆಕ್ಕದ ನಮೂನೆಯನ್ನು ತುಂಬುವುದು.
4. ಪರಿಚಿತರ ಉಲ್ಲೇಖನವನ್ನು ಕೊಡುವುದು.
5. ಬ್ಯಾಂಕ್ ಖಾತೆಯನ್ನು ತೆಗೆಯುವ ನಮೂನೆಯನ್ನು ಬ್ಯಾಂಕಿಗೆ ಒಪ್ಪಿಸುವುದು.
6. ಬ್ಯಾಂಕು ಅಧಿಕಾರಿಯ ಒಪ್ಪಿಗೆ ಪಡೆಯುವುದು.
7. ಬ್ಯಾಂಕ್ ಅಧಿಕಾರಿಯ ಒಪ್ಪಿಗೆಯ ನಂತರ ಪ್ರಾರಂಭಿಕ ಠೇವಣಿಯನ್ನು ತುಂಬುವುದು.

**7. ಬ್ಯಾಂಕು ಸಲ್ಲಿಸುವ ಸೇವೆಗಳಾವವು?**

**ಉತ್ತರ :** ಬ್ಯಾಂಕು ಸಲ್ಲಿಸುವ ಸೇವೆಗಳು.

1. ಜಮಾ ಕಾರ್ಡು (ಅಡಿಜಜುಣ ಛಿಚಿಡಿಛ )ಗಳನ್ನು ಕೊಡುವುದು.
2. ಖಾಸಗಿ ಸಾಲಗಳನ್ನು ಕೊಡುವುದು.
3. ಪರಸ್ಪರ ನಿಧಿಗಳನ್ನು ನಿರ್ವಹಿಸುವುದು.
4. ವ್ಯಾಪಾರಕ್ಕೆ ಬೇಕಾದ ಸಾಲಗಳನ್ನು ಕೊಡುವುದು.
5. ಮನೆ ಕಟ್ಟಲು ಅಥವಾ ವಾಹನ ಖರೀದಿಸಲು ಸಾಲ ಕೊಡುವುದು.
6. ಭದ್ರತಾ ಅಥವಾ ರಕ್ಷಣಾ ಕಪಾಟುಗಳನ್ನು ಕೊಡುವುದು.
7. ಸಹಿಗಳಿಗೆ ಜವಬ್ದಾರಿ ಹಾಕುವುದು.

**8. ಭಾರತದಲ್ಲಿರುವ ಅಂಚೆ ಬ್ಯಾಂಕಿನ ಬಗ್ಗೆ ವಿವರಿಸಿ. ಅಥವಾ ಭಾರತದ ಗ್ರಾಮೀಣ ಪ್ರದೇಶಗಳಿ ಅಂಚೆ ಬ್ಯಾಂಕಿಂಗ್ ವರವಾಗಿದೆ ಹೇಗೆ? ವಿವರಿಸಿ**

ಉತ್ತರ : 1. ಭಾರತೀಯ ಅಂಚೆ ಇಲಾಖೆಯು ,ಭಾರತೀಯ ಅಂಚೆ ಬ್ಯಾಂಕ್'ನ ಜಾವನ್ನು ಅಂಚೆ ಕಛೇರಿಗಳೊಡನೆ ದೇಶದಾದ್ಯಂತ ಪ್ರಾರಂಭ ಮಾಡಲು ಯೋಜನೆಯನ್ನು ರೂಪಿಸಿದೆ.

2. ಇವುಗಳಲ್ಲಿ ಶೇ90 ರಷ್ಟು ಗ್ರಾಮಾಂತರ ಮತ್ತು ಸಣ್ಣ ನಗರಗಳಲ್ಲಿ ಪ್ರಾರಂಭಿಸಲು ನಿರ್ಧರಿಸಿದೆ.

3. ಅಂಚೆ ಇಲಾಖೆಯು ಈಗಾಗಲೇ ರಾಷ್ಟ್ರೀಯ ಉಳಿತಾಯ ಪತ್ರ, ಕಿಸಾನ್ ವಿಕಾಸ ಪತ್ರ, ಆವರ್ತ ಠೇವಣಿಗಳು, ಅಂಚೆ ವಿಮೆ, ನಿವೃತ್ತಿ ವೇತನ, ಹಣವನ್ನು ವರ್ಗಾಯಿಸುವುದು ಮುಂತಾದ ಅನೇಕ ಹಣಕಾಸಿನ ವ್ಯವಹಾರಗಳನ್ನು ಕೈಗೊಂಡಿದೆ.

4. ಅಂಚೆ ಇಲಾಖೆಯು ಒಂದು ಸಾವಿರ ಕೋಟಿ ರೂಪಾಯಿಗಳಷ್ಟು ಬಂಡವಾಳವನ್ನು ಬ್ಯಾಂಕು ವ್ಯವಹಾರದಲ್ಲಿ ತೊಡಗಿಸಲು ಯೋಜನೆ ಹಾಕಿಕೊಂಡಿದೆ.